ಚಿಂತನ ಬಯಲು

ಸಂಪುಟ 5 ಸಂಚಿಕೆ 1
ಜುಲೈ–ಸಪ್ಟಂಬರ್ 2016

ತ್ರೈಮಾಸಿಕ
ISSN 2278-2192

Volume 5, Issue 1, July - September 2016

ವಾರ್ಷಿಕ ಚಂದಾ : ರೂಪಾಯಿ ಇನ್ನೂರು
(ಅಂಚೆ ವೆಚ್ಚ ಸೇರಿ)
ಮೂರು ವರ್ಷಗಳಿಗೆ : ರೂಪಾಯಿ ಆರುನೂರು
ಐದು ವರ್ಷಗಳಿಗೆ : ರೂಪಾಯಿ ಒಂದು ಸಾವಿರ
ಆಜೀವ (ಪೋಷಕ) ಚಂದಾ : ರೂಪಾಯಿ ಐದು ಸಾವಿರ
ಮಹಾಪೋಷಕ ಚಂದಾ : ರೂಪಾಯಿ ಹತ್ತು ಸಾವಿರ
ಬಿಡಿ ಪ್ರತಿ : ರೂಪಾಯಿ ಐವತ್ತು

ದಯವಿಟ್ಟು ಡಿ.ಡಿ./ಎಂ.ಓ.ಗಳನ್ನು 'ಚಿಂತನ ಬಯಲು' ಹೆಸರಿನಲ್ಲಿ ಪತ್ರಿಕೆಯ ವಿಳಾಸಕ್ಕೆ ಕಳುಹಿಸಿ. ಚೆಕ್/ಡಿ.ಡಿ. ಮಂಗಳೂರಿನಲ್ಲಿ ಸಂದಾಯವಾಗುವಂತಿರಲಿ. ದಯವಿಟ್ಟು ಹೊರ ಊರಿನ ಚೆಕ್ ಕಳುಹಿಸಬೇಡಿ. ಎಲ್ಲಕ್ಕಿಂತ ಸುಲಭವಾಗಿ ಈ ಕೆಳಗಿನ ಖಾತೆಗೆ ನೇರವಾಗಿ ಸಂದಾಯ ಮಾಡಿ ಪೂರ್ಣ ವಿಳಾಸ ಹಾಗೂ ದೂರವಾಣಿ ಇತ್ಯಾದಿ ವಿವರಗಳೊಂದಿಗೆ ಸಂದಾಯದ ವಿವರಗಳನ್ನು ಬರೆಯಬಹುದು ಅಥವಾ ಮಿಂಚಂಚೆ ಮೂಲಕ ತಿಳಿಸಬಹುದು. ಬ್ಯಾಂಕ್ ಚಾರ್ಜನ್ನು ಚಂದಾದಾರರೇ ದಯವಿಟ್ಟು ಭರಿಸಬೇಕು.

ಕರ್ಣಾಟಕ ಬ್ಯಾಂಕ್
ಬಂಟ್ವಾಳ ಮೂಡ ಶಾಖೆಯಲ್ಲಿ
ಚಿಂತನ ಬಯಲು ಹೆಸರಿನಲ್ಲಿರುವ

ಕರೆಂಟ್ ಅಕೌಂಟ್ ಸಂಖ್ಯೆ : 0712000100041401

IFSC: KARB 0000071

ಸುಲಭ ಬ್ಯಾಂಕಿಂಗ್ ಸೇವೆಗಾಗಿ ನಿಮ್ಮ ಹತ್ತಿರದ ಶಾಖೆಯನ್ನು ಸಂಪರ್ಕಿಸಿ ಅಥವಾ 1800 425 1444ಗೆ ಕರೆ ಮಾಡಿರಿ

ಕರ್ಣಾಟಕ ಬ್ಯಾಂಕ್ ಲಿ.
ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.
ನೋಂದಾಯಿತ ಹಾಗೂ ಪ್ರಧಾನ ಕಚೇರಿ: ಮಂಗಳೂರು - 575 002
ಇಮೇಲ್: info@ktkbank.com ವೆಬ್‌ಸೈಟ್: www.karnatakabank.com

ಚಿಂತನ ಬಯಲು

ಸಂಪಾದಕಿ
ರೇಶ್ಮಾ ಜಿ. ಭಟ್

ಸಂಪಾದಕೀಯ ಸಲಹೆ
ಡಾ. ಅಜಕ್ಕಳ ಗಿರೀಶ ಭಟ್
ಡಾ. ಶ್ರೀಧರ್ ಎಚ್.ಜಿ.
ಡಾ. ವರದರಾಜ ಚಂದ್ರಗಿರಿ
ಡಾ. ಜಿ.ಬಿ. ಹರೀಶ್
ಶ್ರೀ ಎಂ.ಎ. ಸುಬ್ರಹ್ಮಣ್ಯ

ಚಿಂತನ ಬಯಲು
ನಂ. 15–109, ಮೊಡಂಕಾಪು ಅಂಚೆ
ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574 219

CHINTHANA BAYALU
Kannada Quarterly; A Peer Reviewed Journal
Volume 5, Issue 1, July-September 2016

Edited, Published, Printed & Owned by
Reshma G. Bhat
Door No. 15-109, Modankapu Post
Bantwal Taluk, Dakshina Kannada - 574 219
Karnataka
Phone : 9449772651
Email : chinthanabayalu@gmail.com

© : Reserved

Price : Rs. 50

Pages : 64

ಮುಖಪುಟ ಚಿತ್ರ : ಬಿಸಿಲೆ ಘಾಟಿಯಿಂದ ನೋಟ
Cover Photo by : **Atheetha Brahma**

Cover Design : **Kallur Nagesh**

Designed & Printed at :

Aakrithi Prints
Maximus Complex
Light House Hill Road
Mangaluru - 575 001
Tel. : 0824 2443002

ಸೂಚನೆ : ಈ ಸಂಚಿಕೆಯಲ್ಲಿ ಪ್ರಕಟವಾದ ಲೇಖನಗಳ ಹಕ್ಕು ಆಯಾ ಲೇಖಕರದ್ದಾಗಿರುತ್ತದೆ. ಇಲ್ಲಿಯ ಲೇಖನಗಳಲ್ಲಿ ವ್ಯಕ್ತವಾಗುವ ಅಭಿಪ್ರಾಯಗಳು ಲೇಖಕರದ್ದೇ ಆಗಿರುತ್ತವೆ. ಅವುಗಳು ಪತ್ರಿಕೆಯ ಅಭಿಪ್ರಾಯಗಳಾಗಿರಬೇಕೆಂದೇನಿಲ್ಲ.

ಪುಟನೋಟ

1. ಪೌರಾತ್ಯವಾದ ಹಾಗೂ ಆರ್ಯರ
ಆಕ್ರಮಣ ಸಿದ್ಧಾಂತದ ಒಗಟುಗಳು

❖ ಸಂತೋಷ್ ಕುಮಾರ್ ಪಿ.ಕೆ/ 5

2. ಸನ್ಮತಿ ನೀಡುವ
'ಈಶ್ವರ ಅಲ್ಲಾ ತೇರೋ ನಾಮ್'

❖ ಡಾ. ಮಾಧವ ಪೆರಾಜೆ / 21

3. ತುಳುನಾಡಿನ ಇತಿಹಾಸ ಹೇಳುವ
ಸತ್ಯಗಳು

❖ ಬಾರ್ಕೂರು ಉದಯ 29

4. ಜಿ.ಎಸ್. ಆಮೂರರ ಒಮ್ಮುಖ:
ಬೇಂದ್ರೆ ವಾಙ್ಮಯದಲ್ಲಿ ತತ್ವ ಮತ್ತು
ಕಾವ್ಯ ಹಾಗೂ ಅನುವಾದ

❖ ಎನ್.ಎಸ್. ಗುಂಡೂರ / 37

5. ಗಾಯಕನ, ವಾದಕನ ಮತ್ತು
ನರ್ತಕನ ಗಾನಾನುಸಂಧಾನ

❖ ಕೃಷ್ಣಪ್ರಕಾಶ ಉಳಿತ್ತಾಯ / 40

6. ಕನ್ನಡ ನಿಘಂಟುಗಳ ವರ್ಗೀಕರಣದತ್ತ

❖ ಡಾ ಬಿ ವಿ ಮಹೀದಾಸ / 44

7. ವಿದ್ವತ್ ವಲಯದ 'ವ್ಯಾಧಿ'
ಬಡತನ, ಹಿಂದುಳಿದಿರುವಿಕೆ ಇತ್ಯಾದಿ.

❖ **ಎಚ್. ಆನಂದರಾಮ ಶಾಸ್ತ್ರೀ / 58**

ಸಂಪಾದಕೀಯ

ಜ್ಞಾನದ ಸೃಷ್ಟಿ ಮತ್ತು ಪ್ರಸಾರಕ್ಕೆ ಅನುಕೂಲವಾಗುವಂತೆ ಕನ್ನಡ ಭಾಷೆ ಸಶಕ್ತವಾಗಿ ಬಳಕೆಯಾಗಬೇಕೆಂದು ನಾವೆಲ್ಲ ಹೇಳುತ್ತ ಬಂದಿದ್ದೇವೆ. ಪ್ರಾಥಮಿಕ ಶಿಕ್ಷಣ ಮಾಧ್ಯಮ ಕನ್ನಡವಿರಬೇಕೆಂದು ಎಲ್ಲರೂ ಆಗ್ರಹಿಸುತ್ತಿರುವ ಹೊತ್ತಿನಲ್ಲಿ ನಾವು ಅಷ್ಟಾಗಿ ಗಮನ ನೀಡದ ಇನ್ನೊಂದು ವಿದ್ಯಮಾನವಿದೆ. ಈಚಿನ ವರ್ಷಗಳಲ್ಲಿ ಬಿ.ಎ. ಹಾಗೂ ಇತಿಹಾಸ, ರಾಜ್ಯಶಾಸ್ತ್ರ, ಸಮಾಜಶಾಸ್ತ್ರ ಮುಂತಾದ ವಿಷಯಗಳಲ್ಲಿ ಎಂ.ಎ. ಅಧ್ಯಯನ ಮಾಡುತ್ತಿರುವ ವಿದ್ಯಾರ್ಥಿಗಳು ಬಹುದೊಡ್ಡ ಪ್ರಮಾಣದಲ್ಲಿ ಕನ್ನಡವನ್ನೇ ಮಾಧ್ಯಮವನ್ನಾಗಿ ಮಾಡಿಕೊಂಡಿದ್ದಾರೆ. ಅವರು ಹೆಚ್ಚಾಗಿ ಓದುವುದು ಕನ್ನಡದಲ್ಲಿರುವ ಪಠ್ಯ ಅಥವಾ ಆಕರಗಳನ್ನು. ಇಲ್ಲಿಯೇ ಗಮನಿಸಬೇಕಾದ ಇನ್ನೊಂದು ಸಂಗತಿಯೆಂದರೆ ಸಮಾಜಕ್ಕೆ ಸಂಬಂಧಿಸಿದ ವಿಷಯಗಳನ್ನು ಕನ್ನಡದಲ್ಲಿ ಪ್ರಧಾನವಾಗಿ ಚರ್ಚಿಸುವ ವಿದ್ವಾಂಸರು ಯಾರು ಎಂದು ಕೇಳಿಕೊಂಡಾಗ ಸಾಹಿತಿಗಳೇ ಎದ್ದು ಕಾಣುತ್ತಾರೆ. ನಮ್ಮ ವಿಶ್ವವಿದ್ಯಾನಿಲಯಗಳು ಯಾಕೆ ಒಳ್ಳೆಯ ಸಮಾಜ ಶಾಸ್ತ್ರಜ್ಞರನ್ನು, ಇತಿಹಾಸಕಾರರನ್ನು ತಯಾರಿಸುವಲ್ಲಿ ನಿರೀಕ್ಷಿತ ಮಟ್ಟದ ಯಶಸ್ಸು ಕಂಡಿಲ್ಲ? ಅಥವಾ ವಿಶ್ವವಿದ್ಯಾನಿಲಯಗಳು ಅಂಥ ಪ್ರಯತ್ನಕ್ಕೆ ಹೊರಟಾಗ ಸಾಹಿತಿಗಳೇ ಅದಕ್ಕೆ ಅಡ್ಡಗಾಲು ಹಾಕುತ್ತಾರೆಯೆ?

– ಸಂ.

ಪೌರಾತ್ಯವಾದ ಹಾಗೂ ಆರ್ಯರ ಆಕ್ರಮಣ ಸಿದ್ಧಾಂತದ ಒಗಟುಗಳು

ಮೂಲ: ಮರಿಯಾನ್ ಕೆಪ್ಪೆನ್ಸ್ ಮತ್ತು ಜೇಕಬ್ ಡಿ ರೂವರ್
ಅನುವಾದ: ಸಂತೋಷ್ ಕುಮಾರ್ ಪಿ.ಕೆ

ಸಾರಾಂಶ

ಆರ್ಯರ ಆಕ್ರಮಣ ಸಿದ್ಧಾಂತವು ಸಾಮಾನ್ಯವಾಗಿ ಇಂಡೋ-ಯುರೋಪಿಯನ್ ಹಾಗೂ ದ್ರಾವಿಡ ಭಾಷೆಗಳ ಅನ್ವೇಷಣೆಯಲ್ಲಿ ಗುರುತಿಸಿಕೊಂಡಿದೆ. ಏನೇ ಆದರೂ, ಈ ಅನ್ವೇಷಣೆಗಳು ಆರ್ಯರ ಆಕ್ರಮಣ ಸಿದ್ಧಾಂತದ ಉಗಮವನ್ನು ವಿವರಿಸುವುದಿಲ್ಲ, ಏಕೆಂದರೆ ಈ ಸಿದ್ಧಾಂತದ ಆಧಾರವು ಭಾಷಾಶಾಸ್ತ್ರದ ಸಂಶೋಧನೆಯಿಂದ ಕೂಡಿರುವಂಥ ದ್ದಾಗಿದೆ. ಪ್ರಸ್ತುತ ಲೇಖನದಲ್ಲಿ ಪೌರಾತ್ಯವಾದವು ನಿರ್ದಿಷ್ಟ ಕ್ರಮದಲ್ಲಿ ಅಧ್ಯಯನ ನಡೆಸುವ ಬೌದ್ಧಿಕ ಇತಿಹಾಸವನ್ನು ನಿದರ್ಶಿಸುವ ಮೂಲಕ, ಇಂತಹ ಸಂಶೋಧನೆಗಳಲ್ಲಿ ರೂಪುಗೊಂಡಿರುವ ಈ ಸಿದ್ಧಾಂತವು ಅಸ್ತಿತ್ವಕ್ಕೆ ಬಂದಿರಬಹುದಾದ ಸಾಧ್ಯತೆಯನ್ನು ಮತ್ತು ಅದಕ್ಕೆ ನೀಡಲಾಗಿರುವ ಬದಲೀ ಚಿತ್ರಣಗಳನ್ನು ಅರ್ಥೈಸಿಕೊಳ್ಳಲು ಪ್ರಯತ್ನಿಸಲಾಗುವುದು. ಪೌರಾತ್ಯ ಸಂಕಥನವನ್ನು ಭಾರತದ ಕುರಿತ ಪಾಶ್ಚಾತ್ಯ ಸಾಂಸ್ಕೃತಿಕ ಅನುಭವದ ಪ್ರತಿಫಲನ ಎಂಬ ದೃಷ್ಟಿಕೋನದಿಂದ ನೋಡಲಾಗುತ್ತದೆ. ಈ ಆಯಾಮವು ಭಾರತದ ಕುರಿತ ಪೌರಾತ್ಯ ಸಂಕಥನದಲ್ಲಿನ ಎರಡು ಅಂಶಗಳ ಆಧಾರದ ಮೇಲೆ ಆರ್ಯರ ಆಕ್ರಮಣ ಸಿದ್ಧಾಂತ ಉಗಮವಾಗಿದೆ ಎಂಬುದಕ್ಕೆ ಕೊಂಡೊಯ್ಯುತ್ತದೆ: 'ಹಿಂದೂ ರಿಲಿಜನ್' ಹಾಗೂ ಅದರ 'ಜಾತಿವ್ಯವಸ್ಥೆ'. ಈ ಎರಡೂ ಅಂಶಗಳು ಹಾಗೂ ಆರ್ಯರ ಆಕ್ರಮಣ ಸಿದ್ಧಾಂತ ಯುರೋಪಿನ ಮನಸ್ಸುಗಳಿಗೆ ಸುಸಂಬದ್ಧವಾಗಿ ಕಂಡಿವೆ, ಏಕೆಂದರೆ ಅವುಗಳು ಯೂರೋಪಿನ ಸಂಸ್ಕೃತಿ ಹಾಗೂ ಅದರ ಬೌದ್ಧಿಕ ಚರ್ಚೆಗಳ ಪ್ರತಿಬಿಂಬದಂತೆ ಕಂಡು ಬಂದಿವೆ, ಹಾಗೂ ಅವುಗಳೇ ಭಾರತದ ಕುರಿತ ಯುರೋಪಿಯನ್ನರ ಅನುಭವವನ್ನು ರಚಿಸಿವೆ.

ಪ್ರಾಯಶಃ ಇತ್ತೀಚೆಗೆ ಭಾರತದ ಚರಿತ್ರೆಯನ್ನು ಬರೆಯುವ ವಿಧಾನದಲ್ಲಿ ಬಹು ವಿವಾದಾತ್ಮಕವಾಗಿ ಬೆಳಕಿಗೆ ಬಂದಿರುವುದು ಈ ಆರ್ಯರ ಆಕ್ರಮಣ ಸಿದ್ಧಾಂತವಾಗಿದೆ. ಇದರ ಕುರಿತು ಸಾಂಪ್ರದಾಯಿಕ ಪಠ್ಯಪುಸ್ತಕಗಳಲ್ಲಿ, ಸುಮಾರು ಕ್ರಿ.ಪೂ 1500 (ಅಥವಾ ಅದಕ್ಕೂ ಹಿಂದೆ)ರಲ್ಲಿ ಸಂಸ್ಕೃತ ಮಾತನಾಡುವ ಜನರು ಭಾರತಕ್ಕೆ ಆಗಮಿಸಿ ಅವರ ಭಾಷೆಯನ್ನು, ರಿಲಿಜನ್‌ನನ್ನು ಹಾಗೂ ಸಾಮಾಜಿಕ ರಚನೆಯನ್ನು ಹರಡಿದರು ಎಂದು ಹೇಳಲಾಗುತ್ತದೆ. ಅತ್ಯಾಧುನಿಕ ಆವೃತಿಗಳು ಹೇಳುವಂತೆ ಕೆಲವು ಗುಂಪುಗಳು ಕ್ರಮೇಣವಾಗಿ ಭಾರತದ ಉಪಖಂಡಕ್ಕೆ ವಲಸೆ ಬಂದು ಇಂಡೋ-ಆರ್ಯನ್ ಭಾಷೆ ಮತ್ತು ನಾಗರೀಕತೆ ಯನ್ನು ತಂದರು.[1] ಈ ಚರ್ಚೆಯ ಮತ್ತೊಂದು ಮಗ್ಗಲಲ್ಲಿ, ಆರ್ಯ ಜನಾಂಗ, ಅವರ ರಿಲಿಜನ್‌ಗಳು ಭಾರತದ್ದೇ ಆಗಿದ್ದು ಅವು ವಲಸೆಯಿಂದಾಗಲಿ ಆಕ್ರಮಣದಿಂದಾಗಿ ಬಂದಿರು ವಂತದ್ದಲ್ಲ[2] ಎನ್ನುವ ವಾದವೂ ಇದೆ. ಈ ಚರ್ಚೆಯು ಇಂದು ಅತಿಯಾಗಿ ರಾಜಕೀಯ ಕರಣಗೊಂಡಿದೆ. ಇಂಡೋ-ಆರ್ಯನ್ ನಾಗರೀಕತೆಯು ಭಾರತದ್ದು ಎಂದು ವಾದಿಸುವ ಪಕ್ಷವು ಹಿಂದೂ ರಾಷ್ಟ್ರೀಯತೆಯ ಅಜೆಂಡಾವನ್ನು ಹೊಂದಿದ್ದು ಆರ್ಯರ ಆಕ್ರಮಣ

ಸಿದ್ಧಾಂತವು ಯುರೋಪಿನ ತಪ್ಪುಕಲ್ಪನೆ ಮತ್ತು ವಸಾಹತುಶಾಹಿಯ ಹೇರಿಕೆ ಎಂಬಂತಹ ವಾದಗಳನ್ನು ತಿರಸ್ಕರಿಸುತ್ತದೆ. ಹಾಗೆ ಮತ್ತೊಂದು ಬದಿಯಲ್ಲಿ, ಇದರ ವಿರೋಧಿಗಳು ಹಿಂದೂ ರಾಷ್ಟ್ರೀಯವಾದಿಗಳ ಇತಿಹಾಸದ ತಪ್ಪುತಿಳುವಳಿಕೆಯನ್ನು ತಿರಸ್ಕರಿಸಿ, ಪ್ರಾಕ್ತನ ಶಾಸ್ತ್ರ, ಭಾಷಾಶಾಸ್ತ್ರ ಹಾಗೂ ಇತರ ವೈಜ್ಞಾನಿಕ ಸಾಕ್ಷ್ಯಗಳ ಮೂಲಕ ದೊರಕುವ ಬೆಂಬಲಗಳ ಮೂಲಕ ಇಂಡೋ–ಆರ್ಯನ್ ವಲಸೆ ಸಿದ್ಧಾಂತವನ್ನು ಉಳಿಸಿಕೊಳ್ಳಲು ಪ್ರಯತ್ನಿಸುತ್ತಾರೆ.

ಇವುಗಳಲ್ಲಿ ಯಾವುದಾದರೂ ಒಂದು ಪಕ್ಷವನ್ನು ಸಮರ್ಥಿಸುವ ಅಥವಾ ಆರ್ಯರ ಆಕ್ರಮಣ ಸಿದ್ಧಾಂತಕ್ಕೆ ಮತ್ತೊಂದು ಹೊಸ ಧ್ವನಿ ನೀಡುವ ಕಾರ್ಯದ ಬದಲು, ನಾವು ಈ ಪರಿಕಲ್ಪನೆಗಳ ಉಗಮದ ಕುರಿತು ಹೊಸ ಒಳನೋಟಗಳನ್ನು ನೀಡಲು ಪ್ರಯತ್ನಿಸುತ್ತೇವೆ. ಆರ್ಯರ ಆಕ್ರಮಣ ಸಿದ್ಧಾಂತದ ಉಗಮದ ಪ್ರಶ್ನೆಯು ರಾಜಕೀಯ ಪ್ರೇರಿತವಾಗಿರುವುದು ಕಂಡುಬರುತ್ತದೆ. ಎಡ್ವರ್ಡ್ ಸಯೀದ್‌ರ ಪೌರಾತ್ಯವಾದದ ವಿಮರ್ಶೆಯೊಂದಿಗೆ (1978) ಹಲವಾರು ಲೇಖಕರುಗಳು 19ನೆ ಶತಮಾನದ ವಿದ್ವಾಂಸರುಗಳ ವಸಾಹತುಶಾಹಿ ಹಿತಾಸಕ್ತಿಯ ಕುರಿತು ತಮ್ಮ ಗಮನವನ್ನು ಕೇಂದ್ರೀಕರಿಸಿದರು. ಪಂಡಿತರು ಹಾಗೂ ಹವ್ಯಾಸಿಗಳಿಬ್ಬರು ಭಾರತದಲ್ಲಿ ವಸಾಹತು ಆಳ್ವಿಕೆಯನ್ನು ನ್ಯಾಯಸಮ್ಮತಗೊಳಿಸಲು ಈ ಸಿದ್ಧಾಂತವು ಪ್ರಯತ್ನಿಸಿತು ಎಂದು ವಾದಿಸಿದರು.[3] ವಸಾಹತು ಪ್ರಾಜೆಕ್ಟ್‌ನ್ನು ಸಮರ್ಥಿಸಿಕೊಳ್ಳುವಲ್ಲಿ ಆರ್ಯರ ಆಕ್ರಮಣ ಸಿದ್ಧಾಂತವನ್ನು ಕೆಲವು ಬಾರಿ ಬಳಸಿಕೊಂಡಿರುವುದು ಸತ್ಯವೇ ಆಗಿದ್ದರೂ ಅದು ಆ ಸಿದ್ಧಾಂತದ ಉಗಮವನ್ನು ಅರ್ಥೈಸಿಕೊಳ್ಳಲು ಸಹಾಯಮಾಡುವುದಿಲ್ಲ.

ನಾವು ಹೇಳಬೇಕಿರುವ ಸಮಸ್ಯೆಯನ್ನು ಸ್ಪಷ್ಟಪಡಿಸಲು ಭಿನ್ನತೆಯ ಪ್ರಶ್ನೆಯನ್ನಾಗಿ ಸೂತ್ರೀಕರಿಸುತ್ತೇವೆ. 19ನೆ ಶತಮಾನದ ಪೌರಾತ್ಯವಾದಿ ಚಿಂತಕರಿಗೆ ಸಂಸ್ಕೃತ ಮಾತನಾಡುವ ಜನರು ಭಾರತದ ಉಪಖಂಡವನ್ನು ಆಕ್ರಮಿಸಿದರು ಎಂದು ಹೇಳಲು ಪೂರಕವಾದ ಜ್ಞಾನ ಮಿಮಾಂಸೆಯ ನಿರ್ಬಂಧಗಳಾವುವು? ಅವರೇಕೆ ಇತರ ಹೈಪೋಥೀಸಿಸ್‌ಗಳನ್ನು ಬೆಳಸದೆ ಅದೇ ನಿರ್ಣಯಕ್ಕೆ ಬರುವಂತಾದರು? ಇಲ್ಲಿ ವಸಾಹತುಶಾಹಿಯ ಹಿತಾಸಕ್ತಿಗಳು ಎಂದು ಆರೋಪಿಸುವ ವಾದಗಳು ಅಗತ್ಯವಿರುವ ವಿವರಣೆಯನ್ನು ನೀಡಲು ಸೋಲುತ್ತವೆ, ಏಕೆಂದರೆ ಈ ಹೈಪೋಥೀಸಿಸ್ ಮತ್ತು ವಸಾಹತುಶಾಹಿಯ ಹಿತಾಸಕ್ತಿಗಳ ನಡುವಿನ ಸಂಬಂಧವನ್ನು ನಿರ್ಣಯಾತ್ಮಕವಾಗಿ ಯಾರೂ ತೋರಿಸಲು ಸಾಧ್ಯವಿಲ್ಲ. ಭಾರತದಲ್ಲಿ ಯುರೋಪಿಯನ್ನರ ಆಡಳಿತವನ್ನು ನ್ಯಾಯಸಮ್ಮತಗೊಳಿಸಲು, ಒಬ್ಬಾತನು ತಪ್ಪಾದ ರಿಲಿಜನ್, ದೈವಿಕ ದೂರದೃಷ್ಟಿ ಹಾಗೂ ಸಾಂಸ್ಕೃತಿಕ ಅಥವಾ ಜನಾಂಗೀಯ ಕೀಳರಿಮೆಗಳ ಆಧಾರದ ಮೇಲೆ ವೈವಿಧ್ಯ ಮಯವಾದ ಇತಿಹಾಸವನ್ನು ಭಾರತದ ಕುರಿತು ರಚಿಸಬಹುದಿತ್ತು. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಕೆಲವು ಬಾರಿ ಈ ಸಿದ್ಧಾಂತವು ವಸಾಹತು ಆಳ್ವಿಕೆಯನ್ನು ಸಮರ್ಥಿಸಲು ಬಳಸಲ್ಪಟ್ಟಿದ್ದರೂ, ಆ ನಿಜಾಂಶವು ಭಾರತದ ಚರಿತ್ರೆಯ ಬರವಣಿಗೆಯಲ್ಲಿ ಅದರ ಉಗಮವನ್ನು ಮತ್ತು ಉಳಿಸಿಕೊಂಡಿರುವಿಕೆಯನ್ನು ವಿವರಿಸುವುದಿಲ್ಲ.

ಇದರ ಬದಲಿಗೆ, ನಾವು ವಾದಿಸುವಂತೆ, ಯುರೋಪಿನ ಪೌರಾತ್ಯವಾದಿಗಳಿಗೆ ಇಂತಹ ನಿರ್ಣಯಕ್ಕೆ ಬರುವಂತೆ ಮಾಡಿರಬಹುದಾದ ಜ್ಞಾನಮಿಮಾಂಸೆಯ ನಿರ್ಬಂಧಗಳನ್ನು ಹುಡುಕಬೇಕಾಗುತ್ತದೆ. ವಿಜ್ಞಾನದ ಇತಿಹಾಸದುದ್ದಕ್ಕೂ, ನಿರ್ದಿಷ್ಟ ಸಮಸ್ಯೆಯನ್ನು ಪರಿಹರಿಸಲು ಸಿದ್ಧಾಂತಗಳು ಉಗಮವಾಗಿವೆ; ಅಸ್ತಿತ್ವದಲ್ಲಿರುವ ಸಿದ್ಧಾಂತಗಳು ಉತ್ತರಿಸಲಾಗದ ಹಳೆಯ ಪ್ರಶ್ನೆಗಳಿಗೆ ಹೊಸ ಸಿದ್ಧಾಂತವು ಉತ್ತರವನ್ನು ನೀಡುತ್ತದೆ; ಅಸ್ತಿತ್ವದಲ್ಲಿರುವ ಸಿದ್ಧಾಂತಗಳ ಪರಿಕಲ್ಪನಾತ್ಮಕ ಸಮಸ್ಯೆಗಳಿಗೆ ಹಾಗೂ ಎಂಪಿರಿಕಲ್ ವೈಪರಿತ್ಯಗಳಿಗೆ ಇವು ಪರಿಹಾರವನ್ನು

ನೀಡುತ್ತವೆ; ಅಥವಾ ಹೊಸ ಅನ್ವೇಷಣೆಗಳ ಕುರಿತಂತೆ ಹೊಸ ವಿವರಣೆಗಳನ್ನು ಕಟ್ಟಿ ಕೊಡುತ್ತದೆ. ನಮ್ಮ ವಿಶ್ಲೇಷಣೆಯು ಈ ಮುಂದಿನ ಸಮಸ್ಯೆಗಳತ್ತ ಗಮನಹರಿಸುತ್ತದೆ: ಯಾವ ಹಳೆಯ ಸಮಸ್ಯೆಗಳನ್ನು ಪರಿಹರಿಸಲು ಅಥವಾ ಹೊಸ ಅನ್ವೇಷಣೆಗಳನ್ನು ವಿವರಿಸಲು ಆರ್ಯರ ಆಕ್ರಮಣ ಸಿದ್ಧಾಂತವು ಮೊದಲು ರೂಪುಗೊಂಡಿತು? ಆ ಕಾಲಘಟ್ಟದಲ್ಲಿ ಯಾವ ಸಾಕ್ಷ್ಯಗಳು ಲಭ್ಯವಿದ್ದವು? ಯುರೋಪಿನ ವಿದ್ವಾಂಸರಿಗೆ ದಕ್ಷಿಣ ಏಷ್ಯಾದ ರಿಲಿಜನ್ನಿನ ಇತಿಹಾಸವನ್ನು ವಿವರಿಸಲು ಈ ಸಿದ್ಧಾಂತವೆ ಬಲವಾದದ್ದು ಎಂದೆನಿಸಲು ಇದ್ದಂತಹ ಜ್ಞಾನದ ನಿರ್ಬಂಧಗಳಾವುವು?

ಈ ಎಲ್ಲಾ ಪ್ರಶ್ನೆಗಳಿಗೆ ಉತ್ತರಿಸುವ ನಮ್ಮ ಪ್ರಯತ್ನದಲ್ಲಿ, ಪೌರಾತ್ಯವಾದದ ಬೌದ್ಧಿಕ ಇತಿಹಾಸವನ್ನು ಅಧ್ಯಯನ ಮಾಡುವ ಒಂದು ನಿರ್ದಿಷ್ಟ ವಿಧಾನವನ್ನು ನಾವು ನಿದರ್ಶಿಸುತ್ತೇವೆ. ಈ ವಿಧಾನವು ಸಯೀದ್‌ರ ಚಿಂತನೆಗಳ ಬೇರನ್ನು ಹೊಂದಿದ್ದರೂ, ಪೌರಾತ್ಯ ಸಂಕಥನ ಬೆಳೆದಿರಲು ಅವರು ನೀಡುವ ಕಾರಣಗಳಾದ ವಸಾಹತುಶಾಹಿಯ ಹಿತಾಸಕ್ತಿಗಳು ಅಥವಾ ವಸಾಹತು ಪ್ರಭುತ್ವ ಹೊಂದಿತ್ತು ಎನ್ನಲಾಗುವ ಅಧಿಕಾರ/ಜ್ಞಾನದ ಸಂಬಂಧದ ಕುರಿತು ಇರುವ ವಾದಗಳ ಆಧಾರದ ಮೇಲೆ ಈ ವಿಧಾನವು ನಿಂತಿರುವುದಿಲ್ಲ. ಅದರ ಬದಲಿಗೆ, ಭಾರತದ ಕುರಿತ ಯುರೋಪಿಯನ್ನರ ಚಿತ್ರಣದ ಒಳಗೆ ಪರಿಕಲ್ಪನೆಗಳ ಮಾದರಿಗಳು ಹೇಗೆ ಬೆಳೆದುಬಂದವು ಎಂಬುದನ್ನು ತೋರಿಸುವ ಇರಾದೆಯನ್ನು ಹೊಂದಿದೆ. ಆದರೆ ಅವರ ಚಿತ್ರಣದ ಆಂತರಿಕ ಸುಸಂಬದ್ಧತೆಯು ಆಧುನಿಕ ಯೂರೋಪಿನ ರಿಲಿಜಸ್ ಮತ್ತು ಸಂಸ್ಕೃತಿಯ ಸಾಮಾನ್ಯ ಜ್ಞಾನದ ಮೇಲೆ ಅವಲಂಬಿತವಾಗಿದೆ. ಆರ್ಯರ ಆಕ್ರಮಣ ಸಿದ್ಧಾಂತದ ಉಗಮವನ್ನು ವಿವರಿಸಲು, ನಾವು ವಾದಿಸುವಂತೆ, ಭಾರತದ ಕುರಿತ ಯುರೋಪಿಯನ್ನರ ಸಾಂಸ್ಕೃತಿಕ ಅನುಭವವನ್ನು ರೂಪಿಸಿರುವ ಪಾಶ್ಚಾತ್ಯ-ಕ್ರಿಶ್ಚಿಯನ್ ಬೌದ್ಧಿಕ ಚರ್ಚೆಯ ಆಂತರಿಕ ಬೆಳವಣಿಗೆಗಳನ್ನು ಯಾರಾದರೂ ಪರೀಕ್ಷಿಸಬೇಕಾಗುತ್ತದೆ.

ನೇಶನ್, ಭಾಷೆ ಮತ್ತು ರಿಲಿಜನ್

ಸಾಮಾನ್ಯವಾಗಿ, ಆರ್ಯರ ಆಕ್ರಮಣ ಸಿದ್ಧಾಂತದ ಉಗಮವನ್ನು ಎರಡು ಅನ್ವೇಷಣೆಗಳ ಮಧ್ಯದಲ್ಲಿ ಗುರುತಿಸಲಾಗುತ್ತದೆ: ಮೊದಲನೆಯದಾಗಿ ಸಂಸ್ಕೃತ ಮತ್ತು ಯುರೋಪಿನ ಭಾಷೆಗಳ ನಡುವಿನ ಸಂಬಂಧದ ಅನ್ವೇಷಣೆ, ಅದನ್ನು ಸರ್ ವಿಲಿಯಮ್ ಜೋನ್ಸ್ 1786ರಲ್ಲಿ ನೀಡಿದ[4] ಉಪನ್ಯಾಸದಿಂದ ಗುರುತಿಸಲಾಗುತ್ತದೆ, ಹಾಗೂ ಎರಡನೆಯದಾಗಿ ದ್ರಾವಿಡ ಭಾಷಾ ಸಮೂಹದ ಅನ್ವೇಷಣೆ, ಇದನ್ನು ಮೊದಲ ಬಾರಿಗೆ 1816ರಲ್ಲಿ ಅಲೆಕ್ಸಾಂಡರ್ ಕ್ಯಾಂಪ್‌ಬೆಲ್ ಮತ್ತು ಫ್ರಾನ್ಸಿಸ್ ಡಬ್ಲ್ಯೂ ಎಲ್ಲಿಸ್‌ರವರು ಸಾರ್ವಜನಿಕವಾಗಿ ಮಾತನಾಡಿದರು. ಈ ಎರಡೂ ಅನ್ವೇಷಣೆಗಳು ಭಾರತದಲ್ಲಿ ಸಂಸ್ಕೃತ ಮಾತನಾಡುವ ಮತ್ತು ದ್ರಾವಿಡರು ಎಂಬ ಎರಡು ವಿಭಿನ್ನ ಜನರು ವಾಸವಾಗಿದ್ದರು ಎಂಬ ಚಿಂತನೆಯನ್ನು ಬೆಳೆಸಿದವು.

ಹಲವಾರು ವಿದ್ವಾಂಸರು ವಾದಿಸಿರುವಂತೆ, ಪೌರಾತ್ಯವಾದಿಗಳಿಗೆ 'ಬೈಬಲ್ಲಿನ ಕಾಲಗಣನೆಯು' ಭಾಷಾಶಾಸ್ತ್ರದ ಅನ್ವೇಷಣೆಯಿಂದ ಆರಂಭಗೊಂಡು ಆರ್ಯರ ಆಕ್ರಮಣದವರೆಗೆ ತಲುಪಲು ಹಿನ್ನೆಯಾಗಿದ್ದ ಚೌಕಟ್ಟಾಗಿತ್ತು. ಬೈಬಲ್‌ನ ಪೂರ್ವಗ್ರಹವಾದ ಪ್ರತಿಯೊಂದು ಭಾಷೆಯು ಜನಾಂಗ ಅಥವಾ ಜನರಿಗೆ ಸಂಬಂಧಿಸಿದೆ ಎಂಬುದನ್ನು ಕಲ್ಪಿಸಿಕೊಳ್ಳದಿದ್ದರೆ ಆರ್ಯ ಜನಾಂಗದ ಅಸ್ತಿತ್ವದ ಕುರಿತು ಮಾತನಾಡಲು

ಸಾಧ್ಯವಾಗುತ್ತಿರಲಿಲ್ಲ.[5] 18ನೆ ಶತಮಾನದ ಅಂತ್ಯದಲ್ಲಿ, ಭಾಷೆಗಳ ತುಲನೆಯ ಅಧ್ಯಯನವು ಮುಖವಾಗ್ಗಿ ಚದುರಿಹೋಗಿರುವ ನೋವಾನ ಮಕ್ಕಳನ್ನು ಪತ್ತೆ ಹಚ್ಚುವಲ್ಲಿ ಕಾಳಜಿಯನ್ನು ಹೊಂದಿತ್ತು. ಬ್ರಿಯಾಂಟ್ ರವರು ಹೇಳುವಂತೆ, ಎಲ್ಲಾ ಭಾಷೆಗಳಿಗೂ ಒಂದು ಮೂಲ ಇದೆ ಹಾಗೂ ಎಲ್ಲರೂ ಒಂದೇ ಜನಾಂಗಕ್ಕೆ ಸಂಬಂಧಿಸಿರುವವರು ಎನ್ನುವುದು ಬೈಬಲ್‌ನ ಆವೃತಿಯ ಇತಿಹಾಸವಾಗಿದೆ. ಅದರ ಪ್ರಕಾರ ನೋವಾನ ಮೂರು ಮಕ್ಕಳಾದ ಜಾಫೆಟ್, ಶೆಮ್ ಹಾಗೂ ಹಮ್‌ರು ಸಾಮಾನ್ಯವಾಗಿ ಮನುಕುಲದ ಪೂರ್ವಜರು ಎಂದು ಒಪ್ಪಿಕೊಳ್ಳಲಾಗುತ್ತದೆ. ಬಾಬೆಲ್(ಈಗಿನ ಬ್ಯಾಬಿಲೋನ್) ಅಸ್ತಿತ್ವಕ್ಕೆ ಬರುವ ಮುನ್ನ, 'ಅಲ್ಲಿ ಒಂದೇ ಭಾಷೆಯನ್ನಾಡುವ ಒಂದು ಜನಾಂಗವು ಇದ್ದಿತು', ತದನಂತರದಲ್ಲಿ ಅದು ವಿಭಾಗವಾಗಿ ಭೂಮಿಯ ಮೇಲೆ ಚದುರಿಹೋಯಿತು. ಈ ವಿಷಯವು ಬೈಬಲ್‌ನ ಹಿಡಿತದಿಂದ ಹೊರಬಂದರೂ 20ನೆ ಶತಮಾನದರೆಗೂ ಯುರೋಪಿಯನ್ನರ ಪ್ರಜ್ಞೆಯಲ್ಲಿ ಆಳವಾಗಿ ಬೇರೂರಿಕೊಂಡಿತ್ತು.[6] ಆದಕಾರಣ, ಯಾವಾಗ ಜೋನ್ಸ್ ರವರು 1986 ರಲ್ಲಿ ಸಂಸ್ಕೃತ ಲ್ಯಾಟಿನ್ ಹಾಗೂ ಗ್ರೀಕ್ ಭಾಷೆಗಳಿಗೆ ಸಂಬಂಧವಿದೆ ಎಂದು ತೋರಿಸಿದರೋ ಆಗ ಭಾಷೆ ಮತ್ತು ಜನಾಂಗಕ್ಕೆ ತಳುಕುಹಾಕುವ ಕಾರ್ಯ ಪ್ರಾರಂಭವಾಯಿತು. ಜೋನ್ಸ್‌ನು ನಿಸ್ಸಂದೇಹವಾಗಿ ಜಗತ್ತಿನ 'ಎಲ್ಲಾ ಜನಾಂಗವನ್ನು' ನೋವಾನ ಮೂರು ಮಕ್ಕಳೊಂದಿಗೆ ಪತ್ತೆಹಚ್ಚುವ ಕಾರ್ಯದಲ್ಲಿ ತಲ್ಲೀನನಾಗಿದ್ದನು.[7] ಆತನು ಯುರೋಪಿಯನ್ ಮತ್ತು ಭಾರತೀಯರು ಒಂದೇ ಪೂರ್ವಜರನ್ನು ಹೊಂದಿದ್ದರು ಎಂಬುದಕ್ಕೆ ಭಾಷಾಶಾಸ್ತ್ರದ ಅನ್ವೇಷಣೆಯನ್ನು ಆಧಾರವಾಗಿ ಬಳಸಿಕೊಂಡ, ಹಾಗೂ ಇವರೆಲ್ಲಾ ಹಮ್‌ನ ಸಂತತಿ ಎಂದೂ ಭಾವಿಸಿದ್ದ. (ಆತನ ಅಭಿಪ್ರಾಯವು ಅವನ ಸಮಕಾಲೀನರ ಪ್ರಜ್ಞೆಯ ವಿರುದ್ಧವಾಗಿತ್ತು ಅಂದರೆ ಅವನ ಸಮಕಾಲೀನರು ಇಂಡೋ ಯುರೋಪಿಯನ್ನರೆಲ್ಲರೂ ಜಾಫೆಟ್‌ನ ಸಂತತಿ ಎಂದು ಭಾವಿಸಿದ್ದರು).[8]

ಭಾಷೆ ಮತ್ತು ಜನಾಂಗ (ನೇಶನ್)ದ ನಡುವೆ ಇರುವ ಕೊಂಡಿಯು ಆರ್ಯ ಜನಾಂಗದ ಕುರಿತ ಚಿಂತನೆ ಬೆಳೆಯುವಲ್ಲಿ ಬಹುಮುಖ್ಯವಾದ ಪಾತ್ರವಹಿಸಿತ್ತು.[9] ನಮ್ಮ ಸಲಹೆ ಎಂದರೆ ಇದೂ ಸಹ ಆರ್ಯರ ಆಕ್ರಮಣ ಸಿದ್ಧಾಂತದ ಉಗಮವನ್ನು ವಿವರಿಸುವಲ್ಲಿ ಸೋಲುತ್ತದೆ. ಮ್ಯಾಕ್ಸ್ ಮುಲ್ಲರ್, (ಸಿದ್ಧಾಂತದ ಪಿತಾಮಹ ಎಂದು ಯಾವಾಗಲೂ ತಪ್ಪಾಗಿ ಗುರುತಿಸಲ್ಪಟ್ಟವರು) ಈಗಾಗಲೇ ಭಾಷೆ ಮತ್ತು ಜನಾಂಗದ ನಡುವೆ ಇದೆ ಎನ್ನುವ ನೇರವಾದ ಸಂಬಂಧವನ್ನು ಜರ್ಮನಿಯ ಒಂದು ಕಾರ್ಯಗಾರದಲ್ಲಿ ತಿರಸ್ಕರಿಸಿದ್ದಾರೆ.[10] ಆದರೆ ಇದು ಭಾರತೀಯರು ಮತ್ತು ಯುರೋಪಿಯನ್ನರು ಒಂದೇ ಜನಾಂಗಕ್ಕೆ ಸೇರಿದವರು ಎನ್ನುವ ನಂಬಿಕೆಯ ಮೇಲೆ ಪರಿಣಾಮ ಬೀರಿತೆ ವಿನಃ ಸಂಸ್ಕೃತ ಮಾತನಾಡುವ ಜನರ ಕುರಿತು ಇದ್ದ ಚಿಂತನೆಯನ್ನು ಇದು ಪ್ರಶ್ನಿಸಲಿಲ್ಲ. ಆರ್ಯರು ಮತ್ತು ಮೂಲನಿವಾಸಿಗಳಾದ ದ್ರಾವಿಡರ ನಡುವಿನ ಸಂಬಂಧದ ದೃಷ್ಟಿಕೋನದಲ್ಲಿ ರೂಪುಗೊಂಡ ಪ್ರಾಚೀನ ಭಾರತದ ಇತಿಹಾಸವು ಯಾವುದೇ ಬದಲಾವಣೆ ಇಲ್ಲದೆ ಹಾಗೆಯೇ ಅಸ್ಪಷ್ಟವಾಗಿ ಉಳಿದುಕೊಂಡಿತು. ಭಾಷಿಕ ಆಧಾರವನ್ನು ವೇದಗಳ ಕುರಿತ ಬೇಕಾಬಿಟ್ಟಿ ನಿರೂಪಣೆಗಳು ಸ್ಥಾನಪಲ್ಲಟಗೊಳಿಸಿದವು, ಅವೆಂದರೆ ಅನಾಸ ಎಂದರೆ ಮೂಗಿಲ್ಲವರು ಅಥವಾ ಮೂಗರು, ವರ್ಣ ಎಂದರೆ ಚರ್ಮದ ಬಣ್ಣ ಅಥವಾ ದಾಸರು ಎಂದರೆ ಮೂಲನಿವಾಸಿ ಜನರು.[11]

ಭಾಷೆ ಮತ್ತು ನೇಶನ್ ನಡುವಣ ಸಂಬಂಧಗಳು ರಿಲಿಜನ್‌ನನ್ನು ಒಳಗೊಂಡಂತೆ

ತ್ರಿಕೋನ ಸಂಬಂಧವನ್ನು ಹೊಂದಿವೆ ಎಂದು ನಾವು ಒತ್ತಿ ಹೇಳಲು ಇಚ್ಛಿಸುತ್ತೇವೆ. ನೋವಾನ ಮಕ್ಕಳನ್ನು ಕೇವಲ ಭಾಷಿಕ ಸಾದೃಶ್ಯತೆಯ ಆಧಾರದ ಮೇಲೆ ಗುರುತಿಸಲಾಗಿಲ್ಲ ಬದಲಾಗಿ ರಿಲಿಜನ್‌ಗಳಲ್ಲಿರುವ ಸಾದೃಶ್ಯತೆಗಳನ್ನೂ ಸಹ ಪರಿಗಣಿಸಲಾಗಿದೆ. ಉದಾಹರಣೆಗೆ, ಜೋನ್ಸ್ ನೋಡುವಂತೆ ಪ್ರಾಚೀನ ಗ್ರೀಕ್ ರೋಮನ್ ದೇವತೆ ಹಾಗೂ ವಿಧಿಗಳು ಆಧುನಿಕ ಹಿಂದೂಗಳೊಂದಿಗೆ ಸಾಮ್ಯತೆ ಹೊಂದಿದ್ದವು, ಅವು ಈ ಪ್ರಾಚೀನ ಎರಡೂ ಗುಂಪುಗಳ ಭಾಷೆಗಳ ಸಾಮ್ಯತೆಯನ್ನು ಹೊಂದಿದ್ದು ಪರಸ್ಪರ ಸಂವಹನ ನಡೆಸುತ್ತಿದ್ದವು ಎನ್ನುತ್ತಾನೆ. ಇದನ್ನು ಆತ ಬೈಬಲ್ ಗಾಡ್ ಆಡಮ್ ಮೂಲಕ ಮನುಕುಲಕ್ಕೆ ನೀಡಿದ್ದ ರಿಲಿಜನ್ ಭ್ರಷ್ಟ ಹೊಂದಿರುವುದಕ್ಕೆ ಸಾಕ್ಷ್ಯವನ್ನಾಗಿ ಪರಿಗಣಿಸುತ್ತಾನೆ.[12]

ಆಕ್ರಮಣದ ಸಿದ್ಧಾಂತ ರೂಪುಗೊಳ್ಳುವಲ್ಲಿ ರಿಲಿಜನ್ ಬಹುಮುಖ್ಯ ಪಾತ್ರ ನಿರ್ವಹಿಸಿರುವುದನ್ನು ಸ್ಪಷ್ಟಪಡಿಸಲು ನಮಗೆ ಕೆಲವಾರು ನಿಜಾಂಶಗಳು ದೊರಕುತ್ತವೆ. ಮೊದಲನೆಯದಾಗಿ, ವಿದೇಶಿ ಮೂಲದ ಬ್ರಾಹ್ಮಣ ಬುಡಕಟ್ಟು ಸಂಸ್ಕೃತ, ಲ್ಯಾಟಿನ್ ಮತ್ತು ಗ್ರೀಕ್ ಭಾಷೆಗಳ ನಡುವಿನ ಸಂಬಂಧದ ಅನ್ವೇಷಣೆಗಿಂತ ಮೊದಲೇ ಅಸ್ತಿತ್ವದಲ್ಲಿತ್ತು. 18ನೆ ಶತಮಾನದ ಮೊದಲಾರ್ಧದಲ್ಲಿ, ಹಲವಾರು ಫ್ರೆಂಚ್ ಪಾದ್ರಿವರ್ಗದ ವಿದ್ವಾಂಸರು ಮೊದಲೆ ಅನುಮಾನ ಪಟ್ಟಂತೆ, ಪ್ರಾಚೀನ ಭಾರತದ ಮೂಲ ನಿವಾಸಿಗಳು ಅಥವಾ ಬ್ರಾಹ್ಮಣ್ಯದ ಫೇತ್‌ನ ಪ್ರತಿನಿಧಿಗಳು ಪ್ರಾಚೀನ ಈಜಿಪ್ಟ್‌ನ ವಸಾಹತು ಪ್ರದೇಶಗಳಲ್ಲಿ ಜನ್ಮತಾಳಿದ್ದರು. ಬ್ರಾಹ್ಮಣರು ಮತ್ತು ಈಜಿಪ್ಟಿಯನ್ನರ ನಡುವಿನ ನೈತಿಕತೆ, ರಿಲಿಜನ್ ಮತ್ತು ಸಂಪ್ರದಾಯಗಳ ನಡುವಿನ ಸಾಮ್ಯತೆಯಿಂದಾಗಿ ಫಾದರ್ ಕಾಟ್ರೋರವರು 1777 ರಲ್ಲಿಯೇ ಇಂತಹ ನಿರ್ಣಯಕ್ಕೆ ಬಂದಿದ್ದರು.[13] ಪಿರೆಕೊಯೆರ್ಡಾಕ್ಸ್ ಅಭಿಪ್ರಾಯವನ್ನು ಮಂಡಿಸಿದಂತೆ, ಬ್ರಾಹ್ಮಣರು ಜಾಫೆಟ್‌ನ ವಂಶಸ್ಥರಾಗಿದ್ದಾರೆ. ಅವನ ಪ್ರಕಾರ, ಭಾರತವು ಹಲವಾರು ಆಕ್ರಮಣಗಳನ್ನು ಕಂಡಿದೆ ಅವುಗಳಲ್ಲಿ ಒಂದು ಗುಂಪು ಬ್ರಾಹ್ಮಣರನ್ನು ಹಾಗೂ ಅವರ ರಿಲಿಜನ್‌ನನ್ನು ತಂದಿದೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ.[14]

18ನೆ ಶತಮಾನದ ಕೊನೆಯ ಭಾಗದಲ್ಲಿ ವಿದ್ವಾಂಸರು 'ಹಿಂದೂಗಳೆಂಬ' ಜನಾಂಗವನ್ನು ಅವರ ಪ್ರೀಸ್ಟ್ ಆದ ಬ್ರಾಹ್ಮಣರನ್ನು ಹಾಗೂ ವೇದಗಳು ಪವಿತ್ರಗ್ರಂಥಗಳು ಎಂಬುದನ್ನು ಸೂಚಿಸಲು ಪ್ರಾರಂಭಿಸಿದರು.[15] ಈ ಕಾಲಘಟ್ಟದಲ್ಲಿ ಇಂಡೋ–ಯುರೋಪಿಯನ್ ಭಾಷಾ ಸಮೂಹದ ಅನ್ವೇಷಣೆಯು ಸಂಸ್ಕೃತ ಮಾತನಾಡುವ ಜನರ ಕುರಿತು ಹಲವಾರು ಅನುಮಾನಗಳನ್ನು ಹರಡುತ್ತಿದ್ದರೂ, ಈ ಜನರನ್ನು ಹಿಂದೂ ಅಥವಾ ಬ್ರಾಹ್ಮಿನಿಕಲ್‌ಗಳೆಂದು ಹಾಗೂ ಸಂಸ್ಕೃತವು ಬ್ರಾಹ್ಮಿನಿಕಲ್ ಭಾಷೆ ಎಂದೂ ಗುರುತಿಸುವ ಪರಿಪಾಠ ಮುಂದುವರೆಯುತ್ತಾ ಬಂದಿತು.

ಎರಡನೆಯದಾಗಿ, ಬೇರೊಂದು ಅರ್ಥದಲ್ಲಿ ರಿಲಿಜನ್‌ನ ಪಾತ್ರ ಇಲ್ಲಿ ಅತ್ಯಂತ ಪ್ರಧಾನವಾದುದು. 19ನೆ ಶತಮಾನದ ಮುನ್ನ, ಯುರೋಪಿನ ಬರಹಗಾರರು ಹಿಂದೂಯಿಸಂ ಮತ್ತು ಅದರ ಕಾಸ್ಟ್ ಸಿಸ್ಟಮ್ ಎಂಬ ಸಂಸ್ಥೆಗಳನ್ನು ಭ್ರಷ್ಟ ಬ್ರಾಹ್ಮಣ ಪ್ರೀಸ್ಟ್‌ಗಳು ಹುಟ್ಟುಹಾಕಿದರು ಎಂಬುದನ್ನು ಯಥೇಚ್ಛವಾಗಿ ಬರೆಯಲು ಪ್ರಾರಂಭಿಸಿದರು. ಈ ಸಂಸ್ಥೆಗಳು ಪವಿತ್ರ ಕಾನೂನಿನ ವ್ಯವಸ್ಥೆಯನ್ನು ಜನರಿಗೆ ಹೇರುವ ಮೂಲಕ ಬ್ರಾಹ್ಮಣರು ಉನ್ನತ ವರ್ಗ ಅವರ ನಂತರ ಕ್ಷತ್ರಿಯರು ಹಾಗೂ ಅವರ ಕೆಳಗೆ ವೈಶ್ಯರು ಮತ್ತು ಶೂದ್ರರು ಎಂಬ ಕ್ರಮವನ್ನು ಜಾರಿಗೆ ತಂದವು, ಇದರಲ್ಲಿ ಅಸ್ಪೃಶ್ಯರು ಅಥವಾ ಪರಿಯಾಗಳು ಹೊರದೂಡಲ್ಪಟ್ಟಿದ್ದರು. ಈ ಚಿತ್ರಣವು ಹೆಚ್ಚು ಪ್ರಚಲಿತವಾದಂತೆ, ಯುರೋಪಿನ ವಿದ್ವಾಂಸರು

ಹಿಂದೂಗಳನ್ನು ಜಾತಿವ್ಯವಸ್ಥೆಯ ಮೊದಲನೆಯ ಜಾತಿ ಅಥವಾ ಮೊದಲು ಮೂರು ಜಾತಿಗಳನ್ನಾಗಿ ನೋಡಲು ಪ್ರಾರಂಭಿಸಿದರು. ಶೂದ್ರರು ಮೂಲನಿವಾಸಿ ಸಂತತಿಗಳಾಗಿದ್ದು ಹಿಂದೂಗಳು ಅವರನ್ನು ಆಕ್ರಮಿಸಿ ಅಡಿಯಾಳುಗಳನ್ನಾಗಿ ಮಾಡಿಕೊಂಡರು ಎಂಬುದಾಗಿಯೂ ವಿವರಿಸಿದರು. ಪ್ರಾರಂಭದಲ್ಲಿ ಪರಿಯಾಗಳು ಇಲ್ಲಿನ ಮೂಲನಿವಾಸಿಗಳೆಂದು ಪರಿಗಣಿಸಲ್ಪಟ್ಟಿದ್ದರೆ ವಿನಃ ಶೂದ್ರರಲ್ಲ. ಈ ಚಿಂತನೆಯು 18ನೆ ಶತಮಾನದಲ್ಲಿ ಚಾಲ್ತಿಯಲ್ಲಿ ಇತ್ತಾದರೂ ಅದು ಹಿಂದೂಗಳ ಆಕ್ರಮಣಕ್ಕೆ ಯಾವುದೇ ಸಂಬಂಧವನ್ನು ಹೊಂದಿರಲಿಲ್ಲ.[16] ಏನೇ ಆದರೂ 19ನೆ ಶತಮಾನದ ಪೂರ್ವಾರ್ಧದಲ್ಲಿ, ಹಿಂದೂಗಳ ಆಕ್ರಮಣದಿಂದಾಗಿ ಜಾತಿವ್ಯವಸ್ಥೆ ಅಸ್ತಿತ್ವಕ್ಕೆ ಬಂದಿತು ಹಾಗೂ ಬ್ರಾಹ್ಮಣರು ಇದನ್ನು ಪ್ರತಿನಿಧಿಸುವ ಮೂಲಕ ಮೂಲನಿವಾಸಿಗಳನ್ನು ಆ ವ್ಯವಸ್ಥೆಯಲ್ಲಿ ಕೆಳಜಾತಿಯನ್ನಾಗಿ ಮಾಡಿದರು ಎನ್ನುವ ಹೈಪೋಥೀಸಿಸ್ ಹುಟ್ಟಿತು.

ಪ್ಯಾರೀಸ್ ಮತ್ತು ಮದ್ರಾಸ್‌ಗಳ ನಡುವೆ

19ನೆ ಶತಮಾನದ ಪ್ರಾರಂಭದಲ್ಲಿ 'ಭಾರತದ ಮೇಲೆ ಹಿಂದೂ ಆಕ್ರಮಣ' ಎಂಬ ಹೈಪೋಥೀಸಿಸ್ ಎರಡು ವಿಭಿನ್ನ ಪ್ರದೇಶಗಳಲ್ಲಿ ಹರಳುಗಟ್ಟಿತು. ಮೊದಲನೆಯದಾಗಿ ಮದ್ರಾಸಿನ ಕಾಲೇಜ್ ಆಫ್ ಪೋರ್ಟ್ ಸೈಂಟ್‌ನಲ್ಲಿದ್ದ ಎಫ್.ಡಬ್ಲ್ಯೂ.ಎಲ್ಲಿಸ್ ಹಾಗೂ ಕೊಲಿನ್ ಮೆಕಂಜಿಯಂತಹ ವಿದ್ವಾಂಸರ ಸಮೂಹದ ಮೂಲಕ; ಎರಡನೆಯದು ಪ್ಯಾರೀಸಿನ ಏಷಿಯಾಟಿಕ್ ಸೊಸೈಟಿಯ ಪೌರಾತ್ಯವಾದದ ವಿದ್ವಾಂಸರ ಗುಂಪುಗಳ ಮೂಲಕ.[17]

ಆಕ್ರಮಣದ ಕುರಿತ ಚಿಂತನೆಯನ್ನು ಕಲೋನೆಲ್ ಮಾರ್ಕ ವಿಲ್ಕಸ್ ರವರ ದಕ್ಷಿಣ ಭಾರತದ ಚಾರಿತ್ರಿಕ ಸ್ಥೂಲಚಿತ್ರಣ(1810)ದಲ್ಲಿ ಕಾಣಬಹುದು. ಇವರು ಮೈಸೂರಿನಲ್ಲಿ ರಾಜಕೀಯ ಆಶ್ರಯವನ್ನು ಪಡೆದಿದ್ದರು ಹಾಗೂ ಇವರನ್ನು ಮದ್ರಾಸು ಪ್ರಾಂತ್ಯದ ಫೋರ್ಟ್ ಸೈಂಟ್‌ನ ಟೌನ್ ಮೇಜರ್ ಆಗಿ ಆಯ್ಕೆ ಮಾಡಲಾಗಿತ್ತು. ಮನುಧರ್ಮಶಾಸ್ತ್ರ ಓದಿನ ಹಿನ್ನೆಯಲ್ಲಿ– ಧರ್ಮಶಾಸ್ತ್ರಗಳು ಹಿಂದೂಗಳ ಪವಿತ್ರಗ್ರಂಥಗಳು ಎಂದು ಬ್ರಿಟೀಷರು ತಪ್ಪಾಗಿ ಗುರುತಿಸಿದ್ದರು–ವಿಲ್ಕ್ಸ್‌ರವರು 'ಹಿಂದೂ ಆಕ್ರಮಣ' ಎಂಬ ಚಿಂತನೆಯನ್ನು ಪರಿಚಯಿಸಿದರು. ಅದುವೇ ಜಾತಿವ್ಯವಸ್ಥೆ ರೂಪುಗೊಳ್ಳಲು ಕಾರಣ ಎಂದು ನಂಬಿದ್ದರು.[18] ಇದಕ್ಕಾಗಿ ಅವರು ಕ್ರೈಸ್ತನಿಗಿಂತಲೂ 1450 ವರ್ಷಗಳ ಹಿಂದೆ ಇದ್ದಂತಹ ಒಬ್ಬ ರಾಜನ ಕತೆಯನ್ನು ಆಧಾರವಾಗಿ ತೆಗೆದುಕೊಂಡರು, ಅದರ ಪ್ರಕಾರ ಹುಬಾಸಿಕಾ ಎಂಬ ಹುಲ್ಲಿಯಾ ಅಥವಾ ಪರಿಯಾರ್ ರಾಜ ಮತ್ತು ಆತನ ಅಧೀನರು ಗುಲಾಮಗಿರಿಗೆ ಒಳಗಾಗಿದ್ದರು, ಇಂದಿಗೂ ಸಹ ಅವರ ಸಂತತಿಯೇ ಮುಂದುವರೆದುಕೊಂಡು ಬರುತ್ತಿದೆ.

ವಿಲ್ಕ್ಸ್‌ನ ಪ್ರಕಾರ, ಮೇಲ್ಕಾಣಿಸಿದ ಕತೆಯು ಹಲವಾರು ಸಂದರ್ಭಗಳ ಕುರಿತ ಅಭಿಪ್ರಾಯಗಳಿಗೆ ಬುನಾದಿಯನ್ನು ಹಾಕಿಕೊಟ್ಟಿತು, ಅದೆಂದರೆ ಅತೃಪ್ತ ಹೊರಜಾತಿಯವರು (ಔಟ್ ಕಾಸ್ಟ್ಸ್) ಭಾರತದ ಮೂಲನಿವಾಸಿಗಳು; ಜಾತಿಗಳು ಅಸ್ತಿತ್ವಕ್ಕೆ ಬಂದಿರುವುದು ಯಾವುದೋ ಒಂದೇ ಚಿಂತನೆಯ ಶ್ರಮದಿಂದ ಮಾತ್ರವಲ್ಲ, ಬದಲಿಗೆ, ಉತ್ತರದ ಹಿಂದೂಗಳು ಇತರರನ್ನು ಅಡಿಯಾಳುಗಳನ್ನಾಗಿ ಇಟ್ಟುಕೊಳ್ಳಲು ನಡೆಸಿದ ಸಮಯೋಚಿತ ಮತ್ತು ಯಶಸ್ವಿಯಾದ ವಿಧಾನಗಳ ಫಲವೇ ಆಗಿದೆ.[19] ವಿಲ್ಕ್ಸ್ ನಮೂದಿಸುವಂತೆ, ಎರಡು ರೀತಿಯ ಜನಾಂಗ ಅಥವಾ ಜನರಿದ್ದು, ಅವರಲ್ಲಿ ಹಿಂದೂಗಳು ಇಲ್ಲಿನ ಮೂಲನಿವಾಸಿಗಳನ್ನು ಆಕ್ರಮಿಸಿದರು; ಹಾಗೂ ಹಿಂದೂಗಳು ಶ್ರೇಷ್ಠ ಜಾತಿಯವರಾಗಿದ್ದು,

ಜಾತಿವ್ಯವಸ್ಥೆ ಅಸ್ತಿತ್ವಕ್ಕೆ ಬಂದಿರುವುದಕ್ಕೆ ಹಿಂದೂ ಆಕ್ರಮಣವೇ ಕಾರಣೀಭೂತವಾಗಿದೆ. ಮೇಲ್ಕಾಣಿಸಿದ ಕತೆ ಒಂದನ್ನು ಬಿಟ್ಟು ಆತ ಬೇರೆ ಯಾವುದೇ ನಿಜಾಂಶಗಳನ್ನು ಸೂಚಿಸಲೇ ಇಲ್ಲ ಹಾಗೂ ಅವನ ಅಭಿಪ್ರಾಯಕ್ಕೆ ಬೆಂಬಲ ನೀಡುವ 'ಹಲವಾರು ಸಂದರ್ಭಗಳನ್ನು' ಆತ ತೋರಿಸಲಿಲ್ಲ.

ಇದೇ ಕಾಲಘಟ್ಟದ ಪ್ಯಾರೀಸ್‌ನ ಹಲವಾರು ಪೌರಾತ್ಯವಾದಿ ಚಿಂತಕರುಗಳು ಇಂತಹುದೇ ನಿರ್ಣಯಕ್ಕೆ ಬಂದಿದ್ದರು.[20] ಮಥಾಯಿ ಲೂಯಿ ಲಾಂಗ್ಲೆಸ್‌ರವರು ತಮ್ಮ ಕೃತಿಯಾದ Ancienset Modernes de l'Hindoustan (1821)ದಲ್ಲಿ ಆಕ್ರಮಣದ ಸಿದ್ಧಾಂತವನ್ನು ವಿಸ್ತರಿಸಿದ್ದರು. ಲಾಂಗ್ಲೆಸ್ ರವರು ಪ್ಯಾರಿಸ್‌ನ ಏಷಿಯಾಟಿಕ್ ಸೊಸೈಟಿಯ ಪ್ರಭಾವಿ ವಿದ್ವಾಂಸರಾದ ಸಿಲ್ವೆಸ್ಟ್ರಿ ಡೆ ಸ್ಯಾಸಿಯವರ ವಿದ್ಯಾರ್ಥಿಯಾಗಿದ್ದರು. ಆತನ ಎರಡನೇ ಸಂಪುಟವು ಹಿಂದೂಗಳ ರಿಲಿಜನ್ ಕಾನೂನು ಹಾಗೂ ಸಂಪ್ರದಾಯಗಳ ಕುರಿತ ವಿಷಯಗಳನ್ನು ಒಳಗೊಂಡಿತ್ತು. ಅದರಲ್ಲಿ ಆತ ಮೊದಲು ಇವರು ಮುಸ್ಲಿಂರಿಂದ, ನಂತರ ಆಂಗ್ಲ ವ್ಯಾಪಾರಿಗಳಿಂದ ಹಾಗೂ ಪ್ರಾಚೀನ ಕಾಲದಲ್ಲಿ ಹಿಂದೂಗಳಿಂದಲೇ ಆಕ್ರಮಣಕ್ಕೆ ಒಳಗಾಗಿದ್ದರು ಎಂದು ತಿಳಿಸುತ್ತಾನೆ. ಅತ್ಯಂತ ಪ್ರಾಚೀನ ಕಾಲದಲ್ಲಿ ಭಾರತದ ಮೂಲನಿವಾಸಿಗಳನ್ನು ಆಕ್ರಮಸಿಕೊಳ್ಳಲಾಗಿದೆ, ಅದರ ನೆನಪು ಈಗ ಉಳಿದಿಲ್ಲದಿರಬಹುದು, ಆದರೆ ಪರಿಯಾ ಜಾತಿಯವರು ನಿಕೃಷ್ಟವಾಗಿ ಉಳಿದಿರುವುದರಿಂದ ನಮಗೆ ಅವರು ಆಕ್ರಮಣಕ್ಕೆ ಒಳಗಾಗಿರುವ ಜನಾಂಗ ಎಂದು ತಿಳಿದುಬರಬಹುದು.[21] ಯಾವುದೇ ಆಧಾರಗಳನ್ನು ನೀಡದೆ, ಲಾಂಗ್ಲೆಸ್ ರವರು ಪರಿಯಾಗಳನ್ನು ಹಿಂದೂ ಆಕ್ರಮಣಕ್ಕೆ ಒಳಗಾದ ಜನರ ಸಂತತಿ ಎಂದು ಚಿತ್ರಿಸುತ್ತಾರೆ; ಆತ ಎಂದಿಗೂ ತನ್ನ ಪ್ರತಿಪಾದನೆಯಾದ ಮೂಲನಿವಾಸಿಗಳ ಮೇಲಿನ ಹಿಂದೂ ಆಕ್ರಮಣವನ್ನು ಭಾಷಿಕ ವ್ಯತ್ಯಾಸವನ್ನಾಗಿ ಸಮರ್ಥಿಸಿಕೊಳ್ಳಲಿಲ್ಲ.

ಲಾಂಗ್ಲೆಸರವರಿಗೆ ಮುಂದಿನ ಚಿಂತನೆಗಳು ಸ್ಥಾಪಿತವಾಗಿದ್ದ ನಿಜಾಂಶಗಳನ್ನು ಅರ್ಥೈಸಿಕೊಳ್ಳಲು ಸಹಾಯಮಾಡಿದವು. ಏನೇ ಆದರೂ, ಅದೇ ಕೃತಿಯ ವಿಮರ್ಶೆಯ ಸಂದರ್ಭದಲ್ಲಿ ಅಬೆಲ್ ರೆಮ್ಸಾಟ್ ರವರು ಡೆಸ್ ಸಾವನ್ಸ್ (1822) ನಿಯತಕಾಲಿಕೆಯಲ್ಲಿ ಹಿಂದೂಗಳ ಭಾರತದ ಆಕ್ರಮಣ ಹೇಗೆ ಒಂದು ಹೊಸ ಚಿಂತನೆ ಎಂಬುದನ್ನು ಹೇಳುತ್ತಾರೆ. ರೆಮ್ಸಾಟ್ ರವರು ಏಷಿಯಾಟಿಕ್ ಸೊಸೈಟಿಯ ಸ್ಥಾಪಕ ಸದಸ್ಯರಾಗಿದ್ದು ನಂತರದಲ್ಲಿ ಅದರ ಅಧ್ಯಕ್ಷರೂ ಆಗಿದ್ದರು. ಅವರ ವಿಮರ್ಶೆಯ ಲೇಖನದಲ್ಲಿ, ಅವರು ನಮೂದಿಸುವಂತೆ ವಿದೇಶಿಯರ ಆಕ್ರಮಣ ಸಿದ್ಧಾಂತವು ಕಡಿಮೆ ಪ್ರಾಮುಖ್ಯತೆಯನ್ನು ಹೊಂದಿದ್ದರೂ ಅದರ ಹೊಸತನಕ್ಕಾದರೂ ಅದನ್ನು ವಿಸ್ತರಿಸಬೇಕಾದ ಅಗತ್ಯವಂತೂ ಇದ್ದೇ ಇದೆ.[22] ರೆಮ್ಸಾಟ್ ರವರು ಆಧಾರದ ಕೊರತೆ ಇದ್ದಾಗ್ಯೂ ಆ ಹೈಪೋಥೀಸಿಸ್‌ನ್ನು ಉಳಿಸಿಕೊಳ್ಳಲು ಕೆಳಕಾಣಿಸಿದ ಕಾರಣಗಳನ್ನು ನೀಡುತ್ತಾರೆ.

> ನಿಸ್ಸಂದೇಹವಾಗಿ ಇದೊಂದು ಹೈಪೋಥೀಸಿಸ್, ಯಾವುದೇ ಚಾರಿತ್ರಿಕ ಆಧಾರಗಳಿಂದ ಇದು ಗಟ್ಟಿಗೊಂಡಿಲ್ಲ; ಆದರೂ ಇದು ಉನ್ನತ ಮಟ್ಟದ ಒಂದು ಸಾಧ್ಯತೆಯನ್ನು ನಮ್ಮ ಮುಂದೆ ಇಡುತ್ತದೆ, ಜಾತಿಗಳ ವ್ಯವಸ್ಥೆಯನ್ನು ಅಧ್ಯಯನ ನಡೆಸುವುದು ಕಷ್ಟದ ಕೆಲಸ, ಮೇಲಿನ ಎರಡು ಉನ್ನತ ಜಾತಿಗಳು ಹಾಗೂ ಕೆಳಗಿನ ಎರಡು ಕನಿಷ್ಠ ಜಾತಿಗಳಲ್ಲಿ ಕಾನೂನು ಹೇಗೆ ಉಗಮವಾಯಿತು ಹಾಗೂ ಒಬ್ಬರು ಅತಿಯಾದ ಶ್ರೇಷ್ಠತೆಯನ್ನು ಮತ್ತೊಬ್ಬರು ಅತಿಯಾದ ಕನಿಷ್ಠತೆಯನ್ನು ಹೇಗೆ ಹೊಂದಿದ್ದಾರೆ

ಎಂಬುದನ್ನು ಅರ್ಥೈಸಲು ಎಂಬುದನ್ನು ಅರ್ಥೈಸಿಕೊಳ್ಳಲು ಈ ಆಕ್ರಮಣ ಸಿದ್ಧಾಂತವಿಲ್ಲದೆ ಸಾಧ್ಯವಿಲ್ಲ.[23]

ಪ್ರಾಕ್ತನಶಾಸ್ತ್ರದ ಅಥವಾ ಭಾಷಾಶಾಸ್ತ್ರದ ನಿಜಾಂಶಗಳ ಅನುಪಸ್ಥಿತಿಯು ಈ ಹೈಪೋಥೀಸಿಸ್‌ನ್ನು ಬೆಂಬಲಿಸಿದ್ದರೂ, ರೆಮ್ಸಾಟ್‌ರವರು ಜಾತಿವ್ಯವಸ್ಥೆಯನ್ನು ಅರ್ಥೈಸಿಕೊಳ್ಳುವಲ್ಲಿ ಇದೇ ಹೈಪೋಥೀಸಿಸ್ ಅತ್ಯಗತ್ಯ ಎಂದು ಪರಿಗಣಿಸುತ್ತಾರೆ.

ಈ ಹೈಪೋಥೀಸಿಸ್‌ನ್ನು ಪ್ರಶ್ನೆ ಮಾಡಲಾಯಿತಾದರೂ ಸಹ, ಜಾತಿವ್ಯವಸ್ಥೆಯ ಉಗಮವನ್ನು ವಿವರಿಸಲು ಇದು ಸಶಕ್ತವಾದುದು ಎಂದು ಒಪ್ಪಿಕೊಳ್ಳಲಾಯಿತು. ಏಷಿಯಾಟಿಕ್ ಸೊಸೈಟಿಯ ಮತ್ತೊಬ್ಬ ಸದಸ್ಯರಾದ ಅಲೆಕ್ಸಾಂಡರ್ ಲಾಂಗ್ಲೈಸ್ Lois de Manou (1833) ಎಂಬ ಭಾಷಾಂತರದ ವಿಮರ್ಶಾ ಲೇಖನದಲ್ಲಿ ಆಶ್ಚರ್ಯಪಟ್ಟು ಹೇಳುವಂತೆ, ಮನುವಿನ ಕಾನೂನುಗಳು ಹಾಗೂ ಜಾತಿವ್ಯವಸ್ಥೆಯನ್ನು ವಾಯುವ್ಯ ಭಾಗದಿಂದ ಭಾರತದಲ್ಲಿ ಸ್ಥಾಪಿಸಲು ಅತ್ಯಂತ ಪ್ರಾಚೀನ ಕಾಲದಲ್ಲಿ ತಂದಿರಬಹುದು. ಮುಂದುವರೆದು ಆತನು ಕೇಳುವಂತೆ, ಇಲ್ಲಿಯ ಮೂಲನಿವಾಸಿಗಳ ಮೇಲೆ ಶಕ್ತಿಯುತ ಮತ್ತು ಜ್ಞಾನೋದಿತ ಆಕ್ರಮಣಕಾರರಿಂದ ಅವುಗಳನ್ನು ಹೇರಲಾಯಿತೆ? ಅಥವಾ ಅದು ಭಾರತದ್ದೇ ಆಗಿದ್ದು ನಾಗರೀಕತೆಯ ನಿಧಾನಗತಿಯ ಬೆಳವಣಿಗೆಯ ಫಲಶೃತಿಯೆ? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು ಅಗತ್ಯವಿದ್ದ ಅಂಶಗಳು ಕಳೆದುಹೋಗಿರಬಹುದು ಎಂಬ ನಿಜಾಂಶವನ್ನು ತಿಳಿದುಕೊಳ್ಳಲು ಹಲವಾರು ಕಾಲಗಳೇ ಬೇಕಾದವು. ಲಾಂಗ್ಲೈಸ್‌ರವರು, ಜಾತಿವ್ಯವಸ್ಥೆ ಎನ್ನುವುದು ಎಲ್ಲಾ ಸಮಾಜಗಳಲ್ಲಿಯೂ ಸ್ವಾಭಾವಿಕವಾಗಿ ಬೆಳವಣಿಗೆ ಹೊಂದುವ ಪ್ರಕ್ರಿಯೆಯಾದರೂ ಭಾರತದ ವಿಷಯದಲ್ಲಿ ಇಲ್ಲಿನ ತತ್ವಶಾಸ್ತ್ರದ ಪರಿಣಾಮದಿಂದಾಗಿ ಇಲ್ಲಿ ಅದು ನಿರ್ಬಂಧಕ್ಕೆ ಒಳಪಟ್ಟಿದೆ ಎಂಬ ಹೈಪೋಥೀಸಿಸ್‌ನತ್ತ ಒಲವು ವ್ಯಕ್ತಪಡಿಸುತ್ತಾರೆ.[24]

ಇಂತಹುದೇ ಅಭಿಪ್ರಾಯಗಳನ್ನು ಸಂಸ್ಕೃತದ ಕುರಿತ ಪೌರಾತ್ಯವಾದದ ಪ್ರಾಧ್ಯಾಪಕರ (ಕಾಲೇಜ್ ಡಿ ಫ್ರಾನ್ಸ್‌ನ ಈಗೆನ್ ಬರ್ನೌಫ್) ಬರಹಗಳಲ್ಲಿ ಕಾಣಬಹುದಾಗಿದೆ. ಸಂಸ್ಕೃತ ಭಾಷೆ ಮತ್ತು ಸಾಹಿತ್ಯದ ಕುರಿತ ಒಂದು ಉಪನ್ಯಾಸದಲ್ಲಿ, ಬರ್ನೌಫ್ ರವರು ಭಾರತೀಯರು ಅವರ ದೇಶಕ್ಕೆ ಅವರು ವಿದೇಶಿಗರು ಎಂಬ ಹೈಪೋಥೀಸಿಸ್‌ನ್ನು ಮಂಡಿಸಿದ್ದರು.[25] ಮುಂದುವರೆದು ಅವರು ಹೇಳುವಂತೆ, ಒಂದೊಮ್ಮೆ ಇದು ನಿಜವೇ ಆಗಿದ್ದಲ್ಲಿ ಪ್ರಸ್ತುತದಲ್ಲಿರುವ ಪ್ರಬಲ ಜನರು ಭಾರತದ ಮೂಲನಿವಾಸಿಗಳನ್ನು ಆಕ್ರಮಣ ಮಾಡಿದ್ದಾರೆ. ಇದಕ್ಕೆ ಬಹುಮುಖ್ಯವಾದ ಆಧಾರವೆಂದರೆ ಅದು ಜಾತಿವ್ಯವಸ್ಥೆ ಎಂದು ಹೇಳುತ್ತಾರೆ.

ಬರ್ನೌಫ್ ಪ್ರಕಾರ, ಭಾರತದಲ್ಲಿ ಸಾಂಸ್ಕೃತಿಕ ವೈವಿಧ್ಯತೆ ಇದ್ದರೂ ಆಳದಲ್ಲಿ ಸ್ಪಷ್ಟವಾದ ಒಗ್ಗಟ್ಟು ಇರುವುದು ಪ್ರತಿಯೊಬ್ಬ ವೀಕ್ಷಕರು ಗುರುತಿಸುತ್ತಾರೆ. ಮತ್ತೊಂದೆಡೆ, ಜ್ಞಾನೋದಿತ/ಬುದ್ಧಿವಂತ ಜನಾಂಗಗಳು ಸ್ಥಾಪಿಸಿರುವ ರಿಲಿಜಿಯಸ್ ಮತ್ತು ನಾಗರೀಕ ಸಂಸ್ಥೆಗಳಲ್ಲಿ ಮಾತ್ರ ಆ ಒಗ್ಗಟ್ಟು ಇದೆ. ವೈವಿಧ್ಯಮಯ ಸಾಂಸ್ಕೃತಿಕ ಅಂಶಗಳು ಮತ್ತೊಂದೆಡೆ, ಭಾರತದಲ್ಲಿ ಮೂಲನಿವಾಸಿ ಬುಡಕಟ್ಟುಗಳು ಉಳಿದುಕೊಂಡಿರುವುದಕ್ಕೆ ಕುರುಹು ಆಗಿವೆ, ಆದರೆ ಒಗ್ಗಟ್ಟನ್ನು ಸಾಧಿಸುವ ಸಲುವಾಗಿ ಆ ವೈವಿಧ್ಯತೆಯನ್ನು ಬಲಯುತವಾಗಿ ಅಧೀನ ಪಡಿಸಲಾಗಿದೆ. ಮುಂದುವರೆದು ಅವರು ವಾದಿಸುವಂತೆ, ಸಾಮಾಜಿಕ ಶ್ರೇಣೀಕರಣದ ಕೆಳಸ್ತರದಲ್ಲಿರುವ ತಿರಸ್ಕೃತ ಜಾತಿಗಳು ಆಕ್ರಮಣಕ್ಕೆ ಒಳಪಟ್ಟ ಜನರ ಅವಶೇಷಗಳಲ್ಲದೆ ಮತ್ತೇನು?

ಇದಾದ ನಂತರವೆ ಬರ್ನೌಫ್‌ರವರು ಕೆಳಜಾತಿ ಮತ್ತು ಮೇಲ್ಜಾತಿಗಳ ನಡುವಿನ ಭಾಷೆ, ಮೈಬಣ್ಣ ಹಾಗೂ ಸಂಪ್ರದಾಯಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸುವ ಮೂಲಕ

ಜಾತಿವ್ಯವಸ್ಥೆ ಹಾಗೂ ಪರಕೀಯರ ಆಕ್ರಮಣಗಳ ನಡುವಿನ ಸಂಬಂಧವನ್ನು ವಿಸ್ತರಿಸಲು ಪ್ರಯತ್ನಿಸಿದರು. ಇಲ್ಲಿ ನಾವು ಗುರುತಿಸಬೇಕಾದ ಮುಖ್ಯವಾದ ಸಂಗತಿ ಎಂದರೆ, ಬರ್ನೌಫ್ ರವರು ಉತ್ತರ ಮತ್ತು ದಕ್ಷಿಣ ಭಾರತೀಯರ ಮೈಬಣ್ಣ, ಭಾಷೆ ಮತ್ತು ಸಂಪ್ರದಾಯಗಳನ್ನು ತುಲನೆ ಮಾಡುತ್ತಿಲ್ಲ, ಹಾಗೂ ಸಂಸ್ಕೃತ ಮಾತನಾಡುವ ಮತ್ತು ಇತರ ಭಾಷೆಗಳ ಜನರ ನಡುವಿನ ವ್ಯತ್ಯಾಸವನ್ನೂ ಅವರು ಹೇಳುತ್ತಿಲ್ಲ, ಬದಲಿಗೆ, ಭಾರತದಲ್ಲಿನ ಮೇಲ್ಜಾತಿ ಮತ್ತು ಕೆಳಜಾತಿಗಳ ನಡುವಿನ ವ್ಯತ್ಯಾಸವನ್ನು ತಿಳಿಸುತ್ತಿದ್ದಾರೆ. ಈ ಹೈಪೋಥೀಸಿಸ್ ಮೂಲಕ ಭಾರತಲ್ಲಿ ಎರಡು ವಿಶಿಷ್ಟವಾದ ಜನಾಂಗಗಳಿವೆ ಎಂಬುದನ್ನು ಸಮರ್ಥಿಸಲು ಹೊರಡಲಿಲ್ಲ, ಬದಲಿಗೆ ಮೇಲ್ಜಾತಿ ಮತ್ತು ಕೆಳಜಾತಿಗಳು ಮೂಲಭೂತವಾಗಿ ಎರಡು ವಿಭಿನ್ನ ಜನಾಂಗಕ್ಕೆ ಸೇರಿದಂತವುದಗಳು ಎಂಬುದನ್ನು ಸಾಬೀತು ಪಡಿಸಲು ಪ್ರಯತ್ನಿಸಿದರು.[26]

19ನೆ ಶತಮಾನದ ಮಧ್ಯಕಾಲದಲ್ಲಿ ಭಾರತದ ರಿಲಿಜನ್ನಿನ ಬಹುತೇಕ ವಿದ್ವಾಂಸರುಗಳು ಆರ್ಯರ ಆಕ್ರಮಣದ ಹೈಪೋಥೀಸಿಸ್‌ನ್ನು ಒಪ್ಪಿದ್ದರು. ಅಪರೂಪಕ್ಕೊಮ್ಮೆ ಆಧಾರಗಳ ಕೊರತೆ ಕಂಡುಬಂದಾಗ ವಿದ್ವಾಂಸರು ಅನುಮಾನ ಪಡುತ್ತಿದ್ದರು ಎನ್ನುವುದನ್ನು ಬಿಟ್ಟರೆ ಆ ಹೈಪೋಥೀಸಿಸ್‌ನ್ನು ಎಂದಿಗೂ ಅವರು ತಿರಸ್ಕರಿಸಲಿಲ್ಲ. ಅಂತಹ ವಿದ್ವಾಂಸರಲ್ಲಿ ಬಾಂಬೆಯ ಗೌರ್ನರ್ ಆಗಿದ್ದ ಮೌಂಟ್ ಸ್ಟುವರ್ಟ್ ಎಲ್ಫಿನ್‌ಸ್ಟನ್ ಒಬ್ಬರು. 1841ರಲ್ಲಿ ರಚನೆಯಾದ ಅವರ ಪ್ರಭಾವಶಾಲಿ ಬರಹವಾದ ದ ಹಿಸ್ಟರಿ ಆಫ್ ಇಂಡಿಯಾ ದಲ್ಲಿ ಭಾರತೀಯರು ವಿದೇಶಿ ಮೂಲದವರು ಎನ್ನವುದಕ್ಕೆ ಆಧಾರಗಳ ಕೊರತೆ ಇದೆ ಎನ್ನುವುದನ್ನು ಉಲ್ಲೇಖಿಸಿದ್ದರು. ಆದಾಗ್ಯೂ ಜಾತಿವ್ಯವಸ್ಥೆಯ ಅಸ್ತಿತ್ವದ ವಿವರಣೆಗೆ ಆಕ್ರಮಣದ ಚಿಂತನೆಯು ಉತ್ತಮವಾದುದು ಎಂದು ನಂಬಿದ್ದರು.

ವೇದಗಳ ಹಾಗೂ ಮನುವಿನ ಕಾನೂನುಗಳ ಓದಿನ ಹಿನ್ನೆಯಲ್ಲಿ ಎಲ್ಫಿನ್‌ಸ್ಟನ್ ಗುರುತಿಸಿರುವಂತೆ, ದ್ವಿಜರೆಂದು ಕರೆಯಲ್ಪಡುವ ಮೂರು ಸಮುದಾಯಗಳು ಕಾನೂನಿನ ಅನ್ವಯವಾಗಿ ಇದ್ದರೆ, ಶೂದರ್ರು ಗುಲಾಮಗಿರಿ ಮತ್ತು ನಿಕೃಷ್ಟವಾದ ಸ್ಥಿತಿಯಲ್ಲಿ ಇದ್ದಾರೆ. ಮತ್ತೊಂದು ಅಂಶವನ್ನು ಅವರು ಹೇಳುವಂತೆ, ಕೆಲವಾರು ಪ್ರದೇಶಗಳಲ್ಲಿ ಶೂದ್ರ ರಾಜರುಗಳು ಆಳುತ್ತಿದ್ದಾರೆ, ಅಂತಹ ಪ್ರದೇಶಗಳಲ್ಲಿ ಬ್ರಾಹ್ಮಣರು ವಾಸಿಸಬಾರದು ಎಂದು ಮನುವು ಹೇಳುತ್ತಾನೆ, ಒಂದು ಪ್ರದೇಶದ ತುಂಬೆಲ್ಲಾ ಶೂದ್ರರೇ ಇದ್ದರೆ, ಅಲ್ಲಿ ನಾಸ್ತಿಕತೆ ಮತ್ತು ವಂಚಿತ ಬ್ರಾಹ್ಮಣರು ಹೆಚ್ಚಾಗಿರುತ್ತಾರೆ.[27] ಈ ಎಲ್ಲಾ ಅಂಶಗಳಿಂದ ಅವರು ಪರಿಗಣಿಸುವಂತೆ, ದ್ವಿಜರು ಆಕ್ರಮಣ ಮಾಡುವ ಜನರು ಎಂದು ಹೇಳಲು ಸಾಧ್ಯವಾಗುವುದಿಲ್ಲ; ದಾಸ್ಯವರ್ಗವು ಮೂಲನಿವಾಸಿ ಬುಡಕಟ್ಟುಗಳ ಸದ್ದಡಗಿಸುವುದು; ಶೂದ್ರರ ಸ್ವತಂತ್ರ ಪ್ರದೇಶಗಳು ಚಿಕ್ಕಚಿಕ್ಕ ಪ್ರದೇಶಗಳಾಗಿ ಹಿಂದೂಸ್ಥಾನ ವಿಭಾಗಗೊಂಡಿದ್ದು ಈಗಲೂ ಸ್ವತಂತ್ರವಾಗಿದೆ. ಎಲ್ಫಿನ್‌ಸ್ಟನ್ ರವರು ಆಕ್ರಮಣ ಸಿದ್ಧಾಂತವನ್ನು ಸಂಪೂರ್ಣವಾಗಿ ತಿರಸ್ಕರಿಸದೆ ಮತ್ತೊಂದು ರೀತಿಯ ವ್ಯಾಖ್ಯಾನವನ್ನು ನೀಡಲು ಮುಂದಾಗುತ್ತಾರೆ, ಅದೆಂದರೆ ಆಕ್ರಮಣಕಾರರು ಪ್ರಾಯಶಃ ಗ್ರೀಸ್‌ನ ಡೋರಿಯನ್ ಗಳಂತೆ ಸ್ಥಳೀಯ ಬುಡಕಟ್ಟುಗಳು ಇರಬಹುದು, ಅಥವಾ ಇಲ್ಲಿಯದೇ ಪ್ರದೇಶದ ಮತ್ತೊಂದು ಭಾಗದವರು ಇರಬಹುದು. ಅವರೆಲ್ಲರೂ ತಮ್ಮ ಅನುಕೂಲಕ್ಕೆ ತಕ್ಕಂತೆ ಸಮಾಜವನ್ನು ಬಳಸಿಕೊಂಡಿರಬಹುದು.[28]

ದ್ರಾವಿಡರ ವಿನ್ಯಾಸ

ದ್ರಾವಿಡ ಭಾಷಾ ಸಮೂಹದ ಅನ್ವೇಷಣೆಯು ಆರ್ಯರ ಆಕ್ರಮಣದ ಸಿದ್ಧಾಂತ

ರೂಪುಗೊಳ್ಳುವಲ್ಲಿ ಮುಖ್ಯವಾದ ಕೊಡುಗೆಯನ್ನು ನೀಡಿದೆ. ಭಾಷೆಗೂ ಹಾಗೂ ನಿರ್ದಿಷ್ಟ ಜನರಿಗೂ ಸಂಬಂಧವಿರುತ್ತದೆ ಎನ್ನುವ ನಂಬಿಕೆಯ ಆಧಾರದ ಮೇಲೆ, ಈ ಅನ್ವೇಷಣೆಯು ಸಂಸ್ಕೃತ ಮಾತನಾಡುವ ಹಾಗೂ ದ್ರಾವಿಡ ಭಾಷೆಗಳನ್ನಾಡುವ ಎರಡು ವಿಭಿನ್ನ ಜನಾಂಗಗಳಿವೆ ಎಂಬ ಚಿಂತನೆಯನ್ನು ಹುಟ್ಟಿಹಾಕಿತು. ದ್ರಾವಿಡ ಜನಾಂಗ ಎಂಬ ಪರಿಕಲ್ಪನೆಯ ಬೆಳವಣಿಗೆಗೆ ಇದು ಅಗತ್ಯವಾಗಿದ್ದರೂ, ನಾವು ಬೇರೊಂದು ಆಯಾಮವನ್ನು ಸೂಚಿಸಲು ಇಚ್ಛಿಸುತ್ತೇವೆ, ದ್ರಾವಿಡ ಭಾಷಾ ಸಮೂಹದ ಅನ್ವೇಷಣೆಯು ಸ್ಥಳೀಯ ದ್ರಾವಿಡ ಜನರ ಕುರಿತ ಚಿಂತನೆಯನ್ನು ಹುಟ್ಟುಹಾಕಲಿಲ್ಲ, ಬದಲಿಗೆ ಅದನ್ನು ಇನ್ನೂ ಬಲವರ್ಧನೆ ಮಾಡಿತು. ಭಾಷಾಶಾಸ್ತ್ರದ ಅನ್ವೇಷಣೆಯ ಮುನ್ನವೇ ಶೂದ್ರರು ಸ್ಥಳೀಯ ಬುಡಕಟ್ಟು ಜನಾಂಗ ಎಂಬ ನಂಬಿಕೆಯ ಆಧಾರದ ಮೇಲೆ ವಿಭಿನ್ನವಾದ ಭಾಷಾ ಸಮೂಹಗಳು ಅಸ್ತಿತ್ವದಲ್ಲಿವೆ ಎಂಬ ಚಿಂತನೆ ಆಗಲೆ ಪ್ರಚಲಿತದಲ್ಲಿತ್ತು.

ತಕ್ಷಣದಲ್ಲಿ ನಾವು ಯಾವುದೇ ನಿರ್ಣಯಕ್ಕೆ ಬಾರದಿದ್ದರೂ, ನಮ್ಮ ತಾತ್ಕಾಲಿಕ ಸಂಶೋಧನೆ ತಿಳಿಸುವಂತೆ, ದಕ್ಷಿಣ ಭಾರತೀಯ ಭಾಷೆಗಳ ಅನ್ವೇಷಣೆಯು ಮೂಲನಿವಾಸಿ ಬುಡಕಟ್ಟುಗಳ ಅಸ್ತಿತ್ವನ್ನು ಹುಡುಕುವ ಉದ್ದೇಶದಿಂದ ರೂಪುಗೊಂಡದ್ದು ಎಂಬುದು ಸ್ಪಷ್ಟ. (ಆದರೆ ಉದ್ದೇಶದಿಂದ ಅನ್ವೇಷಣೆ ಪ್ರಾರಂಭವಾಗಲಿಲ್ಲ) ಭಾಷಾ ಸಮೂಹಗಳ ಅನ್ವೇಷಣೆಯು ಸಂಸ್ಕೃತ ಭಾಷೆಯಿಂದ ಪ್ರಭಾವ ಹೊಂದಿ ಪ್ರಾರಂಭವಾದ್ದಲ್ಲ, ಹಾಗೂ ಭಾರತವನ್ನು ಹಿಂದೆ ಯಾರೋ ಬೇರೆ ಭಾಷೆ ಮತ್ತು ರಿಲಿಜನ್ ಇಟ್ಟುಕೊಂಡು ಆಳಿದ್ದರು ಎನ್ನುವುದನ್ನು ತೋರಿಸುವುದಕ್ಕೂ ಅಲ್ಲ. ಭಾಷೆಗಳ ತುಲನೆಗೆ ನೋವಾನ ಮಕ್ಕಳನ್ನು ಹುಡುಕುವ ಶೋಧನೆ ಇಂಬು ನೀಡಿದ ರೀತಿಯಲ್ಲಿಯೆ, ಸಂಸ್ಕೃತ ಮತ್ತು ಭಾರತೀಯ ಭಾಷೆಗಳ ನಡುವಿನ ವ್ಯತ್ಯಾಸದ ಕುರಿತ ಸಂಶೋಧನೆಯನ್ನು ರೂಪಿಸಿದ ಹಿಂದೂ ಆಕ್ರಮಣದ ಕುರಿತು ನಾವು ಹೈಪೋಥಿಸಿಸ್‌ನ್ನು ಮಂಡಿಸುತ್ತೇವೆ.

ಥಾಮಸ್ ಟ್ರಾಟ್‌ಮನ್ ರವರು ತಮ್ಮ ಗ್ರಂಥವಾದ ಲಾಂಗ್ವೇಜ್ ಅಂಡ್ ನೇಶನ್ಸ್ (2006)ನಲ್ಲಿ ಇದೇ ದಿಕ್ಕಿನಲ್ಲಿ ಮಾತನಾಡುತ್ತಾರೆ. ತಮ್ಮ ಸಮಕಾಲೀನರಾದ ಫೋರ್ಟ್ ಸೈಂಟ್ ಜಾರ್ಜ್‌ನ ಎಫ್.ಡಬ್ಲ್ಯೂ.ಎಲ್ಲಿಸ್‌ರವರ ಬರಹಗಳನ್ನು ಪರೀಕ್ಷಿಸುತ್ತಾ, ಟ್ರಾಟ್‌ಮನ್ ರವರು ಓದುಗರಿಗೆ ಹೇಳುವಂತೆ, ಆತನು ದ್ರಾವಿಡರ ಆಧಾರಕ್ಕೆ ಆ ಕಾಲೇಜು ಕಾರಣ ಎಂದು ಪರಿಭಾವಿಸಿ ತನ್ನ ಸಂಶೋಧನೆಯನ್ನು ಪ್ರಾರಂಭಿಸಿದ, ಅಂದರೆ ಆ ಕಾಲೇಜು ದ್ರಾವಿಡ ಭಾಷೆಯನ್ನು ತುಲನೆ ಮಾಡಲು ಅಗತ್ಯವಿರುವ ಕೌಶಲ್ಯಗಳನ್ನು ಹೊಂದಿರುವ ವಿದ್ವಾಂಸರುಗಳ ಸ್ಥಳ ಎಂದು ಭಾವಿಸಿದ್ದ.[29] ಏನೇ ಆದರೂ, ಆತನಿಗೆ ತಡವಾಗಿ ತಿಳಿದುಬಂದದ್ದೆಂದರೆ, ಕಾಲೇಜನ್ನು ಸ್ಥಾಪಿಸಲು ತಯಾರಾಗಿದ್ದ ವರದಿಯಲ್ಲೇ ಈಗಾಗಲೆ ದ್ರಾವಿಡರ ಚಿಂತನೆ ಇತ್ತು [ದಿ ಅಕ್ಟೋಬರ್ 20, 1811] ಹಾಗೂ ಅದುವೆ ಅದಕ್ಕೆ ರಚನೆಯನ್ನು ನೀಡಿತು. ಬೇರೆ ಮಾತುಗಳಲ್ಲಿ ಹೇಳುವುದಾದರೆ, ಕಾಲೇಜು, ದ್ರಾವಿಡ ಚಿಂತನೆಗೆ ಕಾರಣವಲ್ಲ ಬದಲಿಗೆ ದ್ರಾವಿಡ ಚಿಂತನೆಯೇ ಕಾಲೇಜನ್ನು ರೂಪಿಸಿತ್ತು.[30] ಟ್ರಾಟ್‌ಮನ್ ಯೋಚಿಸುವಂತೆ, ದಕ್ಷಿಣ ಭಾರತದ ಭಾಷೆಗಳಲ್ಲಿ ಒಂದು ಸಾಮಾನ್ಯ ರಚನೆಯನ್ನು ಕಂಡುಹಿಡಿಯುವ ಪ್ರಯತ್ನವು ದಕ್ಷಿಣ ಭಾರತದ ಭಾಷೆಗಳನ್ನು ಅಧ್ಯಯನ ನಡೆಸಲು ಪ್ರೋತ್ಸಾಹ ನೀಡುವುದಕ್ಕಾಗಿ ಬೆಳೆದುಬಂದಿತು. ಕಾಲೇಜಿನ ಯೋಜನೆಗಳಲ್ಲಿ, ಎಲ್ಲಿಸ್‌ರವರು ವಾದಿಸಿದಂತೆ, ಯಾರಾದರೂ ಸಾಮಾನ್ಯ ರಚನೆಯನ್ನು ಅಧ್ಯಯನ ಮಾಡಿದರೆ, ಅದು ಅವರಿಗೆ ದಕ್ಷಿಣ ಭಾರತದ ಭಾಷೆಗಳನ್ನು ಕಲಿಯಲು ಸಹಾಯ ಮಾಡುತ್ತದೆ.

ಏನೇ ಆದರೂ, ದಕ್ಷಿಣ ಭಾರತದ ಭಾಷೆಗಳು ಸಂಸ್ಕೃತದಿಂದ ಬಂದಿಲ್ಲ ಎನ್ನುವುದದನ್ನು ಗುರುತಿಸುವುದಕ್ಕೆ ಎಲ್ಲಿಸ್‌ರವರಿಗೆ ಅಂತಹ ಚಿಂತನೆ ಏಕೆ ಬಂದಿತು ಎಂಬುದನ್ನು ಇದು ವಿವರಿಸುವುದಿಲ್ಲ.

1807ರಲ್ಲಿ ಕೋಲಿನ್ ಮೆಕೆಂಝಿ ಬರೆದಂತಹ ಸುತ್ತೋಲೆಯ ಪತ್ರದಲ್ಲಿ ಅವರು ಮತ್ತೊಂದು ಸೂಚನೆಯನ್ನು ನೀಡುತ್ತಾರೆ, ಅದೆಂದರೆ ದಕ್ಷಿಣ ಭಾರತದ ಭಾಷಾ ಸಮೂಹಗಳ ಚಿಂತನೆಗಳು ಭಾಷಿಕ ಸಂಶೋಧನೆಗೆ ಎಡೆಮಾಡಿಕೊಟ್ಟಿವೆ. ಆ ಸುತ್ತೋಲೆಯಲ್ಲಿ, ಮದ್ರಾಸ್ ಸಂಸ್ಥಾನಕ್ಕೆ ಸಂಬಂಧಿಸಿದಂತೆ ತಿಳಿದುಕೊಳ್ಳಬೇಕಿರುವ ಮಾಹಿತಿಗಳನ್ನು ಹಾಗೂ ತನಿಖೆಗಳ ಒಂದು ಪಟ್ಟಿಯನ್ನು ಮೆಕೆಂಝಿ ನೀಡುತ್ತಾರೆ, ಹಾಗೂ ಟ್ರಾಟ್‌ಮನ್ ತಿಳಿಸುವಂತೆ ದಕ್ಷಿಣ ಭಾರತದ ಭಾಷೆಗಳ ಬಗ್ಗೆ ಹಾಗೂ ಅವು ಸಂಸ್ಕೃತದಿಂದ ವ್ಯುತ್ಪತ್ತಿ ಆಗದಿರುವ ಬಗ್ಗೆ ಹಲವಾರು ಪ್ಯಾಸೇಜ್‌ಗಳನ್ನು ಸೇರಿಸಲಾಗಿತ್ತು.[31] ಸುತ್ತೋಲೆಯು ವಾದಿಸಿದಂತೆ, ದಕ್ಷಿಣ ಭಾರತದ ಹಿಂದೂಗಳ ಭಾಷೆಗಳು ಸಂಸ್ಕೃತದಿಂದ ವ್ಯುತ್ಪತ್ತಿಯಾಗಿಲ್ಲ ಹಾಗೂ ಬ್ರಾಹ್ಮಣರು ಮತ್ತು ಅವರ ಭಾಷೆ ರಿಲಿಜನ್‌ಗಳು ಉತ್ತರದಿಂದ ಬಂದಿವೆ ಎನ್ನುವುದಕ್ಕೆ ಸಾಕಷ್ಟು ಪುರಾವೆಗಳು ದೊರಕುತ್ತವೆ. ಇದು ಮೆಕೆಂಝಿಯವರಿಗೆ ಮುಂದಿನ ಪ್ರಶ್ನೆಗಳು ಉದ್ಭವವಾಗುವಂತೆ ಮಾಡಿತು: ದಕ್ಷಿಣ ಭಾರತದಲ್ಲಿರುವ ಭಾಷೆಗಳ ಮೂಲ ಅಥವಾ ಪೋಷಕ ಭಾಷೆಯನ್ನು ಕಂಡುಹಿಡಿಯಲು ಸಾಧ್ಯವೆ? ಹಾಗಿದ್ದರೆ, ಅದರ ಹೆಸರು ಏನಿರಬಹುದು? ಅದು ಮೊದಲು ಎಲ್ಲಿ ಸ್ಥಳೀಯ ಭಾಷೆಯಾಗಿತ್ತು? ಹಾಗೂ ಆ ಭಾಷೆಯು ಇತರ ದ್ವೀಪದ ಭಾಷೆಗಳನ್ನು ರೂಪಿಸಿದ್ದು ಹೇಗೆ?[32]

ಮೆಕೆಂಝಿಯೂ ಸಹ ಭಾರತದಲ್ಲಿ ಬ್ರಾಹ್ಮಣರು ಮತ್ತು ಮೂಲನಿವಾಸಿಗಳ ನಡುವಿನ ವಿಭಾಗವನ್ನು ಒಪ್ಪಿಕೊಂಡಿದ್ದರು. ಸ್ವಲ್ಪ ವರ್ಷಗಳ ಮುನ್ನ, ಅವರು ಸೂಚಿಸಿದಂತೆ ಹಲವಾರು ಪ್ರಾಂತ್ಯಗಳಲ್ಲಿರುವ ಬ್ರಾಹ್ಮಣರು ಸುಂದರವಾದ ಮೈಬಣ್ಣವನ್ನು ಹಾಗೂ ಒಂದೇ ರೀತಿಯ ಗುಣಲಕ್ಷಣಗಳನ್ನು ಹೊಂದಿರುವುದನ್ನು ಪರಿಗಣಿಸುತ್ತಾರೆ. ಈ ಕಾರಣದಿಂದ ಅವರು ವಿಶಿಷ್ಟವಾದ ವರ್ಗವಾಗಿದ್ದು, ತಮಿಳರು, ತೆಲ್ಲಿಂಗರು, ಕೆನರಿಗಳು, ಮರಾಠರು ಹಾಗೂ ಓರಿಯಾದವರಿಗಿಂತ ವಿಭಿನ್ನವಾಗಿ ನಿಲ್ಲುತ್ತಾರೆ. ಈ 5 ಕುಟುಂಬಗಳು ಮೂಲನಿವಾಸಿಗಳ ಬುಡಕಟ್ಟನ್ನು ರೂಪಿಸಿರುವಂತೆ ಕಾಣಿಸುತ್ತದೆ.[33]

ಆದ್ದರಿಂದ, ದಕ್ಷಿಣ ಭಾರತೀಯ ಭಾಷೆಗಳನ್ನು ಅಧ್ಯಯನ ಮಾಡುವುದು ಮುಖ್ಯವಾದುದು ಎಂದು ಮೆಕೆಂಝಿಯವರು ಪರಿಗಣಿಸುತ್ತಾರೆ, ಏಕೆಂದರೆ ಅವು ಸಂಸ್ಕೃತದಿಂದ ವ್ಯುತ್ಪತ್ತಿ ಯಾಗಿಲ್ಲ ಎಂಬುದು ಬಹು ಮುಖ್ಯವಾದ ಸಂಗತಿಯಾಗಿದೆ. ಈ ದಶಕದಲ್ಲಿ, ಬಹುತೇಕ ವಿದ್ವಾಂಸರು ಎಲ್ಲಾ ಸ್ಥಳೀಯ ಭಾಷೆಗಳು ಸಂಸ್ಕೃತದಿಂದ ಬಂದಿವೆ ಎನ್ನುವುದನ್ನೇ ನಂಬಿದ್ದರು. ಅಂತಹ ಸಂದರ್ಭದಲ್ಲಿ, ಮೆಕಂಝಿಯವರ ಪ್ರತಿಪಾದನೆ ಕೇವಲ ಒಂದು ಅಭಿಪ್ರಾಯ ವಾಗಿತ್ತು. ಏಕೆಂದರೆ ಅದಕ್ಕೆ ಯಾವುದೇ ಸಂಶೋಧನೆಯ ಪುರಾವೆಗಳಿರಲಿಲ್ಲ. ಅಂತಹ ಅಭಿಪ್ರಾಯಗಳು, ವಿಜ್ಞಾನದ ಬೆಳವಣಿಗೆಯ ಇತಿಹಾಸವನ್ನು ನಾವು ಗಮನಿಸಿರುವಂತೆ, ಒಂದು ನಿರ್ದಿಷ್ಟ ಚಿಂತನೆಗಳಿಗೆ ವಿರುದ್ಧವಾಗಿ ಹಿನ್ನೆಲೆಯಲ್ಲಿ ನಿಲ್ಲುತ್ತವೆ. ಇಂತಹ ಸುತ್ತೋಲೆಗಳು ಹಾಗೂ ಹಿಂದಿನ ಬರವಣಿಗೆಗಗಳು ಇಂತಹ ಹಿನ್ನೆಲೆಯ ಚಿಂತನೆಯಾಗಿರುವುದನ್ನು ಸೂಚಿಸುತ್ತವೆ. ಮೆಕೆಂಝಿಯು, ಸಂಸ್ಕೃತವು ಒಂದು ಭಾಷೆಯಾಗಿದ್ದು ಅದು ಬ್ರಾಹ್ಮಣರು ಮತ್ತು ಅವರ ರಿಲಿಜನ್‌ನ ಒಟ್ಟಿಗೆ ಉತ್ತರದಿಂದ ಬಂದಿದೆ ಎಂಬುದನ್ನು ಸಂಪೂರ್ಣವಾಗಿ ಒಪ್ಪುತ್ತಾರೆ. ಆದ್ದರಿಂದ, ಆತನ ಸಂಶೋಧನಾ ವಿನ್ಯಾಸವು ಸಂಸ್ಕೃತದಿಂದ ಹೊರತಾಗಿ

ದಕ್ಷಿಣ ಭಾರತದ ಭಾಷೆಗಳಿಗೆ ಇದ್ದಿರಬಹುದಾದ ಸಾಮಾನ್ಯ ಭಾಷಿಕ ರಚನೆಯನ್ನು ಹುಡುಕಲು ರೂಪುಗೊಂಡಿತ್ತು.[34]

ಈ ನಿಟ್ಟಿನಲ್ಲಿ ದ್ರಾವಿಡ ಭಾಷಾ ಸಮೂಹದ ಕುರಿತ ಸಂಶೋಧನೆಗಳು ಕಾಲೇಜ್ ಆಫ್ ಫೋರ್ಟ್ ಸೈಂಟ್ ಜಾರ್ಜನಲ್ಲಿ ಜರುಗಿದವು. ಇಂತಹ ಸಂಶೋಧನೆಯ ಮೊದಲ ಫಲಶೃತಿ ಎಂದರೆ ಅಲೆಕ್ಸಾಂಡ್ ಕ್ಯಾಂಪ್‌ಬೆಲ್ (1816)ರ ಎ ಗ್ರಾಮರ್ ಆಫ್ ತೆಲುಗೂ ಕೃತಿಯಾಗಿದೆ. ಈ ಬರಹದಲ್ಲಿ ಕ್ಯಾಂಪ್‌ಬೆಲ್ ರವರು ಗುರುತಿಸುವಂತೆ, ತೆಲಿಂಗಣದಲ್ಲಿ ಮೂರು ಕನಿಷ್ಟ ವರ್ಗಗಳು ಅಥವಾ ಕಾಸ್ಟ್‌ಗಳನ್ನು ಗುರುತಿಸುತ್ತಾರೆ, ಅವೆಂದರೆ ವೆಲ್ಮವಾರ್‌ಗಳು, ಕಾಮ್ಮಿಗಳು ಹಾಗೂ ಸೂದ್ರಜಾತಿಗಳು, ಇವು ಆ ದೇಶದ ಮೂಲನಿವಾಸಿ ಬುಡಕಟ್ಟುಗಳ ಸಂತತಿ ಗಳಾಗಿದ್ದು, ಬ್ರಾಹ್ಮಣರೆಂಬ ಪವಿತ್ರ ಬುಡಕಟ್ಟಿನಿಂದಾಗಿ ಇವುಗಳು ತಮ್ಮ ಭಾಷೆಯ ಸಂಸ್ಕೃತಿಯಿಂದ ಹೊರಗುಳಿದಿದ್ದಾರೆ. ಈ ಮೂರು ಕನಿಷ್ಟ ಜಾತಿಗಳು ತೆಲಿಂಗಣದ ಮೂಲ ಭಾಷೆಯನ್ನು ಉಳಿಸಿಕೊಂಡಿದ್ದಾರೆ, ಹಾಗೂ ಬ್ರಾಹ್ಮಣರ ಸಂಸ್ಕೃತ ಭಾಷೆಯನ್ನು ಅತ್ಯಂತ ವಿರಳವಾಗಿ ಬಳಸುತ್ತಾರೆ.[35]

ಸಂಸ್ಕೃತವನ್ನು ಬ್ರಾಹ್ಮಣರ ಭಾಷೆ ಎಂದು, ಹಾಗೂ ಪವಿತ್ರವಾದ ಬುಡಕಟ್ಟು ಎಂದು, ಮತ್ತು ಉನ್ನತ ಜಾತಿ ಎಂದು ನೋಡುವ ಮೂಲಕ ಕ್ಯಾಂಪ್‌ಬೆಲ್‌ರವರು ಉನ್ನತ ಜಾತಿಗಳಿಗೆ ಹೋಲಿಸಿದರೆ ಶೂದ್ರರು ಸಂಸ್ಕೃತ ಪದಗಳನ್ನು ಎಷ್ಟು ಬಳಸುತ್ತಾರೆ ಎಂಬುದನ್ನು ನೋಡಲು ಪ್ರಯತ್ನಿಸಿದರು. ಕ್ಯಾಂಪ್‌ಬೆಲ್ ಪ್ರಕಾರ, ಶೂದ್ರರು ಕೇವಲ ಸಂಸ್ಕೃತ ಪದಗಳನ್ನು ತೆಲುಗು ಮಾತನಾಡುವಾಗ ಅತ್ಯಲ್ಪ ಪ್ರಮಾಣದಲ್ಲಿ ಬಳಸುವುದಷ್ಟೇ ಅಲ್ಲ, ಅದರ ಜೊತೆಗೆ ಉನ್ನತ ಜಾತಿಯವರಂತೆ ಸ್ಪಷ್ಟವಾಗಿ ಮತ್ತು ಸರಾಗವಾಗಿ ಶೂದ್ರರು ಮಾತನಾಡುವುದಿಲ್ಲ. ಹಾಗೂ ಬ್ರಾಹ್ಮಣರೊಂದಿಗಿನ ಒಡನಾಟ ಮತ್ತು ಅವರ ಪುಸ್ತಕಗಳ ಪ್ರಭಾವದಿಂದಾಗಿ ಸಂಸ್ಕೃತ ಪದಗಳ ಬಳಕೆ ಶೂದ್ರರಲ್ಲಿಯೂ ಹೆಚ್ಚಾಗಿದೆ. ಬ್ರಾಹ್ಮಣರು ಶುದ್ಧ ತೆಲುಗು ಪದಗಳನ್ನು ಉಚ್ಚಾರ ಮಾಡುವುದರ ಕುರಿತು ಪ್ರಶ್ನೆಗಳನ್ನು ಕೇಳಲೂ ಇಲ್ಲ. ಈ ಎಲ್ಲಾ ನಿಜಾಂಶಗಳ ಆಧಾರದ ಮೇಲೆ, ತೆಲುಗು ಮತ್ತು ಸಂಸ್ಕೃತದ ನಡುವೆ ಯಾವುದೋ ರಚನಾತ್ಮಕ ವ್ಯತ್ಯಾಸವನ್ನು ತಿಳಿಸುವ ಬದಲಿಗೆ ಸಂಸ್ಕೃತವು ವಿದೇಶಿ ಭಾಷೆಯಾಗಿದ್ದು ಅದು ದಕ್ಷಿಣ ಭಾರತಕ್ಕೆ ಬಂದಿದೆ ಎಂಬುದಾಗಿ ಪರಿಗಣಿಸಿತ್ತಾರೆ.[36]

ತೆಲುಗು ಭಾಷೆಯು ಸಂಸ್ಕೃತದಿಂದ ವ್ಯುತ್ಪತ್ತಿಯಾಗಿಲ್ಲ ಎಂದು ವಾದಿಸಲು ತೆಲುಗು ವ್ಯಾಕರಣಕಾರರು ಮರುನಿರೂಪಣೆಗಳ ಕುರಿತು ಮಾಡಿದ ವರ್ಗೀಕರಣಗಳನ್ನು ಪರಿಗಣಿಸಬೇಕಾಗುತ್ತದೆ. ಕ್ಯಾಂಪ್‌ಬೆಲ್ ಪ್ರಕಾರ, ತೆಲುಗು ವ್ಯಾಕರಣಕಾರರು ಎರಡೂ ಭಾಷೆಗಳ ಮೂಲ ವಿಭಿನ್ನವಾದವು ಎಂದು ಗುರುತಿಸಿದ್ದಾರೆ; ಅವರ ಪ್ರತಿಯೊಂದು ಬರಹಗಳು ಭಾಷೆಗಳಲ್ಲಿರುವ ಪದಗಳನ್ನು 4 ವಿಭಾಗಗಳಾಗಿ ವಿಂಗಡಿಸುತ್ತಾರೆ, ಅವುಗಳೆಂದರೆ, ...ನೆಲದ ಭಾಷೆ, ...ಸಂಸ್ಕೃತ ವ್ಯುತ್ಪತ್ತಿಗಳು, ...ಭ್ರಷ್ಟಗೊಂಡ ಸಂಸ್ಕೃತ, ಹಾಗೂ ..ಪ್ರಾದೇಶಿಕ ಪದಗಳು.[37] ದೇಶ್ಯ ಅಥವಾ ನೆಲದ ಭಾಷೆ ಪ್ರಭೇದವನ್ನು ಭಾರತದಲ್ಲಿ ಮೂಲ ಭಾಷೆಯೊಂದಿತ್ತು (ಸಂಸ್ಕೃತದ ಹೊರತಾಗಿ) ಎನ್ನುವುದಕ್ಕೆ ಆಧಾರವನ್ನಾಗಿ ನಿರೂಪಣೆ ಮಾಡಲಾಯಿತು. ಇದೇ ವಾದವನ್ನು ಎಲ್ಲಿಸ್‌ರವರು ತಮ್ಮ 'ನೋಟ್ ಟು ದ ಇಂಟ್ರಡಕ್ಷನ್ ಇನ್ ಕ್ಯಾಂಪ್ ಬೆಲ್ ಗ್ರಾಮರ್'[38] ಕೃತಿಯಲ್ಲಿಯೂ ಬಳಸಿಕೊಂಡರು.

ಟ್ರಾಟ್‌ಮನ್ ವಾದಿಸುವಂತೆ, ಏನೇ ಆದರೂ ಕ್ಯಾಂಪ್ ಬೆಲ್ ಹಾಗೂ ಎಲ್ಲಿಸ್ ರವರು ದೇಶ್ಯ ಪದದ ನಿರೂಪಣೆಯಲ್ಲಿ ಅದು ಮೂಲ ನಿವಾಸಿ ಭಾಷೆ ಎಂದು ತಪ್ಪಾಗಿ

ಗುರುತಿಸಿದ್ದಾರೆ, ಆದರೂ ಅಂತಹ ವರ್ಗೀಕರಣವನ್ನು ತೆಲುಗು ವ್ಯಾಕರಣಕಾರರು ಬಳಸಿ ಕೊಂಡಿದ್ದರು. ಕ್ಯಾಂಪ್‌ಬೆಲ್ ಹಾಗೂ ಎಲ್ಲಿಸ್‌ರವರುಗಳಿಗೆ ಆಗಿನ ಕಾಲದಲ್ಲಿ ಪ್ರಮುಖವಾದ ಎದುರಾಳಿ ವಿಲಿಯಂ ಕಾರೆ ಆಗಿದ್ದರು. ಕಾರೆಯವರ ವಿಶ್ಲೇಷಣೆಯು ಟ್ರಾಟ್‌ಮನ್ ರವರು ಪ್ರತಿಪಾದಿಸುವಂತೆ, ತೆಲುಗು ಭಾಷೆಯ ಪ್ರಾಕೃತ ವ್ಯಾಕರಣಕಾರರ ಹಾದಿಯಲ್ಲಿಯೇ ಇದೆ: ಕ್ಯಾಂಪ್‌ಬೆಲ್, ಸಂಕ್ಷಿಪ್ತವಾಗಿ, ಪ್ರಾಚೀನ ಬರಹಗಾರರ ಬಗ್ಗೆ ಸರಳವಾದ ಅರ್ಥವನ್ನು ನೀಡುತ್ತಿದ್ದೇನೆ ಎಂದು ಅವರು ಯೋಚಿಸಬಹುದು, ಆದರೆ ಯೂರೋಪ್ ಮತ್ತು ಭಾರತದ ಸಂಪ್ರದಾಯಗಳು ಬ್ರಿಟೀಷ್ ಭಾರತದ ಮದ್ರಾಸಿನಲ್ಲಿ ಮುಖಾಮುಖಿಯಾದಾಗ ಒಡಮೂಡಿದ ಒಂದು ಹೊಸ ಚಿಂತನೆಯಾಗಿದೆ.[39] ಇದನ್ನೆ ಕ್ಯಾಂಪ್‌ಬೆಲ್ ಮತ್ತು ಎಲ್ಲಿಸ್ ರವರು ತೆಲುಗು ಭಾಷೆಯಲ್ಲಿ ಸಂಸ್ಕೃತ ಪದಗಳ ಪರಿಚಯವು ಪ್ರಾಚೀನ ಕಾಲದಲ್ಲಿ ಆಗಿತ್ತು ಎಂದು ಭಾವಿಸುತ್ತಾರೆ: ಬ್ರಾಹ್ಮಣರ ರಿಲಿಜನ್‌ನೊಂದಿಗೆ, ತಿಲಿಂಗಣದ ಜನರು ಅಸಾಮಾನ್ಯ ಬುಡಕಟ್ಟಿನ ಭಾಷೆಯನ್ನು ಸೇರಿಸಿಕೊಳ್ಳುವುದರಲ್ಲಿ ವಿಫಲರಾಗಲಿಲ್ಲ.[40]

ವಿಲಿಯಮ್ ಕ್ಯಾಂಪ್ ಬೆಲ್ ರವರು ತಮ್ಮ ಕೃತಿಯಾದ *ಬ್ರಿಟೀಷ್ ಇಂಡಿಯಾ ಇನ್ ಇಟ್ಸ್ ರಿಲೇಶನ್ ಟು ದ ಡಿಕ್ಲೈನ್ ಆಫ್ ಹಿಂದೂಯಿಸಂ, ಅಂಡ್ ದ ಪ್ರೊಗ್ರೆಸ್ ಆಫ್ ಕ್ರಿಶ್ಚಿನಿಯಾಟಿ (1839)* ದಲ್ಲಿ ಸಂಸ್ಕೃತವು ಎಲ್ಲಾ ಭಾಷೆಗಳ ಮೂಲ ಎಂಬ ಅಭಿಪ್ರಾಯವನ್ನು ತಿರಸ್ಕರಿಸುತ್ತಾರೆ. ಈ ದ್ವೀಪದಲ್ಲಿ ತಮಿಳು ತೆಲುಗು ಹಾಗೂ ಕರಾವಳಿ ಭಾಷೆಗಳು ರಕ್ತ ಸಂಬಂಧವನ್ನು ಹೊಂದಿದ್ದು ಅವು ಪರ್ಶಿಯಾ ಅಥವಾ ಅರಾಬಿಕ್ ಭಾಷೆಗೆ ಹೋಲಿಕೆಯಾಗುತ್ತವೆಯೆ ಹೊರತು ಸಂಸ್ಕೃತದೊಂದಿಗೆ ಯಾವ ಸಂಬಂಧವನ್ನೂ ಅವು ಹೊಂದಿಲ್ಲ ಎಂದು ವಾದಿಸುತ್ತಾರೆ.

ಅವರು ಹೇಳುವ ಪ್ರಕಾರ 3 ರೀತಿಯ ಆಧಾರಗಳು ಅಸ್ತಿತ್ವದಲ್ಲಿವೆ: 1) ಈ ಭಾಷೆಗಳಲ್ಲಿರುವ ಆಧುನಿಕ ಮತ್ತು ಅಸಭ್ಯ ಮಾತುಗಳು ಸಂಸ್ಕೃತದಿಂದಲೇ ತುಂಬಿಹೋಗಿವೆ, ಆದರೆ ಪ್ರಾಚೀನ ಭಾಷೆಯಲ್ಲಿ ಅತ್ಯಂತ ವಿರಳವಾಗಿ ಸಂಸ್ಕೃತ ಪದಗಳಿದ್ದವು ಎಂಬ ನಿಜಾಂಶ; 2) ಸ್ಥಳೀಯ ವ್ಯಾಕರಣಕಾರರನ್ನು ಗಮನಿಸಿದರೆ ಅವರೂ ಸಹ ಈ ಮೂರು ಭಾಷೆಗಳು ಹಾಗು ಸಂಸ್ಕೃತದ ನಡುವೆ ವ್ಯತ್ಯಾಸ ಮಾಡಿರುವುದನ್ನು ಗಮನಿಸಬಹುದು ಎಂಬುದು ಮತ್ತೊಂದು ನಿಜಾಂಶವಾಗಿದೆ; 3) ಸಂಸ್ಕೃತ ಮತ್ತು ಸ್ಥಳೀಯ ಭಾಷೆಗಳಲ್ಲಿ ಬಳಸಲ್ಪಡುವ ಪದಗಳ ಆಧಾರದ ಮೇಲೆ ಮಾಡುವ ವ್ಯತ್ಯಾಸ, ಅದರ ಪ್ರಕಾರ ಸ್ಥಳೀಯ ಭಾಷೆಗಳ ಪದಗಳು ಸಮಾಜದ ಹಿಂದಿನ ಹಂತದಲ್ಲಿದ್ದ ಆದಿಮ ಚಿಂತನೆಗಳನ್ನು ಪ್ರತಿನಿಧಿಸುತ್ತವೆ, ಸಂಸ್ಕೃತವು ಕಾನೂನು, ಸಾಹಿತ್ಯ ಹಾಗೂ ರಿಲಿಜನ್‌ಗಳನ್ನು ಪ್ರತಿನಿಧಿಸುತ್ತದೆ. ಇದರ ಒಟ್ಟಿಗೆ, ಇತರ ಭಾಷೆಯವರು ಸಂಸ್ಕೃತ ಬಳಸುವುದಕ್ಕೆ ಹೋಲಿಸಿದರೆ ಬ್ರಾಹ್ಮಣರು ತಮ್ಮವರೊಡನೆ ಸಂವಹನ ನಡೆಸುವಾಗ ಹೆಚ್ಚಾಗಿ ಸಂಸ್ಕೃತವನ್ನು ಬಳಸುತ್ತಾರೆ, ಇತರರು ಸಂಸ್ಕೃತ ಪದಗಳನ್ನು ಬಳಸಲು ಪ್ರಯತ್ನಿಸಿದರೆ ಉನ್ನತವರ್ಗದಿಂದ ತಿರಸ್ಕಾರಕ್ಕೆ ಒಳಗಾಗುವ ಸಾಧ್ಯತೆಗಳಿರುತ್ತವೆ.[41] ಈ ಆಧಾರದ ಮೇಲೆ, ಕ್ಯಾಂಪ್‌ಬೆಲ್ ಸಲಹೆ ನೀಡುವಂತೆ, ಸಂಸ್ಕೃತವು ಸ್ಥಳೀಯ ಭಾಷೆಗಳಿಗೆ ವರ್ಗಾವಣೆ ಹೊಂದಿದೆ, ಹಾಗೂ ಸ್ಥಳೀಯ ಭಾಷೆಗಳು ಸಂಸ್ಕೃತದ ವ್ಯುತ್ಪತ್ತಿ ಆಗಿರದೆ, ಸಂಸ್ಕೃತದಲ್ಲಿರುವ ಕೆಲವಾರು ಅಂಶಗಳನ್ನು ಅಳವಡಿಸಿಕೊಂಡಿವೆ. ಈ ವಾದವು ಮುಂದಿನ ಅಭಿಪ್ರಾಯಕ್ಕೆ ಒಂದು ಮೈಲಿಗಲ್ಲಾಗಿ ಪರಿಗಣಿಸಲ್ಪಟ್ಟಿತು:

> ಅತಿ ಹೆಚ್ಚು ಸಂಭವನೀಯ ಅಭಿಪ್ರಾಯವೆಂದರೆ, ಸಂಸ್ಕೃತವು ಬ್ರಾಹ್ಮಣರ ಭಾಷೆಯಾಗಿದೆ, ಅವರು ಆಕ್ರಮಣ ಮಾಡುವ ಪ್ರವೃತ್ತಿಯವರಾಗಿದ್ದು,

ಉತ್ತರದಿಂದ ಬಂದವರಾಗಿದ್ದಾರೆ, ಅವರು ಭಾರತದ ಉಪಖಂಡವನ್ನು ತುಂಬ ಸುಲಭವಾಗಿ ಆಕ್ರಮಿಸಿಕೊಳ್ಳಬಲ್ಲವರಾಗಿದ್ದಾರೆ, ಜನರಲ್ಲಿ ಕಂಡುಬಂದ ಮೂರ್ತಿಪೂಜೆಯ ಮೇಲೆ ತಮ್ಮ ಮೂಢನಂಬಿಕೆಯ ವ್ಯವಸ್ಥೆಯನ್ನು ಹೇರಿದರು, ಹಾಗೂ ತಾವು ಬ್ರಹ್ಮನ ಪುತ್ರ ಎಂಬುದಾಗಿ ಜ್ಞಾನವನ್ನು ತಮ್ಮಲ್ಲಿಯೇ ಇಟ್ಟುಕೊಂಡರು ಹಾಗೂ ಆಳ್ವಿಕೆಯನ್ನು ಹತೋಟಿಯಲ್ಲಿಟ್ಟುಕೊಂಡರು.[42]

ಬ್ರಾಹ್ಮಣರು ಮೂಲನಿವಾಸಿ ಬುಡಕಟ್ಟುಗಳನ್ನು ಆಕ್ರಮಿಸಿ ತಮ್ಮ ಅಧಿನದಲ್ಲಿಟ್ಟು ಕೊಂಡರು ಎನ್ನುವ ಅಭಿಪ್ರಾಯಕ್ಕೂ ಅಸ್ತಿತ್ವದಲ್ಲಿರುವ ಆಧಾರಕ್ಕೂ ಸಂಬಂಧವಿಲ್ಲ. ಕ್ಯಾಂಪ್‌ಬೆಲ್ ರವರು ತಮ್ಮ ಅಭಿಪ್ರಾಯವನ್ನು ಒಂದು ನಿಜಾಂಶವೆಂಬಂತೆ ಮಂಡಿಸಿದರು, ಅವರು ವಿವರಿಸಿರುವಂತೆ, ದಕ್ಷಿಣದಲ್ಲಿ ಮತ್ತು ನೈರುತ್ಯದಲ್ಲಿ ತಮಿಳು ಮತ್ತು ಕೆನರಿಗಳಿಗಿಂತ ಹೆಚ್ಚಾಗಿ ತೆಲುಗು ಮಾತನಾಡುವ ಉತ್ತರದ ಬುಡಕಟ್ಟುಗಳ ಭಾಷೆಯಲ್ಲಿ ಅಸಭ್ಯವಾದ ಸಂಸ್ಕೃತ ಪದಗಳೇ ಹೆಚ್ಚಾಗಿ ತುಂಬಿವೆ. ಕೆಳವರ್ಗಗಳು ನೆಲದ ಮೂಲನಿವಾಸಿಗಳಾಗಿದ್ದು ಬ್ರಾಹ್ಮಣರು ದೂರದ ಉತ್ತರದಿಂದ ಬಂದವರಾಗಿದ್ದಾರೆ. ಅವರು ವಾದಿಸುವಂತೆ, ಆಕ್ರಮಣಕಾರರಿಗೆ ಹತ್ತಿರ ಇರುವವರು ಅಥವಾ ಅದಕ್ಕೆ ಒಳಪಡುವವರು ಸಾಮಾನ್ಯವಾಗಿ ವಿದೇಶಿ ಭಾಷೆಗಳಿಂದ ಪ್ರಭಾವಿತರಾಗುತ್ತಾರೆ.[43]

(ಮುಂದುವರಿಯುವುದು...)

ಟಿಪ್ಪಣಿ

1 ನೋಡಿ, ಅಲ್ಚಿನ್, ದ ಆರ್ಕಿಯಾಲಜಿ ಆಫ್ ಅರ್ಲಿ ಹಿಸ್ಟಾರಿಕ್ ಸೌತ್ ಏಷಿಯಾ; ಕಾಲ್ಡ್ ವೆಲ್. 'ಹೂಸ್ ಗಾಡೆಸ್ಸಸ್?'; ಎಮೆನೂ, 'ಲಿಂಗ್ವಿಸ್ಟಿಕ್ ಪ್ರಿಹಿಸ್ಟರಿ ಆಫ್ ಇಂಡಿಯಾ'; ಎಡೋಸಿ, 'ಲಾಂಗ್ವೇಜ್, ಮೆಟಿರಿಯಲ್ ಕಲ್ಚರ್ ಅಂಡ್ ಎಥ್ನಿಸಿಟಿ' ; ಮಹೇಂದಲೆ, ' ಇಂಡೋ ಆರ್ಯನ್ಸ್'; ವ್ಹೀಲರ್, ದ ಇಂಡಸ್ ಸಿವಿಲೈಸೇಶನ್; ವಿಟ್ಸೆಲ್, 'ಆರ್ಯನ್ ಅಂಡ್ ನಾನ್–ಆರ್ಯನ್ ನೇಮ್ಸ್ ಇನ್ ವೇದಿಕ್ ಇಂಡಿಯಾ', ಇಂಡೋ ಸೆಂಟ್ರಿಸಿಂ

2 ಎಲ್ಸ್ಟ್, ' ಲಿಂಗ್ವಿಸ್ಟಿಕ್ ಆಸ್ಪೆಕ್ಟ್ಸ್ ಆಫ್ ದಿ ಆರ್ಯನ್ ನಾನ್–ಇನ್ವೇಶನ್ ಥಿಯರಿ'; ಫ್ರಾಲೆ, ದ ಮಿಥ್ ಆಫ್ ದ ಆರ್ಯನ್ ಇನ್ವೇಶನ್ ಆಫ್ ಇಂಡಿಯಾ ಅಂಡ್ ಹಿಂದೂಯಿಸಂ ಅನದ ಕ್ಲಾಶ್ ಆಫ್ ಸಿವಿಲೈಸೇಶನ್ಸ್; ಕಾಕ್, 'ವೇದಿಕ್ ಆಸ್ಟ್ರಾನಮಿ ಅನದ ಅರ್ಲಿ ಇಂಡಿಯನ್ ಕ್ರೋನಾಲಜಿ'; ಕೆನೋಯರ್, ' ಕಲ್ಚರ್ ಚೇಂಜ್ ಡ್ಯೂರಿಂಗ್ ತಹೆ ಲೇಟ್ ಹರಪ್ಪನ್ ಪಿರಿಯಡ್ ಅಟ್ ಹರಪ್ಪ'; ಲಾಲ್, 'ಆರ್ಯನ್ ಇನ್ವೇಶನ್ ಆಫ್ ಇಂಡಿಯಾ'; ಸ್ಕಾಫರ್ ಅಂಡ್ ಲಿಚ್ ಸ್ಟೈನ್ 'ದ ಕಾನ್ಸೆಪ್ಟ್ಸ್ "ಕಲ್ಚರಲ್ ಟ್ರೆಡಿಶನ್" ಅಂಡ್ "ಪಾಲಿಯೊಎಥ್ನಿಸಿಟಿ"'.

3 ಬ್ರಿಯಾಂಟ್, 'ಸಮಾರೋಪದ ಅಭಿಪ್ರಾಯಗಳು'; ಫ್ರಾಲೆ, ದ ಮಿಥ್ ಆಫ್ ದ ಆರ್ಯನ್ ಇನ್ವೇಶನ್ ಆಫ್ ಇಂಡಿಯಾ; ಥಾಪರ್, 'ಸಮ್ ಅಪ್ರಾಪ್ರಿಯೇಶನ್ಸ್ ಆಫ್ ದ ಥಿಯರಿ ಆಫ್ ಆ, ರ್ಯನ್ ರೇಸ್', ಪು108. ನೋಡಿ ಬ್ರಿಯಾಂಟ್, ' ದ ಕ್ವೆಸ್ಟ್ ಫಾರ್ ದಿ ಒರಿಜಿನ್ಸ್ ಆಫ್ ವೇದಿಕ್ ಕಲ್ಚರ್ ಅಂಡ್ ಲಿಯೋಪೋಲ್ಡ್', 'ಬ್ರಿಟಿಷ್ ಅಪ್ಲಿಕೇಶನ್ಸ್ ಆಫ್ ದಿ ಆರ್ಯನ್ ಥಿಯರಿ ಆಫ್ ರೇಸ್ ಟು ಇಂಡಿಯಾ' ಫಾರ್ ಆನ್ ವೋವರ್ ವೀವ್ ಆಫ್ ದಿ ಬ್ರಿಟೀಷ್ ಅಂಡ್ ಇಂಡಿಯನ್ ಅಪ್ಲಿಕೇಶನ್ಸ್ ಆಫ್ ದಿ ಆರ್ಯನ್ ಇನ್ವೇಶನ್ ಥಿಯರಿ ಇನ್ ಕಲೋನಿಯಲ್ ಅಂಡ್ ನ್ಯಾಶನಲಿಸ್ಟ್ ಡಿಸ್ಕೋರ್ಸ.

4 ಜೋನ್ಸ್, 'ದ ಥರ್ಡ್ ಆನಿವರ್ಸರಿ ಡಿಸ್ಕೋರ್ಸ', ಪುಟಗಳು 422–23.

5 ಅರ್ವಿಡ್‌ಸನ್, ಆರ್ಯನ್ ಐಡೋಲ್ಸ್; ಬ್ರಿಯಾಂಟ್, ದ ಕ್ವೆಸ್ಟ್ ಫಾರ್ ದಿ ಒರಿಜಿನ್ಸ್ ಆಫ್ ವೇದಿಕ್ ಕಲ್ಚರ್; ಪೋಲಿಯಾಕೋವ್, ದ ಆರ್ಯನ್ ಮಿಥ್; ಸ್ಕಾಫರ್ ಅಂಡ್ ಲಿಚನ್ ಸ್ಟೈನ್, 'ದಿ ಕಾನ್ಸೆಪ್ಟ್ಸ್ "ಕಲ್ಚರಲ್ ಟ್ರೆಡಿಶನ್" ಅಂಡ್ "ಪಾಲಿಯೋಎಥ್ನಿಸಿಟಿ"' ; ಟ್ರಾಟ್ ಮನ್, ಆರ್ಯನ್ಸ್ ಅಂಡ್ ಬ್ರಿಟೀಷ್ ಇಂಡಿಯಾ.

6 ಬ್ರಿಯಾಂಟ್, 'ದ ಕ್ವೆಸ್ಟ್ ಫಾರ್ ದಿ ಒರಿಜಿನ್ಸ್ ಆಫ್ ವೇದಿಕ್ ಕಲ್ಚರ್, ಪು.16.

7 ಜೋನ್ಸ್, ದ ಡಿಸ್ಕೋರ್ಸ ದ ನೈನ್ಥ್.

8 ಅದೇ ಪು, 194–5.

9 ಇಲ್ಲಿ ಗಮನಿಸಿಬೇಕಾದ ಅಂಶವೆಂಶರೆ, ಹಿಂದಿನ ಪೌರಾತ್ಯವಾದಿ ಬರವಣಿಗೆಗಳಲ್ಲಿ 'ರೇಸ್', 'ನೇಶನ್', 'ಪೀಪಲ್', 'ಟ್ರೈಬ್', ಮುಂತಾದವುಗಳನ್ನು ಸಂವಾದಿಯಾಗಿ ಯಾವಾಗಲೂ ಬಳಸಲಾಗುತ್ತಿತ್ತು.

10 ಮುಲ್ಲರ್, ಚಿಪ್ಸ್ ಫ್ರಮ್ ಎ ಜರ್ಮನ್ ವರ್ಕಶಾಪ್, ಸಂ, 4 ಪು 223.

11 ಬ್ರಿಯಾಂಟ್, ' ದ ಕ್ವೆಸ್ಟ್ ಫಾರ್ ದಿ ಒರಿಜಿನ್ಸ್ ಆಫ್ ವೇದಿಕ್ ಕಲ್ಚರ್; ಹಾಕ್, 'ಥ್ರೂ ಎ ಗ್ಲಾಸ್ ಡಾರ್ಕ್ಲಿ' ಅಂಡ್ 'ಫಿಲಾಲಜಿ ಅಂಡ್ ದಿ ಹಿಸ್ಟಾರಿಕಲ್ ಇಂಟರ್‌ಪ್ರಿಟೇಶನ್ ಆಫ್ ದಿ ವೇದಿಕ್ ಟೆಕ್ಸ್ಟ್'; ಶರ್ಮಾ, 'ಡಾ.ಬಿ.ಆರ್ ಅಂಬೇಡ್ಕರ್ ಆನ್ ಆರ್ಯನ್ ಇನ್ವೇಶನ್'; ಟ್ರಾಟ್ ಮನ್, ಇಂಟ್ರಡಕ್ಷನ್.

12 ಜೋನ್ಸ್ 'ಆನ್ ದ ಗಾಡ್ಸ್ ಆಫ್ ಗ್ರೀಸ್, ಇಟಲಿ ಅಂಡ್ ಇಂಡಿಯಾ'; ಮತ್ತೂ ನೋಡಿ ಅರ್ವಿಡ್ ಸನ್, ಆರ್ಯನ್ ಐಡೋಲ್ಸ್

13 Père Catrou, Histoire Générale de l'Empire du Mogol, ಪು 54; ಮತ್ತು ನೋಡಿ Huet, Histoire du Commerce et de la Navigation des Anciens, ಪುಟಗಳು 36-7 and La Croze, Histoire du Christianisme des Indes, ಪು. 427. ಈ ಇಬ್ಬರೂ ಬರಹಗಾರರು ಭಾರತದ ಜನಾಂಗವನ್ನು ಮತ್ತು ಅವರ ಪ್ರೀಸ್ಟ್ ಗಳು ಬ್ರಾಹ್ಮಣರೆಂದು ಹಾಗೂ ಅವು ಈಜಿಪ್ಟ್ ನ ಸಂತತಿಯವರೆಂದು ಪರಿಗಣಿಸುತ್ತಾರೆ.

14 Murr, L'inde Philosophique entre Bossuet et Voltaire, ಪು 18.

15 ಉದಾ. ಜೋನ್ಸ್, 'ದ ಥರ್ಡ್ ಆನಿವರ್ಸರಿ ಡಿಸ್ಕೋರ್ಸ್', ಪು. 419.

16 Lambert, Receuil d'Observations Curieuses, p. 37.

17 ಬ್ರಿಟೀಷ್ ಮತ್ತು ಫ್ರೆಂಚ್ ಪೌರಾತ್ಯವಾದಿಗಳ ದೃಷ್ಟಿಕೋನಗಳಲ್ಲಿ ಪ್ರಮುಖವಾದ ವ್ಯತ್ಯಾಸಗಳಿದ್ದರೂ, ಅವರ ವಿವರಣೆಗಳಲ್ಲಿರುವ ಸಾಮಾನ್ಯ ರಚನೆಯತ್ತ ನಾವು ಕೇಂದ್ರೀಕರಿಸುತ್ತೇವೆ, ಏಕೆಂದರೆ ಇದರಿಂದಾಗಿ ಈ ಎರಡೂ ಗುಂಪುಗಳಿಗೆ ಆರ್ಯರ ಆಕ್ರಮಣ ಸಿದ್ಧಾಂತ ಬಲವಾದದ್ದು ಎಂದೆನಿಸಲು ಇರುವ ಪರಿಕಲ್ಪನಾತ್ಮಕ ನಿರ್ಬಂಧಗಳೇನು ಎಂಬುದನ್ನು ಅರ್ಥೈಸಿಕೊಳ್ಳಲು ಒಳನೋಟಗಳು ಸಿಗಬಹುದು. ಇವರ ನಡುವಿನ ವ್ಯತ್ಯಾಸಗಳನ್ನು ಮುಂದಿನ ಸಂಶೋಧನೆಯಲ್ಲಿ ತೋರಿಸುವ ಇರಾದೆಯನ್ನು ಹೊಂದಿದ್ದೇವೆ.

18 ಲೇಖನದಾದ್ಯಂತ, ಭಾರತೀಯ ಸಮಾಜದ ಶ್ರೇಣಿಕೃತ ಸಾಮಾಜಿಕ ರಚನೆ ಎಂದು ಯುರೋಪಿನವರಿಂದ ಗುರುತಿಸಲ್ಪಟ್ಟಿರುವದನ್ನು ಸೂಚಿಸಲು ನಾವು 'ಕಾಸ್ಟ್ ಸಿಸ್ಟಮ್' ಅನ್ನುವ ಪದವನ್ನು ಬಳಸುತ್ತೇವೆ. ಆರಂಭಿಕ ಆಧುನಿಕ ಯುರೋಪಿನಲ್ಲಿ ಹರಳುಗಟ್ಟಿದ ಪೌರಾತ್ಯವಾದಿಗಳ ಪ್ರಕಾರ, ನಾಲ್ಕು ವರ್ಣಗಳನ್ನು ಹಾಗೂ ಅಸ್ಪೃಶ್ಯರನ್ನು ಹೊಂದಿರುವ ಶ್ರೇಣಿಕರಣವಾಗಿದೆ, ಅದರ ಬುನಾದಿಯು ಭಾರತೀಯ ರಿಲಿಜಸ್ ಗ್ರಂಥಗಳಲ್ಲಿ ಇದೆ, ಹಾಗೂ ಇದು ಭಾರತೀಯ ಸಮಾಜದಲ್ಲಿರುವ ಬೇರೆ ಬೇರೆ ಜಾತಿಗಳ ನಡುವೆ ಸಂಬಂಧವನ್ನು ಏರ್ಪಡಿಸಿದೆ. ಎಲ್ಲಾ ಯುರೋಪಿಯನ್ನರು 'ಕಾಸ್ಟ್ ಸಿಸ್ಟಮ್' ಮತ್ತು ಕಾಸ್ಟ್ಸ್ ಪದಗಳನ್ನು ಬಳಸಿರಲಿಲ್ಲ ಆದರೆ ಅದು 19 ನೆ ಶತಮಾನದಲ್ಲಿ ಸಾಮಾನ್ಯವಾಯಿತು; ಅದರ ಬದಲಿಗೆ ಅವರು ಹಲವಾರು ಪದಗಳನ್ನು ಬಳಸುತ್ತಿದ್ದರು, ಟ್ರೈಬ್, ನೇಶನ್, ಕಾಸ್ಟ್, ಕ್ಲಾಸ್

ಇತ್ಯಾದಿ. ಕೆಲವು ಲೇಖಕರು ಕಾಸ್ಟ್ ಸಿಸ್ಟಮ್ ಎಂಬ ಪದವನ್ನು ಬಳಸದಿದ್ದರೂ, ಭಾರತೀಯ ಸಮಾಜವು ರಿಲಿಜನ್ ನಿಂದ ಅಂಗೀಕರಿಸಲ್ಪಟ್ಟ ನಾಲ್ಕು ವರ್ಣಗಳ ಶ್ರೇಣೀಕರಣ, ಜಾತಿಗಳು ಎಸ್ಟೇಟ್ ಗಳು ಅಥವಾ ವರ್ಗಗಳು ಎಂಬುದರ ಕುರಿತ ಅವರಿಗಿದ್ದ ನಿರ್ಣಯಗಳನ್ನು ಸೂಚಿಸಲು ನಾವು ಆ ಪದವನ್ನು ಬಳಸುತ್ತೇವೆ.

19 ವಿಲ್ಕ್ಸ್, ಹಿಸ್ಟಾರಿಕಲ್ ಸ್ಕೆಚ್‌ಸ್ ಆಫ್ ದಿ ಸೌತ್ ಇಂಡಿಯಾ, ಪುಟಗಳು 150–1.

20 ಸ್ಕ್ವಾಬ್, ದಿ ಓರಿಯೆಂಟಲ್ ರಿನೈಸ್ಸಾನ್ಸ್ ಪು 45–6.

21 Langlès, Monuments Ancienset Modernes de l'Hindoustan, p. 170.

22 Rémusat, 'Monuments Anciens et Modernes de l'Hindoustan', p. 223.

23 ಅದೇ., ಪು 224.

24 ಲಾಂಗ್ಲೊಸ್, ಮಾನವ ಧರ್ಮ ಶಾಸ್ತ್ರ, ಪು 143–4.

25 Burnouf, 'Discours sur la Langue et la Littérature Sanscrite', p. 268.

26 ಅದೇ., ಪು 268.

27 ಎಲ್ಫಿನ್‌ಸ್ಟೋನ್, ದ ಹಿಸ್ಟರಿ ಆಫ್ ಇಂಡಿಯಾ ಸಂ. 1, ಪು 95.

28 ಅದೇ., ಪು 96.

29 ಟ್ರಾಟ್ ಮನ್, ಲಾಂಗ್ವೇಜ್ ಅಂಡ್ ನೇಶನ್ಸ್, ಪು 130.

30 ಅದೇ., ಪು 131.

31 ಅದೇ., ಪು.177.

32 ಅದೇ., ಪು.177.

33 ಮೆಕಂಝಿ, 'ರಿಮಾರ್ಕ್ಸ್ ಆನ್ ಸಮ್ ಆಂಟಿಕ್ವಿಟಿಸ್' ಪು. 426–27.

34 ಇಂತಹುದೇ ಸಂಶೋಧನೆ ಅಜೆಂಡಾವನ್ನು ಜಾನ್ ಲೆಯಿಡನ್ ರ 'ಪ್ಲಾನ್ ಫಾರ್ ಇನ್ವೆಸ್ಟಿಗೇಟಿಂಗ್ ದ ಲಾಗ್ವೇಜಸ್, ಲಿಟರೇಚರ್, ಅಂಟಿಕ್ವಿಟಿಸ್ ಅಂಡ್ ಹಿಸ್ಟರಿ ಆಫ್ ಡೆಕ್ಕನ್' ನಲ್ಲಿ ಕಾಣಬಹುದು. ಜಾನ್ ಲಾಯಿಡೆನ್, 1803 ರಲ್ಲಿ ಮದ್ರಾಸಿಗೆ ಬಂದರು, ಮೆಕೆಂಝಿಯ ಅಡಿಯಲ್ಲಿ ಕಾರ್ಯನಿರ್ವಹಿಸಿದರು. ಅವರ ಬರಹದಲ್ಲಿ, ಸಂಸ್ಕೃತದ ಕುರಿತು ಮಾತನಾಡುವಾಗ, ಸಂಸ್ಕೃತವು ಡೆಕ್ಕನ್ನಿನ ಮೂಲಭಾಷೆಯಾಗಿರದೆ ಅದು ವಿದೇಶದಿಂದ ಬಂದಂತಹ ರಿಲಿಜನ್ನಿನ ಪ್ರಚಾರ ಮತ್ತು ವಿದೇಶೀ ಆಕ್ರಮಣದ ಫಲವಾಗಿದೆ. (ಇನ್ ಟ್ರಾಟ್‌ಮನ್, ಲಾಂಗ್ವೇಜ್ ಅಂಡ್ ನೇಶನ್ಸ್, ಪು 176).

35 ಕ್ಯಾಂಪ್‌ಬೆಲ್, ಎ ಗ್ರಾಮರ್ ಆಫ್ ದಿ ತೆಲುಗೂ ಲಾಂಗ್ವೇಜ್, ಪು. Xv.

36 ಅದೇ., ಪು. xvi.

37 ಅದೇ., ಪು. vxii-iii.

38 ಎಲ್ಲಿಸ್, 'ನೋಟ್ ಟು ದ ಇಂಟ್ರಡಕ್ಷನ್', ಪು.11–21

39 ಟ್ರಾಟ್‌ಮನ್, ಲಾಂಗ್ವೇಜ್ ಅಂಡ್ ನೇಶನ್ಸ್, ಪು 165.

40 ಕ್ಯಾಂಪ್‌ಬೆಲ್, ಎ ಗ್ರಾಮರ್ ಆಫ್ ದಿ ತೆಲುಗೂ ಲಾಂಗ್ವೇಜ್, ಪು. xx.

41 ಕ್ಯಾಂಪ್‌ಬೆಲ್, ಬ್ರಿಟೀಷ್ ಇಂಡಿಯಾ ಇನ್ ಇಟ್ಸ್ ರಿಲೇಶನ್ ಟು ದ ದಕ್ಲೈನ್ ಆಫ್ ದಹಿಂದೂಯಿಸಂ, ಪು 109–10.

42 ಅದೇ., ಪು 106.

43 ಅದೇ., ಪು. 110.

ಸನ್ಮತಿ ನೀಡುವ 'ಈಶ್ವರ ಅಲ್ಲಾ ತೇರೋ ನಾಮ್'

(ಪುಸ್ತಕ ವಿಮರ್ಶೆ)

ಡಾ. ಮಾಧವ ಪೆರಾಜೆ

ಡಾ. ಮಹೇಶ್‌ಕುಮಾರ್ ಅವರು 'ಈಶ್ವರ್ ಅಲ್ಲಾ ತೇರೋ ನಾಮ್' ಹೆಸರಿನ ಪುಸ್ತಕವನ್ನು ಪ್ರಕಟಿಸಿದ್ದಾರೆ. ಇದು ಬಾಬಾ ಬುಡನ್‌ಗಿರಿ ದರ್ಗಾದ ವಿವಾದ ಮತ್ತು ದರ್ಗಾ ಸಂಪ್ರದಾಯ ಗಳು ಎನ್ನುವ ಹೆಸರಿನಲ್ಲಿ ಅವರು ಕುವೆಂಪು ವಿಶ್ವವಿದ್ಯಾಲಯಕ್ಕೆ ಡಾಕ್ಟರೇಟ್ ಪದವಿಗಾಗಿ ಸಲ್ಲಿಸಿದ ನಿಬಂಧದ ಪ್ರಕಟಿತ ರೂಪವಾಗಿದೆ. ಹಾಗೆಯೇ ಲೇಖಕರು ಈ ಪುಸ್ತಕಕ್ಕೆ ಮೇಲಿನ ಉಪಶಿರ್ಷಿಕೆಯನ್ನು ನೀಡಿರುವುದರಿಂದ ಈ ಅಧ್ಯಯನದ ವಸ್ತುವಿನ ಬಗೆಗೂ ಮೇಲ್ನೋಟಕ್ಕೆ ಒಂದು ಗ್ರಹಿಕೆ ನಮ್ಮಲ್ಲುಂಟಾಗುತ್ತದೆ. ಹೌದು, ಈ ಅಧ್ಯಯನವು ಬಾಬಾಬುಡನ್ ಗಿರಿದರ್ಗಾದ ಸುತ್ತಮುತ್ತ 1975ರಿಂದ ಇಲ್ಲಿಯವರೆಗೆ ಅಂದರೆ ಸುಮಾರು 40 ವರ್ಷಗಳ ತನಕ ನಡೆಯುತ್ತಿರುವ ವಿವಾದಕ್ಕೆ ಸಂಬಂಧಿಸಿದ ಅಧ್ಯಯನವಾಗಿರುವುದರಿಂದ ಸಹಜವಾಗಿಯೇ ನಮಗೆ ಕುತೂಹಲವನ್ನು ಉಂಟುಮಾಡುತ್ತದೆ !

ಈ ಪುಸ್ತಕದ ಕೆಲವು ವಿಶೇಷತೆ ನಮ್ಮ ಗಮನ ಸೆಳೆಯುತ್ತಿವೆ, ಮೊದಲನೆಯದಾಗಿ ಇದು ಸಮಾಜಶಾಸ್ತ್ರವನ್ನು ಅಧ್ಯಯನ ಮಾಡಿರುವ ವಿದ್ಯಾರ್ಥಿಯೊಬ್ಬರು ಕನ್ನಡದಲ್ಲಿ ಬರೆದಿರುವ ಪುಸ್ತಕವಾಗಿದೆ. ಕನ್ನಡ ವಿಶ್ವವಿದ್ಯಾಲಯದ ಆರಂಭದಲ್ಲಿ ಅಂತಹ ಸಾಧ್ಯತೆ ಯೊಂದರ ಬಗೆಗೆ ಆಗಿನ ಕುಲಪತಿಗಳಾದ ಡಾ. ಚಂದ್ರಶೇಕರ ಕಂಬಾರರು ಹೇಳುತ್ತಿದ್ದುದು ಈಗ ನನಗೆ ನೆನಪಿಗೆ ಬರುತ್ತಿದೆ. 'ಎಲ್ಲ ರೀತಿಯ ಜ್ಞಾನಗಳು ಕನ್ನಡದಲ್ಲಿ ಪ್ರಕಟವಾಗಬೇಕು, ಹಾಗೆ ಪ್ರಕಟವಾಗುವಂತೆ ಕನ್ನಡ ಭಾಷೆಯನ್ನು ನಾವು ಸಿದ್ಧಗೊಳಿಸಬೇಕಾಗಿರುವುದು ಇಂದಿನ ಅಗತ್ಯವಾಗಿದೆ' ಎಂದು ಅವರು ಹೇಳುತ್ತಿದ್ದರು. ಅದಕ್ಕೆ ಮುಖ್ಯ ಕಾರಣ ಕನ್ನಡವು ಸಾಹಿತ್ಯ ಭಾಷೆಯಾಗಿ ಸಮರ್ಪಕವಾಗಿ ಬಳಕೆಯಾಗಿದ್ದರೂ ಇತರ ಜ್ಞಾನಶಾಖೆಗಳನ್ನು ಧಾರಣೆ ಮಾಡಿಕೊಳ್ಳುವಷ್ಟು ಸಮರ್ಥವಾಗಿ ನಾವು ಕನ್ನಡವನ್ನು ಬಳಸಿಕೊಂಡಿಲ್ಲ– ಆದರೆ ಕನ್ನಡಕ್ಕೆ ಆ ಶಕ್ತಿ ಇದೆ ಎನ್ನುವ ಖಚಿತ ದೃಷ್ಟಿಕೋನ ಅವರಿಗಿತ್ತು. ಡಾ.ಮಹೇಶ್ ಕುಮಾರ್ ಅವರ ಪುಸ್ತಕದ ಭಾಷೆಯನ್ನು ನೋಡಿದಾಗ ಈ ನಿಲುವು ಎಷ್ಟು ಸಮರ್ಪಕ ವಾದುದು ಎನ್ನುವುದು ಯಾರಿಗಾದರೂ ಗಮನಕ್ಕೆ ಬರುವ ಸಂಗತಿಯಾಗುತ್ತದೆ. ಏಕೆಂದರೆ ಈ ಪುಸ್ತಕದಲ್ಲಿ ಲೇಖಕರು ಅವರು ಆಯ್ಕೆ ಮಾಡಿದ ವಿಷಯಕ್ಕೆ ಅನುಗುಣವಾದ ಕನ್ನಡ ಭಾಷೆಯನ್ನು ರೂಪಿಸಿಕೊಳ್ಳುವುದಕ್ಕೆ ಸಮರ್ಥರಾಗಿದ್ದಾರೆ. ಆದುದರಿಂದ ಈ ಕೃತಿಯನ್ನು ಓದುವುದಕ್ಕೆ ಯಾವುದೇ ರೀತಿಯ ಅಡೆ–ತಡೆಗಳಾಗುವುದಿಲ್ಲ. ಸಾಮಾನ್ಯವಾಗಿ ಸಮಾಜಶಾಸ್ತ್ರೀಯ ಬರವಣಿಗೆಗಳು ಹೀಗಿರುತ್ತವೆ;

"ಮೆಥಡಲಾಜಿಕಲ್ ಇಂಡಿವಿಜುವಲಿಸಂ ಮಾತ್ರ ವಿಜ್ಞಾನದ ವಿಧಾನದ ಕೊಡುಗೆಯಲ್ಲ. ಯುನಿವರ್ಸಲ್ ನಿಯಮಗಳನ್ನು ಹುಡುಕುವುದು, ಸಬ್ಜೆಕ್ಟ್ ಡೈಕಾಟಮಿ ಫ್ಯಾಕ್ಟ್ ವ್ಯಾಲ್ಯೂ ಡೈಕಾಟಮಿ, ವ್ಯಾಲೂ ನ್ಯೂಟ್ರಾಲಿಟಿ ಇತ್ಯಾದಿಗಳು ಕೂಡ ವಿಜ್ಞಾನದ ವಿಧಾನದ ಕೊಡುಗೆಗಳೇ. ಯಾವುದೋ ಒಂದು ವಸ್ತುವನ್ನು ಅಥವಾ ದೇಹವನ್ನು ಅಧ್ಯಯನ ಮಾಡಿ ಬರುವ ತೀರ್ಮಾನ ಅಧ್ಯಯನಕ್ಕೆ ಒಳಗಾದ ವಸ್ತು ಅಥವಾ ದೇಹಕ್ಕೆ ಮಾತ್ರ ಅನ್ವಯವಾಗುವುದಲ್ಲ,

ಪ್ರಪಂಚದಲ್ಲಿರುವ ಎಲ್ಲ ವಸ್ತುಗಳಿಗೆ ಅಥವಾ ದೇಹಗಳಿಗೂ ಅನ್ವಯವಾಗುತ್ತದೆ ಎನ್ನುವುದು ಯುನಿವರ್ಸಲ್ ನಿಯಮದ ತಿರುಳು.

ವಿಜ್ಞಾನದ ವಿಧಾನ ಪ್ರತಿಪಾದಿಸುವ ಸಂಶೋಧನೆಯ ಲಕ್ಷಣಗಳಿಗೆ ಸಂಪೂರ್ಣ ವ್ಯತಿರಿಕ್ತವಾದ ಗುಣಗಳನ್ನು ಹರ್ಮನೆಟಿಕ್ಸ್‌ಗಳು ಅಥವಾ ಕನ್‌ಸ್ಟ್ರಕ್ಷನ್‌ಗಳು ಅಥವಾ ನೇಚುರಲಿಸ್ಟ್‌ಗಳು ಪ್ರತಿಪಾದಿಸುತ್ತಾರೆ. ಸತ್ಯದ ಸ್ವರೂಪ ಕುರಿತು ಪೊಸಿಟಿವಿಸ್ಟ್‌ಗಳು ಏಕ ಸತ್ಯವನ್ನು ಪ್ರತಿಪಾದಿಸಿದರೆ ಹರ್ಮನೆಟಿಕ್ಸ್‌ಗಳು ಹಲವಾರು ಸತ್ಯಗಳನ್ನು ಪ್ರತಿಪಾದಿಸಿದ್ದಾರೆ. ಪೊಸಿಟಿವಿಸ್ಟ್‌ಗಳಿಗೆ ಸಂಶೋಧಕರು ಮತ್ತು ಅಧ್ಯಯನಕ್ಕೆ ಒಳಗಾಗುವ ಸಂಗತಿಗಳ ಸ್ವತಂತ್ರ ಹಾಗೂ ಖಚಿತ ಅಸ್ತಿತ್ವದ ಬಗ್ಗೆ ಯಾವುದೇ ಸಂದೇಹಗಳಿರಲಿಲ್ಲ. ಒಬ್ಜೆಕ್ಟಿವ್‌ವರ್ಲ್ಡ್ (ಸಮಾಜ) ಒಂದು ಇದೆ...." (ಡಾ.ಎಂ.ಚಂದ್ರಪೂಜಾರಿ, ಸಂಶೋಧನೆ ಏನು? ಏಕೆ? ಹೇಗೆ? ಪು. 92–93)

ಈ ಸಾಲುಗಳನ್ನು ಓದಿದ ಸಾಮಾನ್ಯ ಕನ್ನಡ ಓದುಗನಿಗೆ ಈ ವಿದ್ವಾಂಸರು ಅಮೇರಿಕಾದಲ್ಲೋ, ಇಂಗ್ಲೆಂಡಿನಲ್ಲೋ ಓದಿ ಬಂದವರೆಂದು ಗಾಬರಿಯಾಗುವ ಸಾಧ್ಯತೆ ಇರುತ್ತದೆ. ಆದರೆ ದೇವರಾಣೆಗೂ ಅಂತಹದೇನೂ ಇಲ್ಲಿಲ್ಲ. ಅವರು ಹಳ್ಳಿ ಶಾಲೆಯಲ್ಲಿಯೇ ಕನ್ನಡ ಓದಿದವರು. ಆದರೆ ಕನ್ನಡ ಭಾಷೆ ಹೇಗಿದೆ ನೋಡಿ! ಇದರಲ್ಲಿ ಪಾಡಿತ್ಯ ಪ್ರದರ್ಶನವಲ್ಲದೆ ಬೇರೇನೂ ಇದಯೇ ?ಯಾರಿಗಾದರೂ ಇವರು ಹೇಳುವುದು ಇಷ್ಟಾದರೂ ಅರ್ಥವಾಗುತ್ತಿದೆಯೇ? ಇಂತಹ ಪುಸ್ತಕಗಳಿಂದ ಕನ್ನಡದಲ್ಲಿ ಸಮಾಜಶಾಸ್ತ್ರೀಯ ಜ್ಞಾನ ಇನ್ನಷ್ಟೂ ಪಾತಾಳಕ್ಕೆ ಹೋಗುವುದಲ್ಲದೇ ಬೆಳವಣಿಗೆ ಹೊಂದುವುದಾದರೂ ಹೇಗೆ?

ಈಗ ನಾನು ಹೇಳುತ್ತಿರುವ ಈ ಲೇಖಕರ ಕೃತಿಯ ಭಾಷೆಯನ್ನು ಗಮನಿಸೋಣ. ಒಂದು ಉದಾಹರಣೆ–

"ಸಮಾಜಶಾಸ್ತ್ರೀಯ ಸಂಶೋಧನೆಗಳ ಅಂತಿಮ ಗುರಿಯಾದರೂ ಏನು? ಸಾಮಾಜಿಕ ವಾಸ್ತವಗಳನ್ನು, ಆದಷ್ಟೂ, ಅವು ನಿಜವಾಗಿ ಇರುವ ರೀತಿಯಲ್ಲಿಯೇ ವಿವರಿಸುವ ಗುರಿಯನ್ನು ಈ ಸಂಶೋಧನೆಗಳು ಹೊಂದಿರಬೇಕು ಎನ್ನುವುದನ್ನು ಎಲ್ಲರು ಒಪ್ಪುತ್ತಾರೆ. ಅಂದರೆ, ಮಾನವ ಸಮಾಜ ಮತ್ತು ಮೈಗೂಡಿಸಿಕೊಂಡಿರುವ ಅದರ ಸದಸ್ಯರು ತಮ್ಮ ಬದುಕನ್ನು ಅಥವ ಲೋಕವ್ಯವಹಾರವನ್ನು ಹೇಗೆ ಸಂಘಟಿಸಿಕೊಂಡಿದ್ದಾರೆ ಎನ್ನುವುದನ್ನು ಅವರದೇ ಗ್ರಹಿಕೆಯಲ್ಲಿ ಚಿತ್ರಿಸುವುದು ಸಂಶೋಧಕನ ಆದ್ಯತೆಯಾಗಬೇಕು. ಇದನ್ನೇ ಬೇರೆ ಮಾತಿನಲ್ಲಿ ಹೇಳುವುದಾದರೆ, ಸಂಶೋಧಕನು ಅಧ್ಯಯನಕ್ಕೆ ಒಳಪಡಿಸುವ ಸಾಮಾಜಿಕ ವಿದ್ಯಮಾನವೊಂದನ್ನು (ಉದಾರಣೆಯಾಗಿ, ಈ ಸಂಶೋಧನೆಯ ವಿಷಯ ವಸ್ತುವಾದ ದರ್ಗಾದ ವಿದ್ಯಮಾನವನ್ನು ಇಟ್ಟುಕೊಳ್ಳಿ) ಅವನು ತನ್ನ ದೃಷ್ಟಿಕೋನದಲ್ಲಿ ವಿವರಿಸುವುದಕಿಂತ, ಅ ವಿದ್ಯಮಾನದ ಭಾಗಿದಾರರ (ದರ್ಗಾಗಳಿಗೆ ಶ್ರದ್ಧೆಯಿಂದ ನಡೆದುಕೊಳ್ಳುವ ಹಿಂದೂ ಮತ್ತು ಮುಸ್ಲಿಮರ) ದೃಷ್ಟಿಕೋನದಲ್ಲಿ ವಿವರಿಸಬೇಕಾಗಿದೆ.

ಇದು ಸಮಾಜಶಾಸ್ತ್ರೀಯ ವಿದ್ಯಾರ್ಥಿಗೆ, ಸಂಶೋಧನೆಯಲ್ಲಿ ತರಬೇತಿ ಪಡೆಯುವ ವಿದ್ಯಾರ್ಥಿಗೆ, ನೀಡುವ ಮೊದಲ ತರಗತಿಯ ಪಾಠವೇ ಆಗಿರುತ್ತದೆ. ಈ ಪಾಠದ ಒಳಗೆ ಅಡಕವಾಗಿರುವ ತಿಳುವಳಿಕೆ ಮುಂದಿನಂತಿದೆ: ಪ್ರತಿ ಸಂಶೋಧಕನೂ ಯಾವುದೋ ಒಂದು ಸಮಾಜದ ಅಥವ ಅದರ ಸಂಸ್ಕೃತಿಯ ಕೂಸಾಗಿರುತ್ತಾನೆ. ಪ್ರತಿ ಸಮಾಜದ ಅಥವಾ ಅದರ ಸಂಸ್ಕೃತಿಯಲ್ಲಿ ಬದುಕನ್ನು ಸಂಘಟಿಸಿಕೊಳ್ಳುವಿಕೆಯು ಮತ್ತೊಂದಕ್ಕಿಂತ ಭಿನ್ನವಾಗಿರುತ್ತದೆ. ಈ ಭಿನ್ನತೆಯ ಪರಿಣಾಮದಿಂದ, ಪ್ರತಿಯೊಂದು ಸಂಸ್ಕೃತಿಯಲ್ಲಿ ಬೆಳೆದ ಜನರಿಗೆ ತಮ್ಮ ಸಂಸ್ಕೃತಿಯ ಲೋಕ ವ್ಯವಹಾರವು ಸಹಜವಾದುದ್ದು, ಸಂಗತವಾದ್ದು

ಎನ್ನುವ ಭಾವನೆ ಇರಲಿಕ್ಕೆ ಸಾಧ್ಯ. ಇದರಿಂದಾಗಿ, ಸಂಶೋಧಕನಾದವನಿಗೆ ತನ್ನದಲ್ಲದ ಬೇರೊಂದು ಸಾಂಸ್ಕೃತಿಕ ಸಾಪೇಕ್ಷತೆಯ ಸಮಸ್ಯೆಯು ಕಾಡದೆ ಇರುವುದಿಲ್ಲ." (ಪು.1)

ಡಾ.ಮಹೇಶ್‌ಕುಮಾರ್ ಅವರ ಪುಸ್ತಕದಿಂದ ಸ್ವಲ್ಪ ದೀರ್ಘವಾಗಿಯೇ ಈ ಉಲ್ಲೇಖಗಳನ್ನು ಕೊಡಲು ಕಾರಣವಿದೆ. ಮೇಲೆ ನಾನು ಉಲ್ಲೇಖಿಸಿದ ಪುಸ್ತಕವು (ಸಂಶೋಧನೆ–ಏನು? ಏಕೆ? ಹೇಗೆ? ಡಾ.ಎಂ.ಚಂದ್ರ ಪೂಜಾರಿ) ಸು. 264 ಪುಟಗಳಷ್ಟು ವಿಸ್ತಾರವಾದುದು. ಆದರೆ ಅಷ್ಟು ದೊಡ್ಡ ಪುಸ್ತಕವನ್ನು ಓದಿದ ಮೇಲೆ ಯಾರಿಗಾದರೂ ಇನ್ನೂ ಮುಂದೆ ಸಂಶೋಧನೆ ಮಾಡದಿರುವುದೇ ಒಳ್ಳೆಯದೆನಿಸುತ್ತದೆಯೇ ಹೊರತು, ಸಂಶೋಧನೆ ಮಾಡಬೇಕು ಎಂದಿಸುವುದಿಲ್ಲ. ಏಕೆಂದರೆ ಅದರಲ್ಲಿ ಒಣ ಪಾಂಡಿತ್ಯ ಬಿಟ್ಟರೆ ಇನ್ನೇನೂ ಇಲ್ಲ! ಆದರೆ ಮಹೇಶ್‌ಕುಮಾರ್ ಅವರು ಸಮಾಜಶಾಸ್ತ್ರೀಯ ಸಂಶೋಧನೆ ಎಂದರೇನು ಎನ್ನುವುದನ್ನು ವಿವರಿಸಿರುವ ಪರಿಯು ಕೂಡ ಅನನ್ಯವಾಗಿದೆ, ಯಾರಿಗಾದರೂ ಅರ್ಥವಾಗುವಂತಿದೆ. ಸಮಾಜಶಾಸ್ತ್ರೀಯ ಅಧ್ಯಯನವು ಹೀಗೆ ಕನ್ನಡವನ್ನು ದುಡಿಸಿಕೊಳ್ಳಬೇಕಾಗಿದೆ. ಆ ಮೂಲಕ ಕನ್ನಡವನ್ನು ಇಪ್ಪತ್ತೊಂದನೆಯ ಶತಮಾನಕ್ಕೆ ಅಣಿಗೊಳಿಸಬೇಕಾಗಿದೆ. ಈ ಕೃತಿ ಆ ಕೆಲಸವನ್ನು ಸಮರ್ಪಕವಾಗಿ ಮಾಡಿದೆ.

ಎರಡನೆಯದಾಗಿ, ಈ ಸಂಶೋಧನೆಯು ನಿರ್ದಿಷ್ಟವಾದ ಒಂದು ವಿಷಯವನ್ನು ಆಯ್ಕೆ ಮಾಡಿ, ಅದನ್ನು ಸರಿಯಾಗಿ ಗ್ರಹಿಸಿ, ಮಾಹಿತಿ ಸಂಗ್ರಹಿಸಿ, ಅವುಗಳಿಂದ ಒಂದು ಪ್ರಮೇಯವನ್ನು ಪ್ರತಿಪಾದಿಸಿ, ವಿವರಿಸುತ್ತದೆ. ಬೇಟೆಗಾರನೊಬ್ಬ ಪ್ರಾಣಿಯೊಂದರ ಹೆಜ್ಜೆಯನ್ನು ಗಮನಿಸಿ, ಅದನ್ನು ಅನುಸರಿಸಿ, ಅದರ ವಾಸನೆ ಹಿಡಿದು, ಅದನ್ನು ವಶಮಾಡಿಕೊಳ್ಳುವವರೆಗೆ ಹೇಗೆ ಮೈಯೆಲ್ಲ ಕಣ್ಣಾಗಿರುತ್ತಾನೋ ಹಾಗೆ, ಹೆಜ್ಜೆ ಹೆಜ್ಜೆಗೂ ಲೇಖಕರು ಎಚ್ಚರಿಕೆಯನ್ನು ತಾಳಿದ್ದಾರೆ. ಇದು ಕನ್ನಡ ಸಂಶೋಧನೆಯಲ್ಲಿ ತೀರಾ ಅಪರೂಪವಾದ ಸಂಗತಿ. ಅಂತಹ ಎಚ್ಚರಿಕೆ ನಮ್ಮ ಹಳೆಯ ವಿದ್ವಾಂಸರಾದ ಮುಳಿಯ ತಿಮ್ಮಪ್ಪಯ್ಯ, ಸೇಡಿಯಾಪು ಕೃಷ್ಣಭಟ್ ಮೊದಲಾದ ಕೆಲವೇ ಕೆಲವು ವಿದ್ವಾಂಸರಿಗೆ ಮಾತ್ರವೇ ಇತ್ತು. ಹಾಗಾದುದರಿಂದ ಕನ್ನಡಕ್ಕೆ ತೀರಾ ಅಪರೂಪವಾದ ಸಂಶೋಧನೆಗೆ ಸಂಬಂಧಿಸಿದ ಎಚ್ಚರಿಕೆಯನ್ನು ಈ ಲೇಖಕರು–ಮೈಯಲ್ಲ ಕಣ್ಣಾಗಿ–ಈ ಕೃತಿಯ ಉದ್ದಕ್ಕೂ ಕಾಯ್ದುಕೊಂಡು ಬಂದಿದ್ದಾರೆ.

ಮೂರನೆಯದಾಗಿ, ಕನ್ನಡದಲ್ಲಿ ಇಂದು ಈ ರೀತಿಯ ಸಂಶೋಧನೆಯನ್ನು ಪದವಿಗಾಗಿ ಮಾಡುತ್ತಿರುವುದೇ ಒಂದು ದೊಡ್ಡ ಸಮಸ್ಯೆಯಾಗಿದೆ. ಅವರಿಗೆ ಕೋನೆಯವರೆಗೂ ತಾವೇನೂ ಮಾಡುತಿದ್ದೇವೆ ಎನ್ನುವ ತಪ್ಪಿನ ಅರಿವೇ (ಎಂದರೆ ಸಂಶೋಧನೆಯ ಉದ್ದೇಶವೇ!) ಆಗಿರುವುದಿಲ್ಲ. ಆದರೆ ಈ ಕೃತಿಯ ಲೇಖಕರಿಗೆ ಆ ವೃತ್ತಿ ಪದವಿಗಳಿಗಿಂತ, ಜ್ಞಾನದ ಬಗೆಗಿನ ತುಡಿತ, ಸಮಸ್ಯೆಯನ್ನು ಸಮಾಜದ ಹಿತದೃಷ್ಟಿಯಿಂದ ವಿವರಿಸಿ ಹೇಳಬೇಕೆಂಬ ಕಾಳಜಿಗಳು ಮುಖ್ಯವಾಗಿವೆ. ಹಾಗಾದುದರಿಂದ ಈ ಕೃತಿಗೆ ಪಾಂಡಿತ್ಯದೊಂದಿಗೆ ಒಂದು ಸಾಮಾಜಿಕ ಜವಬ್ದಾರಿಯೂ ಸೇರಿ ಚಿನ್ನಕ್ಕೆ ಪರಿಮಳವೂ ಸೇರಿದ ಹಾಗೆ ಒಂದು ಮೆರುಗು ಬಂದಿದೆ.

ಹೀಗೆ ಕನ್ನಡದಲ್ಲಿ ಒಡಮೂಡಿರುವ ಈ ಕೃತಿಯ ಕುರಿತು ಅದರದ್ದೇ ಆದ ಕೇಲವು ಗುಣಲಕ್ಷಣಗಳನ್ನು ಪಟ್ಟಿಮಾಡುತ್ತ ಹೋಗಬಹುದು. ಆದರೆ ಇವು ಈ ಕೃತಿಯ ಬಹುಮುಖ್ಯ ಗುಣಗಳೆಂದು ನನಗೆ ಅನಿಸಿರುವುದರಿಂದ ಮೇಲೆ ಅದನ್ನು ಉಲ್ಲೇಖಿಸಿದೆ.

ಇನ್ನು ಈ ಪುಸ್ತಕದ ಮುಖ್ಯ ವಿವರಗಳನ್ನು ಪರಿಶೀಲಿಸಬಹುದು, ಈಗಾಲೇ ಹೇಳಿರುವಂತೆ ಇದು ಕರ್ನಾಟಕ ರಾಜ್ಯದ ಚಿಕಮಗಳೂರು ಜಿಲ್ಲೆಯ ಬಾಬಾಬುಡನ್

ಗಿರಿದರ್ಗಾದ ವಿವಾದ ಮತ್ತು ದರ್ಗಾ ಸಂಪ್ರದಾಯಕ್ಕೆ ಸಂಬಂಧಿಸಿದ ಅಧ್ಯಯನವಾಗಿದೆ. ಅವರೇ ಹೇಳುವಂತೆ ದರ್ಗಾ ವಿದ್ಯಾಮಾನವನ್ನು, ದರ್ಗಾಗಳಿಗೆ ಶ್ರದ್ಧೆಯಿಂದ ನಡೆದುಕೊಳ್ಳುವ ಹಿಂದೂ ಮುಸ್ಲಿಮರ ದೃಷ್ಟಿಕೋನದಲ್ಲಿ ವಿವರಿಸುವುದು ಈ ಅಧ್ಯಯನದ ಉದ್ದೇಶವಾಗಿದೆ. ಇನ್ನೂ ಮುಂದುವರಿದು ಹೇಳುವುದಾದರೆ ಈಗ ದರ್ಗಾಗಳಿಗೆ ಸಂಬಂಧಿಸಿದಂತೆ ಇರುವ 'ಅವುಗಳು ಹಲವು ಪಂಥಗಳ ಸಮೀಲನದ ಅಪೂರ್ವ ತಾಣ' ಎನ್ನುವ ಸಾಮಾನ್ಯ ಗ್ರಹಿಕೆಯನ್ನು ಪರಿಶೀಲಿಸುವ ಪ್ರಯತ್ನವನ್ನು ಈ ಪುಸ್ತಕವು ಮಾಡುತ್ತದೆ.

ಮೊದಲನೇ ಅಧ್ಯಾಯದಲ್ಲಿ ಈ ವಿವಾದವು ಹೇಗೆ ಆರಂಭವಾಯಿತು ಎನ್ನುವ ಕಥೆಯೊಂದನ್ನು ಲೇಖಕರು ವಿವರವಾಗಿ ನಿರೂಪಿಸುತ್ತಾರೆ. ಸ್ಥೂಲವಾಗಿ ಹೇಳುವುದಾದರೆ, ಅದು 1975ರಿಂದೀಚೆಗೆ ನಡೆದ ಒಂದು ಸಮಸ್ಯೆ ಎನ್ನುವಲ್ಲಿಂದ ಈ ಚರ್ಚೆ ಆರಂಭ ವಾಗುತ್ತದೆ. ಮೊದಲಬಾರಿಗೆ ಅಂದರೆ, 1927ರ ರಿಲಿಜಿಯಸ್ ಮತ್ತು ದತ್ತಿ ಆಕ್ಟ್‌ನ ನಿಯಮದಡಿ ಮುಜುರಾಯಿ ಇಲಾಖೆ ಇದನ್ನು ನೋಡಿಕೊಳ್ಳುತ್ತಿತ್ತು. ಸ್ವಾತಂತ್ರ್ಯದ ಅನಂತರ ಅಂದರೆ 1964ರಲ್ಲಿ ವಕ್ಫ್ ಬೋರ್ಡನ್ನು ರಚಿಸಲಾಗಿ, 1975ರಲ್ಲಿ ಈ ದರ್ಗಾವನ್ನು ವಕ್ಫ್ ಬೋರ್ಡ್‌ನಡಿ ತರುವ ನಿರ್ಣಾಯವನ್ನು ಸರ್ಕಾರವು ಮಾಡಿತು. ಅದುವೇ ಗಲಾಟೆಗೆ ಸಣ್ಣಗೆ ಕಿಡಿಯನ್ನು ಹೊತ್ತಿಸಿದ ಮೊದಲ ಘಟನೆಯಾಗಿದೆ. ಮುಂದೆ ಇದುವೇ ಈ ದರ್ಗಾವು ಹಿಂದೂಗಳಿಗೆ ಸೇರಬೇಕೋ ಅಥವಾ ಮುಸಸ್ಮಾನರಿಗೆ ಸೇರಬೇಕೋ ಎನ್ನುವ ಕಾಳಗದ ಕಣವಾಗಿ ಮಾರ್ಪಟ್ಟಿತು. ಈ ವಿವರವನ್ನು ಲೇಖಕರು ವಿವಿಧ ಮಗ್ಗುಲುಗಳಿಂದ ವಿವರಿಸಿದ್ದಾರೆ. ಬಾಬಾಬುಡನ್ ಗಿರಿಯ ಸ್ಥಳಿಯ ಭಕ್ತರಾದ ಬಿ.ಎಸ್.ನಾಗರಾಜರಾವ್ ಮತ್ತು ಸಿ.ಚಂದ್ರಶೇಖರ ಎನ್ನುವವರು ದರ್ಗಾವನ್ನು ವಕ್ಫ್ ಬೋರ್ಡಿಗೆ ಸೇರಿಸಿದುದರ ವಿರುದ್ಧ ಚಿಕಮಗಳೂರಿನ ಸಿವಿಲ್ ನ್ಯಾಯಲಯದಲ್ಲಿ ಖಟ್ಲೆ ಹೂಡಿದರು. ಆಮೇಲೆ ಸಂಘಪರಿವಾರದವರು ಮತ್ತು ಕೋಮುಸೌಹಾರ್ದ ವೇದಿಕೆಯವರೆಲ್ಲ ಸೇರಿ ಇದನ್ನು ರಣರಂಗ ಮಾಡಿದ ಪರಿಯನ್ನು ಲೇಖಕರು ಮೊದಲ ಅಧ್ಯಾಯದಲ್ಲಿ ತುಂಬ ವೈಜ್ಞಾನಿಕವಾಗಿ ವಿವರಿಸಿದ್ದಾರೆ. ಆಶ್ಚರ್ಯವೆಂದರೆ, ಲೇಖಕರು ಹೇಳುವ ಹಾಗೆ ಕಟ್ಟಾ ವಿರೋಧಿಗಳ ಹಾಗೆ ಕಂಡುಬರುವ ಈ ಮಂದಿ ಸೆಕ್ಯುಲರ್ ಎನ್ನುವ ಭಾರತೀಯ ಸಂವಿಧಾನದ ಆಶಯದ ಹಿನ್ನೆಲೆಯಲ್ಲಿ ಈ ಸಮಸ್ಯೆಯನ್ನು ಜಟಿಲಗೊಳಿಸಿದ್ದಾರೆ. ಆದುದರಿಂದ ಲೇಖಕರು ಸೆಕ್ಯುಲರ್ ಎಂದರೇನು ಎನ್ನುವುದನ್ನು ವಿವರಿಸಲು ತೊಡಗುತ್ತಾರೆ.

ಅಧ್ಯಾಯ ಎರಡರಲ್ಲಿ ('ಸಿಂಕ್ರಟಿಸಮ್ ನದಿಗಳ ಸಂಗಮವೇ') ಲೇಖಕರು ಸೆಕ್ಯುಲರ್ ಎನ್ನುವ ನೆಲೆಯಲ್ಲಿ ಬಾಬಾಬುಡನ್ ಗಿರಿಯ ದರ್ಗಾದ ವಿವಾದವನ್ನು ಮೈಮೇಲೆ ಹಾಕಿ ಕೊಂಡವರು ಮುಂದೇನು ಮಾಡಿದರು ಎಂಬುದನ್ನು ವಿವರಿಸುತ್ತಾರೆ. ನಾವೆಲ್ಲ ತಿಳಿದಿರುವ ಹಾಗೆ ಸೆಕ್ಯುಲರ್ ಎಂದರೆ ರಿಲಿಜಿಯನ್‌ಗಳ ನಡುವೆ ಶಾಂತಿಯನ್ನು ಉಂಟುಮಾಡುವುದು ಎನ್ನುವ ಅರ್ಥ ತಾನೇ? ಹೀಗೆ ಸೆಕ್ಯುಲರ್ ನೆಲೆಯಲ್ಲಿ ದರ್ಗಾದ ಕಣಕ್ಕೆ ಕಾಲಿಟ್ಟವರು ಆಮೇಲೆ ಅದರ ಮುಂದುವರಿದ ವಿವರಣೆಯಾಗಿ ದರ್ಗಾವನ್ನು ಸಿಂಕ್ರಿಟಿಸಮ್‌ನ ಪ್ರತಿರೂಪವೆಂದು ಪ್ರತಿಪಾದಿಸತೊಡಗಿದರು. ಆ ಮೂಲಕ ಅವರು ಸಿಂಕ್ರಟಿಸಮ್‌ನ್ನು ಹೀಗೆ ವಿವರಿಸಿದರು:

1. ಭಾರತದ ಅನೇಕ ರಿಲಿಜಿಯನ್/ಧರ್ಮಗಳಿವೆ.

2. ದರ್ಗಾಗಳಲ್ಲಿ ಹಿಂದೂ ಮತ್ತು ಮುಸಲ್ಮಾನರಿಗೆ ಸಂಬಂಧಿಸಿದ ಒಂದು ಸಾಮಾನ್ಯ ರಿಲಿಜಿಯನ್ನಿನ ಆಚರಣೆಯನ್ನು ಕಾಣಬಹುದು.

3. ಬಾಬಾಬುಡನ್ ಗಿರಿ, ನಾಗೂರು, ಯರ್ಮ್‌ನೂರುನಂತಹ ಜಾಗಗಳಲ್ಲಿ ಅಥವ ದರ್ಗಾಗಳಲ್ಲಿ ಅನೇಕ ರಿಲಿಜಿಯನ್‌ಗಳು ಸೇರಿ ಹೈಬ್ರಿಡೈಸ್ ಅಥವ ಸಿಂಕ್ರಿಟೈಸ್ ಆಗಿರುವಂತಹ ಸಂಸ್ಕೃತಿಯೊಂದು ಅಥವ ಒಂದು ರಿಲಿಜಿಯನ್ ಕಾಣ ಸಿಗುತ್ತದೆ.

ಈ ಚರ್ಚೆಯನ್ನು ವಿಸ್ತರಿಸುವ ಲೇಖಕರು ಸಿಂಕ್ರಟಿಕ್ ಆದ ರಿಲಿಜಿಯನ್ ಎನ್ನುವುದು ಇದೆಯೇ ಎನ್ನುವ ಪ್ರಶ್ನೆಯನ್ನು ಎತ್ತುತ್ತಾರೆ. ಈ ವಿಷಯವಾಗಿ ಇನ್ನಷ್ಟು ಆಳವಾಗಿ ಚರ್ಚೆಯನ್ನು ಮಾಡುತ್ತ ಲೇಖಕರು ಸಿಂಕ್ರಟಿಕ್ ಸಿದ್ಧಾಂತವು ಸಂಶೋಧನೆ ಮಾಡಿ ಸಾಬೀತು ಪಡಿಸಬೇಕಾದ ವಿಷಯವನ್ನೇ ಅಸ್ಥಿತ್ವದಲ್ಲಿದೆ ಎಂದು ನಂಬಿಕೊಂಡ ಹಾಗಿದೆ ಎಂದು ಹೇಳುತ್ತಾರೆ. ಅಂದರೆ ಸರಳವಾಗಿ ಹೇಳುವುದಾದರೆ ಸಿಂಕ್ರಟಿಸಂ ಎಂದರೇನು ಎಂದಾಗ ದರ್ಗಾ ಎಂದು ಕೈತೋರಿಸುವುದು, ದರ್ಗಾ ಎಂದರೆ ಎಂದಾಗ ಸಿಂಕ್ರಟಿಸಂ ಎನ್ನುವುದು ಎಂದು ಈ ಸಮಸ್ಯೆಯನ್ನು ಸರಳವಾಗಿ ನಿರೂಪಿಸುತ್ತಾರೆ. ಈ ಅಧ್ಯಾಯದಲ್ಲಿ ದರ್ಗಾದಲ್ಲಿರುವುದು ಸಿಂಕ್ರಟಿಸಂ ಎನ್ನುವುದು ಅಲ್ಲ, ಹಾಗೆಯೇ ಸಿಂಕ್ರಟಿಸಮ್ ಎನ್ನುವ ರಿಲಿಜಿಯನ್ ಎನ್ನುವುದೂ ಇಲ್ಲ. ಅಂದರೆ ರಿಲಿಜಿಯನ್ನಿನ ನಿಜವಾದ ಅರ್ಥದಲ್ಲಿ ಸಿಂಕ್ರಟಿಸಂ ಎನ್ನುವುದು ಇರುವುದಕ್ಕೇ ಸಾಧ್ಯವೇ ಇಲ್ಲ ಎನ್ನುತ್ತಾರೆ. ಈ ವಿಸ್ತಾರವಾದ ಚರ್ಚೆಯನ್ನು ಅವರು ಮೂರನೆಯ ಅಧ್ಯಾಯದಲ್ಲಿ ('ಅವಳಿಗಳುಎಂದಾದರೂ ಸಂಧಿಸಿವೆಯೇ?') ಮಾಡಿದ್ದಾರೆ.

'ಸೂಫಿ, ಇಸ್ಲಾಂ, ಭಾರತೀಯ ಸಂಪ್ರದಾಯ ಮತ್ತು ದರ್ಗಾದ ವಿದ್ಯಮಾನ' ಎನ್ನುವುದು ಈ ಪುಸ್ತಕದ ಬಹುಮುಖ್ಯವಾದ ಅಧ್ಯಯನವಾಗಿದೆ. ಇದರಲ್ಲಿ ಲೇಖಕರು ಹೇಳಬೇಕಾದುದನ್ನು ಹೇಳಿದ್ದಾರೆ. ಸಾಮಾನ್ಯವಾಗಿ ದರ್ಗಾ ಎಂದಾಗ ಸೂಫಿಗಳು ರಂಗಪ್ರವೇಶ ಮಾಡಲೇಬೇಕು ಅಥವ ಮಾಡುತ್ತಾರೆ. ಹಾಗಾದುದರಿಂದ ಸೂಫಿಗಳಿಗೂ ದರ್ಗಾಕ್ಕೂ ಏನು ಸಂಬಂಧ ಎನ್ನುವ ಮುಖ್ಯವಾದ ಪ್ರಶ್ನೆಯೊಂದನ್ನು ಎತ್ತಿದ್ದಾರೆ. ಏಕೆಂದರೆ ದರ್ಗಾಗಳನ್ನು ಸಿಂಕ್ರಟಿಸಂ ಎನ್ನುವ ನೆಲೆಯಲ್ಲಿ ವಿವರಿಸಲು ಹೊರಟ ಸಿದ್ಧಾಂತಗಳನ್ನು ಪ್ರಶ್ನಿಸುತ್ತಾ ಅಂತಹ ಒಂದು ತಾತ್ವಿಕ ನೆಲೆ ಇಲ್ಲ ಎಂದು ಹೇಳುವ ಲೇಖಕರು ಮತ್ತೊಂದು ನೆಲೆಯಲ್ಲಿ ಇದನ್ನು ವಿವರಿಸುವ ಪ್ರಯತ್ನ ಮಾಡುತ್ತಾರೆ. ಹಾಗಾದುದರಿಂದಲೇ ಮೇಲಿನ ಪ್ರಶ್ನೆಯನ್ನು ಕೇಳಲಾಗಿದೆ. ಈ ನಿಟ್ಟಿನಲ್ಲಿ ಚರ್ಚೆಯನ್ನು ಮುಂದುವರಿಸಿದಾಗ ದರ್ಗಾಗಳೆಲ್ಲವೂ ಸೂಫಿಗಳದಲ್ಲವೆಂದೂ, ದರ್ಗಾಗಳೆಲ್ಲವೂ ಸೂಫಿಗಳಿಗಾಗಿಯೇ ನಿರ್ಮಾಣವಾಗಿರಬೇಕೆಂಬ ಅಗತ್ಯವೂ ಇಲ್ಲ ಎಂಬ ಮಹತ್ವದ ಸಂಗತಿಯನ್ನು ಅವರು ತಿಳಿಸುತ್ತಾರೆ. ಏಕೆಂದರೆ ಮನೆಯ ಹಿರಿಯರಿಗೆ, ಪೈಗಂಬರರ ಪಾದುಕೆ, ಕೇಶವೂ ಸೇರಿದಂತೆ ಅನೇಕ ವಸ್ತುಗಳಿಗೆ, ಸಂಬಂಧಿಸಿದ ದರ್ಗಾಗಳು ಇವೆ ಎನ್ನುವುದನ್ನು ನಿದರ್ಶನಗಳ ಮೂಲಕ ಸ್ಪಷ್ಟಪಡಿಸುತ್ತಾರೆ. ಈ ವಿಷಯವನ್ನು ಮತ್ತಷ್ಟು ಬೆಳೆಸುತ್ತಾ ಕರ್ನಾಟಕದ ಯಾವುದೇ ದರ್ಗಾದ ಆಚರಣೆಯಲ್ಲಿ ಸೂಫಿಯೊಬ್ಬರು ಬೊಧಿಸಿದ ತತ್ವಗಳ ಆಚರಣೆ ಇದೆ ಎನ್ನುವ ವಿಷಯವನ್ನೂ ಯಾರೂ ಹೇಳಿಲ್ಲ ಎಂದು ಪ್ರತಿಪಾದಿಸಿದ್ದಾರೆ. ಅಂದರೆ ದರ್ಗಾಕ್ಕೂ ಸೂಫಿ ಸಿದ್ಧಾಂತಕ್ಕೂ ಯಾವ ಸಂಬಂಧವೂ ಇಲ್ಲ ಎಂದಾಯಿತು. ಈ ಪ್ರಶ್ನೆಯನ್ನು ಜನಗಳ ಬಳಿಗೆ ಕೊಂಡೊಯ್ದಾಗ ಲೇಖಕರಿಗೆ ಬೇರೆ ಬೇರೆ ಉತ್ತರಗಳು ಸಿಕ್ಕವು:

1. ಹಿಂದೂಗಳು ದರ್ಗಾದಲ್ಲಿ ಇರುವುದು ತಮ್ಮ ಮನೆದೇವರು ಎನ್ನುತ್ತಾರೆ, ಆದರೆ ಮುಸಲ್ಮಾನರು ಹಾಗೆ ಹೇಳುವುದಿಲ್ಲ.

2. ಮುಸಲ್ಮಾನರು ಹೇಳುವ ಹಾಗೆ ಅಲ್ಲಾಹು ಬೇರೆ ದೇವರು ಬೇರೆ.

3. ಅಂದರೆ ಮುಸಲ್ಮಾನರು ಹೇಳುವ ಹಾಗೆ, ಸಂತರು–ಅಲ್ಲಾಹುವಿಗೆ ಸಮೀಪದವರು; ಪ್ರವಾದಿಗಳು– ಅಲ್ಲಾಹುವಿನ ಸಂದೇಶಗಳನ್ನು ನೀಡುವರು; ಅಲ್ಲಾಹು– ಸತ್ಯದೇವ ಎನ್ನುವ ಸ್ಪಷ್ಟ ವ್ಯತ್ಯಾಸಗಳನ್ನು ಹೇಳುತ್ತಾರೆ.

ಹಾಗಾದುದರಿಂದ ಲೇಖಕರು ದರ್ಗಾದ ವಿದ್ಯಮಾನವನ್ನು ಪ್ರಾಚೀನ ಭಾರತೀಯ ಸಂಸ್ಕೃತಿಯ ಹಿನ್ನೆಲೆಯಿಂದ (ಅಂದರೆ ಇಸ್ಲಾಂ ಪೂರ್ವದ) ನೋಡಬೇಕಾದುದು ಅಗತ್ಯವಾದುದು ಎನ್ನುವ ಮುಖ್ಯವಾದ ತೀರ್ಮಾನಕ್ಕೆ ಬರುತ್ತಾರೆ. ಮುಂದಿನ ಅಧ್ಯಾಯದಲ್ಲಿ (ಅಂದರೆ, ಅಧ್ಯಾಯ 5– 'ಅಲ್ಲಾಹುದತ್ತ ರಿಲಿಜಿಯನ್ ಮತ್ತು ಮಾನವ ಸಂಪ್ರದಾಯಗಳ ಮುಖಾಮುಖಿ') ಇದನ್ನು ಇನ್ನಷ್ಟು ವಿಸ್ತರಿಸುವ ಪ್ರಯತ್ನ ಮಾಡುತ್ತಾರೆ. ಅದು ಹೀಗೆ: ಭಾರತೀಯ ಸಂಪ್ರದಾಯಗಳು ಇಸ್ಲಾಂ ಎನ್ನುವ ರಿಲಿಜಿಯನ್‌ಗೆ ನೀಡಿದ ಕ್ರಿಯಾಶೀಲತೆಯ ಪರಿಣಾಮದಿಂದಲೇ ದರ್ಗಾದ ಆಚರಣೆಯು ಉಂಟಾಯಿತು (ಪು. 163) ಎನ್ನುವ ಪ್ರಮೇಯವನ್ನು ಲೇಖಕರು ಮಂಡಿಸುತ್ತಾರೆ. ಅಂದರೆ ಮುಸಲ್ಮಾನರು ದರ್ಗಾದಲ್ಲಿ ಇಸ್ಲಾಂಗೆ ವಿರುದ್ಧವಾದ ಯಾವುದನ್ನೂ ಮಾಡುವುದಿಲ್ಲ. ಏಕೆಂದರೆ ಹಿರಿಯರಿಗೆ ಗೌರವ ಕೊಡಬೇಕೆಂದು ಪವಿತ್ರ ಕುರ್‌ಆನ್‌ನಲ್ಲಿಯೇ ಹೇಳಲಾಗಿದೆ. ಅದರ ಪ್ರಕಾರ ದರ್ಗಾದಲ್ಲಿರುವ ಹಿರಿಯರಿಗೆ (ಅಂದರೆ ಸತ್ತಿರುವ ಸೂಫಿ ಸಂತನಿಗೆ) ಗೌರವ ಕೊಡಲಾಗುತ್ತದೆ ಅಷ್ಟೇ. ಅಷ್ಟಾಗಿಯೂ ಒಂದು ವೇಳೆ ದರ್ಗಾದಲ್ಲಿ ಇಸ್ಲಾಮಿಗೆ ವಿರುದ್ದವಾದ ಯಾವುದಾದರೂ (ಹಿಂದೂ) ಆಚರಣೆಗಳು ರೂಢಿಯಲ್ಲಿ ಇದ್ದರೆ ಮುಸಲ್ಮಾನರು ನಿಧಾನವಾಗಿ ಅವುಗಳಿಂದ ದೂರವಾಗುತ್ತಾರೆ, ಇಲ್ಲವೇ ಅವುಗಳನ್ನು ಕೈಬಿಟ್ಟು ಇಸ್ಲಾಂ ರಿಲಿಜಿಯನ್‌ಗೆ ಸರಿಹೊಂದಿಸುತ್ತಾರೆ ಅಥವಾ ದರ್ಗಾಕ್ಕೆ ಹೋಗುವುದನ್ನೇ ಕಡಿಮೆ ಮಾಡುತ್ತಾರೆ. ಹೀಗೆ ಇಸ್ಲಾಂ ಒಂದು ರಿಲಿಜಿಯನ್ ಆಗಿ ವೈವಿಧ್ಯಮಯವಾದ ಆಚರಣೆಗಳನ್ನು ಒಳಗೊಳ್ಳುತ್ತದೆ. ಹಾಗೆಯೇ ಕಾಲಾನಂತರದಲ್ಲಿ ಅದು ಇಸ್ಲಾಂಗೆ ವಿರುದ್ಧವಾದುದು ಎಂದು ಕಂಡು ಬಂದರೆ, ಅದನ್ನು ತೆಗೆದು ಹಾಕುತ್ತದೆ. ದರ್ಗಾದ ಆಚರಣೆಯೂ ಅಂತಹುದೇ ಆಗಿದೆ. ಮೊದಲಿಗೆ ಇಸ್ಲಾಂ ಕೆಲವೊಂದು ಆಚರಣೆಗಳನ್ನು ದರ್ಗಾದಲ್ಲಿ ನಡೆಸುದಕ್ಕೆ ಒಪ್ಪಿಕೊಳ್ಳುತ್ತದೆ, ಆದರೂ ಕಾಲಾನಂತರದಲ್ಲಿ ಅವುಗಳನ್ನು ಕೈಬಿಡುತ್ತದೆ. ಒಂದು ವೇಳೆ ಅವು ಇನ್ನೂ ಮುಂದುವರೆದರೆ ಮುಸಲ್ಮಾನರೇ ಅವುಗಳಿಂದ ದೂರ ಉಳಿಯುತ್ತಾರೆ. ಬಾಬಾಬುಡನ್ ಗಿರಿಯ ದರ್ಗಾದಲ್ಲಿಯೂ ಆಗಿರುವುದು ಇದೇ. ಈಗ ಹಿಂದಿನ ಹಾಗೆ ಮುಸಲ್ಮಾನರು ಹೆಚ್ಚು ಸಂಖ್ಯೆಯಲ್ಲಿ ಈ ದರ್ಗಾಕ್ಕೆ ಬರುವುದು ಕಡಿಮೆಯಾಗಿದೆ, ಬಂದರೂ ಹಿಂದೂಗಳು ಆಚರಿಸುವ ಪದ್ಧತಿಗಳನ್ನು ಅವರೂ ಆಚರಿಸುವುದು ವಿರಳ.

ಇದರಿಂದ ದರ್ಗಾದ ಆಚರಣೆಗಳನ್ನು ಪ್ರಾಚೀನ ಭಾರತೀಯ ಸಂಸ್ಕೃತಿಯ ಹಿನ್ನೆಲೆಯಿಂದ ನೋಡಬೇಕು ಎನ್ನುವ ಮಾತಿಗೆ ಮಹತ್ವ ಬರುತ್ತದೆ. ಅಂದರೆ ಇಸ್ಲಾಮ್ ರಿಲೀಜಿಯನ್ನನ್ನು ಸರಿಯಾಗಿ ಗ್ರಹಿಸಲಾಗದ ಹಿಂದೂಗಳು ಅದನ್ನು ಒಂದು ಧರ್ಮವಾಗಿ ಭಾವಿಸಿದರು. ಧರ್ಮವಾಗಿ ಭಾವಿಸಿದಾಗ ಎಂದಿನಂತೆ ಪೂಜೆ–ಪುರಸ್ಕಾರಗಳೆಲ್ಲಾ ಬರಬೇಕು. ಅಲ್ಲಾಹು ಮಾತ್ರವೇ ನಿಜವಾದ ದೇವರು ಎನ್ನುವ ಪವಿತ್ರ ಕುರ್‌ಆನ್‌ನಿನ ಬೋಧನೆಯನ್ನು ತಮ್ಮ ಸಂಸ್ಕೃತಿಯ ಹಿನ್ನೆಲೆಯಲ್ಲಿ ತಿಳಿಯದ ಹಿಂದೂ ಜನ ಇತರ ಹಿಂದೂ ದೇವರ ಹಾಗೆಯೇ ಅಲ್ಲಾಹುವನ್ನೂ ತಪ್ಪಾಗಿ ಪರಿಭಾವಿಸಿದರು. ಇಸ್ಲಾಮ್ ರಿಲೀಜಿಯನ್‌ನ್ನು ಪ್ರಚಾರ ಮಾಡಲು ಬಂದ ಸೂಫಿಗಳನ್ನು ಮೊದಲಿಗೆ ಸಂತ ಎಂದು ಭಾವಿಸಿ ಆಮೇಲೆ ಅವರನ್ನು ದೇವರು ಎಂದು ಪೂಜಿಸತೊಡಗಿದರು. ಆದರೆ ಇದು ಇಸ್ಲಾವ್‌ಗೆ

ಹೊರತಾದುದು ಎಂದು ಅವರಿಗೆ ತಿಳಿಯಲೇ ಇಲ್ಲ. ಇದಕ್ಕೆ ಮುಖ್ಯ ಕಾರಣ ಭಾರತದ ಸಂಪ್ರದಾಯಗಳಿಗೆ ರಿಲೀಜಿಯನ್ನಿನ ಪರಿಚಯ ಇಲ್ಲದೇ ಇರುವುದೇ ಆಗಿದೆ. ಹಾಗಾದುದರಿಂದ ದರ್ಗಾದಲ್ಲಿರುವುದು ಸಾಬರ ದೇವರು, ಅಲ್ಲಾಸಾಮಿ ಎಂದು ಹೇಳಿದ್ದೇ ಹೇಳಿದ್ದು. ಕಾಯಿ ಹೊಡೆದ್ದೇ ಹೊಡೆದ್ದದ್ದು!

ಇದು ಮಹೇಶ್ ಕುಮಾರ್ ಅವರು ಪ್ರತಿಪಾದಿಸಿರುವ ಮುಖ್ಯ ಪ್ರಮೇಯಗಳಾಗಿವೆ. ಇದನ್ನು ನಾನು ಇಲ್ಲಿಯವರೆಗೆ ಸ್ವಲ್ಪ ದೀರ್ಘವಾಗಿಯೇ ವಿವರಿಸಿದ್ದೇನೆ. ಇದಕ್ಕೆ ಕಾರಣಗಳಿವೆ: ಮೊದಲನೆಯದಾಗಿ, ಕನ್ನಡದಲ್ಲಿ ಸಮಾಜಶಾಸ್ತ್ರಕ್ಕೆ ಸಂಬಂಧಿದಂತೆ ಬಂದಿರುವ ಪಿಹೆಚ್.ಡಿ ಪ್ರಬಂಧವಿದು. ಪಿಹೆಚ್.ಡಿ ಎನ್ನುವುದು ಇಂದು ಪದವಿ ನಿಮಿತ್ತ ಮಾಡುವ ಕುಶಲಕರ್ಮ ಎನ್ನುವ ಪರಿಸ್ಥಿತಿಯಲ್ಲಿ ನಾವಿರುವಾಗ, ಅದಕ್ಕಿಂತ ಭಿನ್ನವಾಗಿ ಈ ಪ್ರಬಂಧವಿದೆ ಎನ್ನುವುದನ್ನು ತೋರಿಸುವುದು ನನ್ನ ಉದ್ದೇಶವಾಗಿದೆ. ಎರಡನೆಯದಾಗಿ, ಕನ್ನಡದ ಕೆಲವು ಹಿರಿಯರಿಗೆ ಕನ್ನಡದಲ್ಲಿ ಈಗ ವಿದ್ವತ್ತು ಎನ್ನುವುದು ಗೈರುಹಾಜರಿಯಾಗಿದೆ. ಅದು ನಮ್ಮ ಕಾಲಕ್ಕೆ ಮಾತ್ರ ಸೀಮಿತವಾಗಿತ್ತು ಎನ್ನುವ ವಿಚಿತ್ರ ಭ್ರಮೆಯೊಂದು ಆವರಿಸಿ ಬಿಟ್ಟಿದೆ. ಕನ್ನಡದ ಹಿರಿಯರು ಎಲ್ಲಿ ಎಡವಿದ್ದಾರೆ ಎನ್ನುವುದನ್ನು ಕೂಡ ಈ ಪ್ರಬಂಧದ ಓದಿನಿಂದ ತಿಳಿಯಬಹುದಾಗಿದೆ. ಏಕೆಂದರೆ ಈ ಪರಿಯ ಸಂಶೋಧನೆಯನ್ನು ಕನ್ನಡದಲ್ಲಿ ಹಿರಿಯರು ಕೂಡ ಮಾಡಿರುವುದು ಇಲ್ಲವೆನ್ನುವಷ್ಟು ಅಪರೂಪ.

ಇಷ್ಟೆಲ್ಲ ಹೇಳುವಾಗಲೂ ಈ ಪ್ರಬಂಧದಲ್ಲಿ ಸಮಸ್ಯೆಗಳೇ ಇಲ್ಲ ಎನ್ನುವ ನಿಲುವು ನನ್ನದಲ್ಲ. ಇದರಲ್ಲಿ ಸುಮಾರು 13 ಕ್ಕಿಂತಲೂ ಹೆಚ್ಚುಬಾರಿ ಡಾ.ಎಸ್.ಎನ್.ಬಾಲಗಂಗಾಧರ ಅವರ ಹೆಸರನ್ನು ಉಲ್ಲೇಖಿಸಲಾಗಿದೆ. 'ಅವಳಿಗಳು ಎಂದಾದರೂ ಸಂಧಿಸಿವೆಯೇ?'ಎನ್ನುವ ಮೂರನೇ ಅಧ್ಯಾಯದಲ್ಲಿ ಸುಧೀರ್ಘವಾಗಿ ಬಾಲಗಂಗಾಧರ ಅವರ ಚಿಂತನೆಯನ್ನೇ ಪ್ರಸ್ತಾಪಿಸಿದ್ದಾರೆ. ಬಹುಮಟ್ಟಿಗೆ ಇದೇ ಮಾದರಿಯಲ್ಲಿ ಬಾಲಗಂಗಾಧರ ಅವರ ಪುಸ್ತಕದ ಒಂದು ಅಧ್ಯಾಯದ ಹೆಸರೂ ಇದೆ. ಇದರಿಂದ ಬಾಲಗಂಗಾಧರ ಅವರ ಚಿಂತನೆಯ ಇನ್ನೊಂದು ಮಾದರಿ ಎಂದು ಯಾರಾದರೂ ಈ ಪುಸ್ತಕವನ್ನು ತಪ್ಪಾಗಿ ತಿಳಿಯುವ ಅಪಾಯವಿದೆ. ಈಗಾಗಲೇ ಬಾಲಗಂಗಾಧರ ಅವರ ಚಿಂತನೆ ಎಂದರೆ ಕೆಲವರು ಇಂಗು ತಿಂದ ಮಂಗನ ಹಾಗೆ ವರ್ತಿಸುವುದು ನಮಗೆಲ್ಲ ಗೊತ್ತಿರುವ ಸಂಗತಿಯೇ ಆಗಿದೆ. ಹಾಗಿರುವಾಗ ತುಂಬ ತೀಕ್ಷ್ಣವಾದ ಒಳನೋಟಗಳಿರುವ ಈ ಪುಸ್ತಕ ಗಮನ ಸೆಳೆಯದೆ ಹೋಗಬಾರದು ಎನ್ನುವ ಕಾರಣಕ್ಕೆ ಇದನ್ನು ಹೇಳುತ್ತಿದ್ದೇನೆ. ಬಾಲಗಂಗಾಧರ ಅವರು ಹೊಸ ರೀತಿಯಲ್ಲಿ ಯೋಚಿಸುವ ಅಗತ್ಯ ಹಾಗೂ ಅಂತಹ ದೃಷ್ಟಿಕೋನವನ್ನು ಕೊಟ್ಟವರು. ಅದನ್ನು ಗೌರವದಿಂದ ಒಪ್ಪೋಣ. ಹಾಗೆಂದು ಸಂಶೋಧನ ಕೃತಿಯೊಂದರಲ್ಲಿ ಅದು ಮೇರೆ ಮೀರಬಾರದಲ್ಲ? ಅಷ್ಟಕ್ಕೂ ಒಂದು ಖಚಿತವಾದ ಸೈದ್ಧಾಂತಿಕ ಚೌಕಟ್ಟು ಇರುವುದರಿಂದ, ಅದರ ಜೊತೆಗೆ ಕ್ಷೇತ್ರಕಾರ್ಯದ ಹಿನ್ನೆಲೆ ಇರುವುದರಿಂದ ಇಲ್ಲಿಯ ವಾದಗಳಿಗೆ ತನಗೆ ತಾನೇ ಒಂದು ನಿಖರತೆ ಇದೆ. ಅಥವಾ ಲೇಖಕರು ನೇರವಾಗಿ ಹೇಳದಿದ್ದರೂ ಇದರಲ್ಲಿ ಬಾಲಗಂಗಾಧರ ಅವರ ಪ್ರಭಾವ ಇರುವುದು ಅವರ ಪುಸ್ತಕಗಳನ್ನು ಓದಿದ ಯಾರಿಗಾದರೂ ಗೊತ್ತಾಗಿಯೇ ಹೋಗುತ್ತದೆ! ಹೀಗಿರುವಾಗ ಹಗ್ಗ ಕೊಟ್ಟು ಕೈ ಕಟ್ಟಿಸಿಕೊಳ್ಳುವ ಅಗತ್ಯವಾದರೂ ಏನು? ಅದರ ಬದಲು ಕನ್ನಡದಲ್ಲಿ ಇಸ್ಲಾಮ್‌ನ ಕುರಿತು, ಆ ರಿಲಿಜಿಯನ್ನಿಗೆ ಸೇರಿದವರೇ ಬರೆದಿರುವ ಪುಸ್ತಕಗಳ ಮೇಲೆ ಲೇಖಕರು ಕಣ್ಣಾಡಿಸಿದ್ದರೂ ಸಾಕಿತ್ತು. ಹಾಗೆಯೇ ರಂಜಾನ್‌ದರ್ಗ ಮೊದಲಾದವರು ವಚನ ಸಾಹಿತ್ಯದ ಬಗೆಗೆ ಬರೆಯುತ್ತಿರುವುದನ್ನು

ನೋಡಿದರೂ ಸಾಕಾಗುತ್ತದೆ. ಆಗ ರಿಲಿಜಿಯನ್ ಚೌಕಟ್ಟಿನಿಂದ ರಿಲೀಜಿಯನ್ ಅಲ್ಲದ ಸಂಗತಿಗಳನ್ನು ಇವರೆಲ್ಲ ಹೇಗೆ ನೋಡುತ್ತಿದ್ದಾರೆ ಎಂಬುದನ್ನು ಗ್ರಹಿಸಬಹುದು. ಏಕೆಂದರೆ ಈಗ ಕನ್ನಡದಲ್ಲಿ ಇಸ್ಲಾಮ್‌ನ ಕುರಿತು ಅನೇಕ ಪುಸ್ತಕಗಳು ಬರುತ್ತಿವೆ. (ಉದಾ: ಶಾಂತಿ ಪ್ರಕಾಶನ, ಮಂಗಳೂರು) ಆ ಪುಸ್ತಕಗಳಲ್ಲಿ ಭಾರತೀಯ ಸಂಪ್ರದಾಯಗಳ ಬಗೆಗೂ ಕೆಲವೊಂದು ಒಳನೋಟಗಳಿವೆ. ಅವು ತುಂಬ ಕುತೂಹಲಕರವಾಗಿವೆ ಎನ್ನುವ ಕಾರಣಕ್ಕೆ ಇದನ್ನು ಉಲ್ಲೇಖಿಸಲಾಗಿದೆ.

ಅದರ ಹೊರತಾಗಿಯೂ 'ಈಶ್ವರ್ ಅಲ್ಲಾ ತೇರೋ ನಾಮ್' ಪುಸ್ತಕವು ಒಂದು ಮುಖ್ಯವಾದ ಸಂಶೋಧನೆಯಾಗಿದೆ. ಅದರ ಶೀರ್ಷಿಕೆ ಕೂಡ ಆಕರ್ಷಕವಾಗಿದೆ. ಅದು ನಮಗೆ ಹೊಸ ದೃಷ್ಟಿಕೋನವನ್ನು ನೀಡುತ್ತದೆ. ಇಷ್ಟರವರೆಗೆ ನನ್ನನ್ನು ಕಾಡುತ್ತಿದ್ದ ಮುಖ್ಯ ಪ್ರಶ್ನೆಯೊಂದಕ್ಕೆ ಸಮರ್ಪಕವಾದ ಉತ್ತರವೂ ಈ ಪುಸ್ತಕದಲ್ಲಿ ಇದೆ. ಅದು ಮುಖ್ಯವಾಗಿ ರಹಮತ್ ತರೀಕೆರೆ, ಎಮ್.ಎಸ್.ಆಶಾದೇವಿ ಮೊದಲಾದವರು ಕೋಮುವಾದಕ್ಕೆ ಸಂಜೀವಿನಿಯ ರೀತಿಯಲ್ಲಿ ಹೇಳುವ ಸೂಫಿಸಂ ಎನ್ನುವುದಕ್ಕೆ ಸಂಬಂಧಿಸಿದ ಪ್ರಶ್ನೆಯಾಗಿತ್ತು. ಅವರ ಪುಸ್ತಕಗಳನ್ನು ಲೇಖನಗಳನ್ನು ಓದಿದ ಮೇಲೂ ಸೂಫಿಸಂ ಎಂದರೇನು ಎನ್ನುವುದು ನನಗೆ ಅರ್ಥವಾಗಿರಲಿಲ್ಲ. ಆದರೆ ಡಾ.ಮಹೇಶಕುಮಾರ್ ಅವರ ಪುಸ್ತಕದಲ್ಲಿ ಅದಕ್ಕೆ ಉತ್ತರವಿದೆ: ಸೂಫಿಸಂ ಎನ್ನುವುದು ಇಲ್ಲವೇ ಇಲ್ಲ; ಇರುವುದು ಇಸ್ಲಾಮ್ ಎನ್ನುವ ರಿಲೀಜಿಯನ್ ಮಾತ್ರ ಎಂಬುದೇ ಆ ಉತ್ತರವಾಗಿದೆ! ಇಲ್ಲದಿರುವುದರ ಬಗೆಗೆ ಇಷ್ಟೊಂದು ಬರೆಯುವವರು ಇನ್ನು ಅಂತಹದೊಂದು ಇಸಂ ಇದ್ದಿದ್ದರೆ ಎಷ್ಟೊಂದು ಬರೆಯುತ್ತಿದ್ದರು ಎಂದು ನೆನಸಿಕೊಂಡು ಈಗ ನನಗೆ ನಗು ಬರುತ್ತಿದೆ! ಇಂತಹ ಅನೇಕ ಕಾರಣಗಳಿಂದಾಗಿ ಈ ಪುಸ್ತಕ ಮುಖ್ಯವಾದ ಒಂದು ಸಂಶೋಧನೆ ಎಂದೂ, ಅದು ನಮಗೆ 'ಸನ್ಮತಿ' ನೀಡುತ್ತದೆ ಎಂದೂ ನನಗೆ ಅನಿಸುತ್ತಿದೆ.

ಕೊಳದ ತಳ ಕೆಸರೆಂದು
ಹಳಿಯಬೇಡ
ತಳ ಕೆಸರಾದರೆ ತಾನೆ
ಜಲ ತಿಳಿಯಾಗುವುದು?

ತುಳುನಾಡಿನ ಇತಿಹಾಸ ಹೇಳುವ ಸತ್ಯಗಳು

ಬಾರ್ಕೂರು ಉದಯ
ಪ್ರಾಧ್ಯಾಪಕರು ಮತ್ತು ಅಧ್ಯಕ್ಷರು, ಇತಿಹಾಸ ಅಧ್ಯಯನ ವಿಭಾಗ
ಮಂಗಳೂರು ವಿಶ್ವವಿದ್ಯಾನಿಲಯ, ಮಂಗಳಗಂಗೋತ್ರಿ–574199

ತುಳುವ, ತುಳುವನಾಡು, ತುಳುದೇಶ ಎಂಬುದಾಗಿಯೂ ಕರೆಯಲ್ಪಡುವ ತುಳುನಾಡು ಕರ್ನಾಟಕ ರಾಜ್ಯದ ಪಶ್ಚಿಮ ಕರಾವಳಿಯಲ್ಲಿರುವ ಉಡುಪಿ ಮತ್ತು ದಕ್ಷಿಣ ಕನ್ನಡ ಜಿಲ್ಲೆಗಳೆಂದು ಸ್ಥೂಲವಾಗಿ ಹೇಳಬಹುದು. ಇತಿಹಾಸದ ಕೆಲವು ಕಾಲಗಳಲ್ಲಿ ಇದು ಉತ್ತರ ಕನ್ನಡದ ಕೆಲವು ಭಾಗಗಳನ್ನೂ, ಪಶ್ಚಿಮ ಘಟ್ಟದ ಮೇಲಿನ ಕೆಲವು ಪ್ರದೇಶಗಳನ್ನೂ ಒಳಗೊಂಡಿತ್ತು. ಪರಂಪರಾತ್ಮಕ ಹೇಳಿಕೆಗಳ ಪ್ರಕಾರ ಸಹ್ಯಾದ್ರಿ ಮತ್ತು ಪಶ್ಚಿಮ ಘಟ್ಟಗಳ ನಡುವೆ ದಕ್ಷಿಣದಲ್ಲಿ ಚಂದ್ರಗಿರಿ ನದಿಯಿಂದ (ಇದು ಈಗ ಕಾಸರಗೋಡು ಜಿಲ್ಲೆಗೆ ಸೇರಿದೆ), ಉತ್ತರದಲ್ಲಿ ಕಲ್ಯಾಣಪುರದವರೆಗೆ ಇರುವ ಕರಾವಳಿ ಪ್ರದೇಶ ತುಳುನಾಡು.

ಈವರೆಗೆ ನೋಡಿದಂತೆ ತುಳುನಾಡಿನ ರಾಜಕೀಯ ಚರಿತ್ರೆ, ಅರಸು ಮನೆತನಗಳ ಮೇಲಾಟದ ಕಥೆ. ಇದು ಕೇವಲ ತುಳುನಾಡಿಗೆ ಸೀಮಿತವಾಗಿರುವ ಲಕ್ಷಣವೇನೂ ಅಲ್ಲ. ನಾವು ಇತಿಹಾಸದ ಗತವೈಭವವನ್ನು ನೋಡುವಾಗ ಎಲ್ಲಾ ದೇಶಗಳ ಚರಿತ್ರೆಯ ಪ್ರಧಾನ ವಿಷಯವೂ ಇದೇ. ಒಂದೊಂದು ಕಾಲದಲ್ಲಿ ಒಂದೊಂದು ರಾಜವಂಶ ಮತ್ತು ಅದರಲ್ಲಿ ಕೆಲವು ರಾಜರು ತಮ್ಮ ಶಕ್ತಿ ಸಾಮರ್ಥ್ಯಗಳಿಂದ ಮೇಲಕ್ಕೇರುವುದು, ಅವರ ಶಕ್ತಿ ಮತ್ತು ಮನೋಧರ್ಮಕ್ಕನುಗುಣವಾಗಿ ರಾಜ್ಯದಲ್ಲಿ ಬದಲಾವಣೆಗಳಾಗುವುದು–ಇವು ಪ್ರಾಚೀನ ರಾಜಕೀಯದಲ್ಲಿ ಕಂಡುಬರುವ ನಿರಂತರ ಪ್ರಕ್ರಿಯೆಗಳು. ಆದರೆ, ಈ ರಾಜಕೀಯದ ಅಸ್ಥಿರತೆ, ಕಚ್ಚಾಟಗಳು ಮತ್ತು ಬದಲಾವಣೆಗಳಿಗನುಗುಣವಾಗಿ ಜನಜೀವನವೂ ಬದಲಾಗುವಂತಿಲ್ಲ. ಯಾವ ರಾಜನೆ ಅಧಿಕಾರಕ್ಕೆ ಬರಲಿ, ಯಾವವಂಶವೇ ಪದಚ್ಯುತವಾಗಿರಲಿ, ಜನಜೀವನದ ನಿರಂತರ ಪ್ರವಾಹ ಏಕ ಪ್ರಕಾರವಾಗಿ ವಿಕಾಸಗೊಳ್ಳಬೇಕಾದುದು ಅವಶ್ಯಕ. ಅದಕ್ಕೆ ತಕ್ಕ ಮಾರ್ಗವನ್ನು ಭರತಖಂಡ ಬಹಳ ಪ್ರಾಚೀನ ಕಾಲದಲ್ಲಿಯೇ ಕಂಡುಕೊಂಡಿತ್ತು. ಆದರೆ, ರಾಜವಂಶಗಳ ಪ್ರಭಾವವೇ ಜನಗಳ ಮೇಲೆ ಇಲ್ಲವೆಂದಲ್ಲ. ಪ್ರಬಲವಾದ ಧರ್ಮಿಷ್ಟನಾದ, ಸುಸಂಸ್ಕೃತನಾದ ರಾಜ ಬಂದಾಗ, ಅದರ ಫಲವಾಗಿ ಪ್ರಜೆಗಳ ಜೀವನ ಹೆಚ್ಚು ನೆಮ್ಮದಿಯಿಂದ ಕೂಡಿ ಕಲಾತ್ಮಕವಾದ ಅನುಭವವನ್ನು ಸವಿಯಲು ಸಾಧ್ಯವಾಗುತ್ತಿದ್ದುದು ನಿಜ. ದುರ್ಬಲ ರಾಜ್ಯಗಳು ಶತ್ರುಗಳ ದಾಳಿಗೆ ಈಡಾದಾಗ, ಪ್ರಜೆಗಳು ದುಃಖಿತರಾಗುತ್ತಿದ್ದುದನ್ನೂ ಇಲ್ಲವೆನ್ನುವಂತಿಲ್ಲ. ಜನಜೀವನದ ಸಾಮಾನ್ಯರೂಪ, ಅವರ ಬಾಳಿನ ಶ್ರದ್ಧೆ, ನಂಬಿಕೆ, ಬೆಳವಣಿಗೆ ಶಕ್ತಿಗಳು ರಾಜನನ್ನೂ, ರಾಜವಂಶವನ್ನೂ ಪ್ರಧಾನವಾಗಿ ಅವಲಂಭಿಸಿರಲಿಲ್ಲ. ತಾತ್ವಿಕವಾದ ಸಂಸ್ಕೃತಿಯ ತಳಹದಿಯ ಮೇಲೆ ಅವು ರೂಪಿತವಾಗಿದ್ದುವು. ಆದ್ದರಿಂದಲೇ, ರಾಜರ ಏಳುಬೀಳುಗಳ ನಿರಂತರ ಹೋರಾಟದ ಮಧ್ಯದಲ್ಲಿಯೂ ಜನ ಜೀವನ ಸುದೃಢವಾದ ತಳಹದಿಯ ಮೇಲೆ ಬೆಳೆದು ಬಂದಿತು. ಈ ಸಂಸ್ಕೃತಿಗೆ ಪೂರಕವೆಂಬಂತೆ ತುಳುನಾಡಿನಲ್ಲಿ ಗತಿಸಿಹೋದ ಎರಡು ಪ್ರಮುಖ ಐತಿಹಾಸಿಕ ಘಟನೆಗಳನ್ನು ಪುರ್ನವಿಮರ್ಶೆ ಮಾಡುವ

ಪ್ರಯತ್ನ ಈ ಲೇಖನದಲ್ಲಿ ಮಾಡಲಾಗಿದೆ. ಈ ಎರಡೂ ಘಟನೆಗಳು ತುಳುನಾಡನ್ನು ವಿಜಯನಗರದರಸರು ಆಳುತ್ತಿರುವಾಗ ನಡೆದಿರುವುಗಳು. ಮತ್ತು ಅವುಗಳು ಇಲ್ಲಿನ ಜನರಲ್ಲಿ ಬೆಳೆದು ಬಂದು ವಿಶಿಷ್ಟ ಸಂಸ್ಕೃತಿಯನ್ನು ಎತ್ತಿ ಹಿಡಿಯುತ್ತವೆ. ಮುಖ್ಯವಾಗಿ ವಿವಿಧ ಸಮುದಾಯಗಳ ನಡುವೆ ಇರುವ ಅನ್ಯೋನ್ಯತೆ, ಸಹಬಾಳ್ವೆ ಮತ್ತು ಸಾಮರಸ್ಯವನ್ನು ವಿಶ್ಲೇಷಿಸುತ್ತದೆ.

ಒಂದನೇ ಘಟನೆ ಮಂಗಳೂರು ರಾಜ್ಯದ ವ್ಯಾಪ್ತಿಗೆ ಒಳಪಟ್ಟಿರುವ ಕೊಡಿಯಾಲ್ ಬೈಲ್‌ನಲ್ಲಿ ಕ್ರಿ.ಶ. 1419ರಲ್ಲಿ ನಡೆದಿರುವುದು. ಇನ್ನೊಂದು ಬಾರಕೂರು ರಾಜ್ಯದ ವ್ಯಾಪ್ತಿಗೆ ಒಳಪಟ್ಟ ಕೋಟೇಶ್ವರ ಕೋಟಿಲಿಂಗೇಶ್ವರ ದೇವಾಲಯದಲ್ಲಿ ಸಂಭವಿಸಿರುವಂತದ್ದು. ಈ ಎರಡೂ ಘಟನೆಗಳ ವಿವರಗಳು ಆ ಕಾಲದ ಶಾಸನಗಳಲ್ಲಿ ಅಚ್ಚಾಗಿದ್ದು, ವಿಜಯನಗರ ಅರಸರ ಅಧೀನಕ್ಕೆ ಒಳಪಟ್ಟ ಹಿಂದು ಮತ್ತು ಮುಸ್ಲಿಂ ಪ್ರಜೆಗಳ ನಡುವೆ ಬೆಳೆದು ಬಂದ ಕೋಮು ಸಾಮರಸ್ಯ, ಸಹಬಾಳ್ವೆಗೆ ಮುಖ್ಯವಾದ ಆಕರಗಳಾಗಿವೆ.

ಒಂದನೆ ಶಾಸನ ವಿಜಯನಗರದರಸ ದೇವರಾಯನ ಕಾಲಕ್ಕೆ ಸೇರಿದ್ದು, ಅದರ ಪಾಠ ಈ ಕೆಳಗಿನಂತಿದೆ;

1. ನಮಸ್ತುಂಗಸಿರ (ಚು)ಂಬಿಚಂದ್ರ ಚಾಮರಚಾರವೇ
2. (ತ್ರೈಲೋಕ್ಯ) ನಗರಾರಂಭ (೦) ಮೂಲ ಸ್ತಂಭಾಯ ಶಂಭವೇ/ಸ್ವಸ್ತಿ ಶ್ರೀ
3. ಜಯಾ (ಭ್ಯು)ದಯ ಶಕವರು (ಷ) 1341ನೆಯ (ವರ್ತ)ಮಾನ ವಿಳಂಬಿ ಸ–
4. ಂವೆಚ್ಚರದ ಚಯಿ (ತ್ರ)ಸು 1೦/ಶ್ರೀ ಮಂಮಹಾರಾಜಾಧಿರಾಜ ರಾಜ
5. ಪರಮೇಶ್ವರ ಶ್ರೀವೀರ ಪ್ರತಾಪ ದೇವರಾಯ ಮಹಾರಾಯರು ಸಮಸ್ತರಾ–
6. ಜ್ಯವ ನಾಳುವ ಕಾಲದಲ್ಲಿ (ಆ) ರಾಯರ ನಿರೂಪದಿಂ ಬಯಿಚದಂ–
7. ಣಾಯಕ ಒಡೆಯರಿಗೆ ಮಂಗಲೂರ ರಾಜ್ಯವಾದ (ಲಿ) ಅವರ ನಿರೂಪ
8. ದಿಂ ತಿಂಮಂಣ (ಒ)ಡೆಯರು ಮಂಗಲೂರ ರಾಜ್ಯವಾ ನಾಳುತ್ತಿರ್ದ್ದ ಕಾ–
9. ಲದಲ್ಲಿ ಪೂರುವ ಮರಿಯಾದೆ ಹಂಜಮಾನ ನಖರದವರು
10. ಕೊಡವಾಗ ತಿಂಮಂಣ (ಒ)ಡೆಯರು ಹಂಜಮಾನದವರ
11. ಮೇಲೆ ಆವ ಕಾರುಣವಾಗಿ ಪರಿವಾರವ ಹರಿಯಬಿಟು ಕಾ(ಡಿ)ನಾಯ–
12. ಕ ಕಿರಿಚಗಿರಿ ವೆ (ಳಾಳು)ಂ ವೆಲುಗುಡಿ ನಾಕಯಿದು ಪಳಿಯ
13. ಸುಟು ಹಾಳಾಗಿ (ಕೆ)ಟ್ಟು ತೆಗೆದು ಹೋಗಿ ಹೊಳೆಯಾಭೆಯದಲಿ
14. ಯಿಸು(ದಿ(ಯನೂ ರಾಯರು ದಣಾಯಾಕರು ಬಯಿಚೆದ
15. ಂಣಾಯಕರೂ ಚಿ(ತ್ತ)ವಿಸಿ ಆ ಕೆಟು ತೆಗೆದುಹೋದ ಹಂ
16. ಜಮಾನದವರಿಗೆ ಮಾಂನ್ಯಪರಿಹಾರವ ಕೊಟ್ಟು ಅವರನೂ ಮು–
17. ಂನಿನೋಪಾದಿ ಒಕ್ಕಲಮಾಡಿ (ಸೂದೆ)ಂದು ನಿರುಪವ ಕೊಟ್ಟು ರಾಯ
18. ಸ ತರುವ ಕಹ ತಿಂಮಣ ಒಡೆಯರಿಗೆ ಬಂದಲಿ ಅತಿಂಮಂ–
19. ಣಒಡೆಯರು ತಂಮ ಪ್ರಧಾನಿಗಳು ಬಂಗರು ಚವಿಟರು
20. ಅಜಿಲರು ಸಮಸ್ತ ಕಟ್ಟಳೆಯರೂ ಕೂಡಿ ಮಾತನಾಡಿ ನಂಮ–
21. ನೂ ಭಾವಿಸಿ ನಾಡೆ ಕಿಟಕಿಟೆಂಗಾಗಿ ನಂಮ ಜಮಾತುಪಳಿಗೆ
22. ದರ್ಮ್ಮ್ಯಪರಿಹಾರವಾಗಿ ಆ ಪಳಿಯಲಿ ಧಾರೆಯ ನೆರೆದು ಸಾಸ–
23. ನವ ಬರಸಿ ಕೊಟ್ಟಂತಾ ಕ್ಷೇತ್ರದ ಕ್ರಮವೆಂತೆಂದರೆ ಕೊಡೆಯಾ

24. ಲದೊಳಗೆ ... (ಚೆಡೆಂಬಿ) ಠಾ ಉ ಠಾವಿನ ಚತು...
25. ಸೀಮೆಯ....
26. ಮೂಡಲ 5 (ಹೆಗ್ಗಡೆಯ ಬಯಲು)ಬೀಡಿನ ಪಡುವ
27. ದೆಲು ಕಾತು (ಕೇ)ತನ ಠಾವಿನ ....ಮಲ್ಲಿಂದಂ ತೆಂಕಲು (ರುದ್ರ)
28. .... (ರೋಜ)ನ ತೋಟ ಅಗಳಿಂದೆಂ ಪಡುವಲು ಅಲಪರಸನ ಠಾವಿನ ಬ
29. ಳಿಂದೆಂ ಬಡಗಲುಯಿಂತೀ ಚತುಸ್ಸೀಮೆ ಒಳಗುಳ್ಳ ಬಯಲು ಬಿ–
30. ತ್ತುವ ಬಿದೆಕಾರು ಮೂಡೆ ನಾಲುವತ್ತು ಬೆಟು ಬಿತ್ತುವ ಬಿದೆಕಾ–
31. ರು ಮೂಡೆ ಹತ್ತು ಅಂತೂ ಏಕತ್ರ ಬಿತ್ತುವ ಬಿದೆಕಾರು ಮೂ 50
32. ಇ ತಾಳಿಗುಳಂಥಾ ಜಲಫಾಸಣನಿಧಿನಿಕ್ಷೇಪವೆಂಬ
33. .... ಕೆರ ಮರ ಫಲ ಕ(ಣ).... ಜಿಸ
34. ಕಿಲು ಸಹಿ ಇಠಾವಿನ ಅನಾಯವು ಸರ್ವಮಾನ್ಯವಾಗಿ ಜ
35. ಮಾತುಪಳಿಗೆ ಧರ್ಮಪರಿಹಾರವಾಗಿ ತಿಂಮಂಣ ಒ (ಡೆ)ಯ–
36. (ರು) ಸಾಸನವ ಬರೆಸಿಕೊಟ್ಟಂಥಾ ಕ್ಷೇತ್ರ () ಈ ಧರ್ಮದೆ ಸಾವಿ
37. (ಗೆ) ಅರೊಬರು ಅಳುಸಿದರಾದರೆ ವಾರಣಾಸಿಯಲ್ಲಿ ಸಾವಿರ–
38. ಕಪಿಲೆಯ ಸಾವಿರ ಬ್ರಾಹಂಮರ ವಧಿಸಿದ ದೋ(ಷ)ಕ್ಕೆ ಹೋಹರೂ
39. ಸಾಮಾನ್ಯೋಯಂ ದರ್ಮ್ಮಸೇತುಂ ನೃಪಣಾಂ ಕಾಲೇಕಾಲೇ ಸಾಲನೀಯೊ

ಎರಡನೆಯ ಶಾಸನ ಕ್ರಿ.ಶ. 1551ರಲ್ಲಿ ಬರೆಸಿದ್ದು, ಸದಾಶಿವ ರಾಯನ ಕಾಲಕ್ಕೆ ಸಂಬಂಧಿಸಿರುವುದು. ಇದರ ಪಾಠ ಹೀಗಿದೆ;

1. ಸ್ವಸ್ತಿ (ಶ್ರಿ) ನಮಸ್ತುಂಗ ಶಿರಶ್ಚುಂಬಿಚಂದ್ರಚಾಮರಚಾರವೇ ತ್ರಯಿಲೋ–
2. ಕ್ಯನಗರಾರಂಭ (೦) ಮೂಲಸ್ತಂಭಾಯ ಶಂಭವೇ ಶ್ರೀ ಜಯಾಭ್ಯುದಯ ಶಾ–
3. ಲಿವಾಹನ ಶಕವರುಷ 1498ಸಂದು ಒಂಭತ್ತನೆಯ ವರ್ತ್ತಮಾ–
4. ನದ ಪರಾಭವಸಂವತ್ಸರದೆ ಕಾರ್ತಿಕ ಶು 15ಲು ಶ್ರೀಮನ್ಮ ಹಾರಾಜಾ–
5. ಧಿರಾಜ ಪರಮೇಶ್ವರ ಶ್ರೀ ವೀರಪ್ರತಾಪ ಶ್ರೀ ವೀರ ಸದಾಶಿವರಾಯ ಮಹಾ–
6. ರಾಯರೂ ವಿಜಯನಗರಿಯ ಸಿಂಹಾಸನದಲೂ ಚಿತ್ತಯಿಸಿ ದುಷ್ಟನಿಗ್ರಹ–
7. ಶಿಷ್ಟಪ್ರತಿಪಾ(ಲ)ನೆಯಾಗಿ ಸಕಲ ಧರ್ಮವರ್ಣಾಶ್ರಮಂಗಳನು ಪ್ರತಿಪಾಲಿಸಿ
8. ಸುಖಸಂಕಥಾವಿನೋದದಿಂದ ರಾಜ್ಯವನು ಪ್ರತಿಪಾಲಿಸುತ್ತಿಹ ಕಾಲದಲು ಶ್ರೀ
9. ಸದಾಶಿವರಾಯರು ಬಾರಕೂರ ರಾಜ್ಯವನ್ನು ವೆಂ(ಕ)ಟಾದ್ರಿ ರಾಜಮಹಾ–
10. ರಾಯ ಅರಸುಗಳಿಗೆ ಪಾಲಿಸಿ ಆ ವೆಂಕಟಾದ್ರಿರಾಜರು ಬಾರಕೂರ ರಾಜ್ಯವ–
11. ನು ಅಚಪವೊಡೆಯರಿಗೆ ಪಾಲಿಸಿ ಆ ಅಚ್ಚಪ್ಪವೊಡೆಯರು ಶ್ರೀ ಸದಾಶಿವ–
12. ರಾಯಮಹಾರಾಯರಿಗೆ ಶತ್ರುಕ್ಷಯ ಮಿತ್ರೋರ್ಜಿತ ಆಯುರಾರೋಗ್ಯ–
13. ಆಯಿಶ್ವರಿಯಾಭಿವೃದ್ಧಿಯಾಗಬೇಕೆಂದು ರಾಮರಾಜವೆಂಕಟಾದ್ರಿ–
14. ರಾಜ ಮಹಾಅರಸುಗಳಿಂಗೆ ಪು(೦)ಣ್ಯವಾಗಬೇಕೆಂದು ಕುಡುಕೂರ ಕೋಟೀ–
15. ಶ್ವರದೇವರಿಗೆ ಕಾರ್ತಿಕಮಾಸ ದಿನ 30ಕೆ ಪಂಚಾಮ್ರುತಾಭಿಷೇಕ
16. ಧನೆ ನೈವೇದ್ಯ ಫಲಪೂಜೆ ಉ್ರಂದಾವನಪೂಜೆಗಳನೂ ಸಾಂಗವಾಗಿ ನಡೆಸುವ
17. ಧರ್ಮಕ್ಕೆ ಕೋ(ಟೀ)ಶ್ವರದೆ ಗ್ರಾಮದ ಹುದುರಹಳ್ಳಿಯ ಉರಲು ಅ(೦)ಣ್ಣ ಹತ್ತಾರರ

18. ಹದಿಯಲು ಗ 10 ಬೆಂಗರೆಭಟರ ಹದಿಯಲು ಗ 4 ॥ ಠಕ್ಕುರರ
19. ಹದಿಯಲು ಗ 14 ಬಿಳಿಯ ಕೇಶಣ ಹೆಬಾರನ ಹದಿಯಲು ಗ 10ಧ
20. ಸ್ಯರ ಹದಿಯಲು ಗ11॥ ಅಂತುಗ ಅಕ್ಷರದಲು ಆಯಿವತು
21. ವರಹನನೂ ಅಚ್ಚಪ್ಪವೊಡೆಯರೂ ಶ್ರೀ ಕೋಟೇಶ್ವರದೇವರಿಗೆ ಬರಸಿ ಕೊ–
22. ಟ್ಟ ಧರ್ಮಶಸನ ಬಾರಕೂರ ಕರಣಿಕ ತಿ(ಂ) ಮ್ಮರಸರ ಬರಹ ಅಚ್ಚಪ್ಪ–
23. ವೊಡೆಯರ ಬರಹ ಮತಂ ವಿರೋಧಿಕೃತಸಂವತ್ಸರದೆ ಪಯಿಶಖ ಶು–
24. ದೆ ಲು ರಾಮರಾಜವೆಂಕಟಾದ್ರಿರಜಗಳ ನಿರುಪದಿಂದೆ ಬರಕೂ–
25. ರ ರಾಜ್ಯವನಾಳುವ ಯೆಕದಳಖನವೊಡೆಯರು ಸದಾಶಿವಮ–
26. ಹಾರಾಯರಿಗೆ ಅಯಿಶ್ಯರಿಯ ಉದ್ಧಿ ಆಗಬೇಕೆಂದು ಕೋಟೇಶ್ವರ–
27. ದೇವರಿಗೆ ಕೋಟೇಶ್ವರ ದೇವರ ಗ್ರಾಮದೊಳಗಣ ಹುದೆರುಹಳಿಯ ಗ್ರಾ–
28. ಮೊದಲೂ ಗ 33 ವರಹನು ಕುಳವ ಕಡಿದು ಧಾರೆಯೆನೆರೆದು ಬರೆಸಿ
29. ಕೊಟ್ಟ ಧರ್ಮಶಾಸನದ ಕ್ರಮವೆಂತೆಂದರೆ ಕೋಟೇಶ್ವರದೇವರ ತುಡಿಯ–
30. ಹಬ್ಬದಲೂ ತುಳುರಾಜ್ಯ ಕುಡಿದಲ್ಲಿ ತ(ಂ)ಮ್ಮೊಳಗೆ ತಾಉ ಕಡಿದಾಡಿ
31. ಬ್ರಾಹ್ಣರು ಶೂದ್ರರ ಹೆಣಗಳು ದೇವಸ್ಥಾನದೊಳಗೆ ಬಿದು ಗೋಹತ್ಯ–
32. ವಾಗಿ ದೇವಸ್ಥಾನದೆ ಬಾಗಿಲು ಕಟ್ಟ ನಯಿವೇದ್ಯ ನಂದಾದೀಪ್ತಿ ಉಳಿದು ಧನ್ಯ
33. ರು ಉಪವಾಸದು ಆರು ತಿಂಗಳು ಪರಿಯಂತರ ಹಾಳಾಗಿಯಿರ–
34. ಲಾಗಿ ಆ ದೇವರ ಮಯಿಭೋಗಲು ನಡೆಯದೆ ಪ್ರಾಯಶ್ಚಿತಕೆ ನಡಸು–
35. ವದಕ್ಕಾಗಿ ರಾಮರಾಜವೆಂಕಟಾದ್ರಿ ಅರಸುಗಳಿಗೆ ಧರ್ಮವಾಗ–
36. ಬೇಕೆಂದು ಯೆಕಧಾಳಖನವೊಡೆಯರು ಕೋಟೇಶ್ವರದೇವ–
37. ರಿಗೆ ಧರೆಯೆನೆರದು ಕೂಟದು ಹುದುರುಹಳ್ಳಿಯಲಿ ಗ 33 ವರಹ–
38. ಗೆ ವಿವರ ಅಂಣಹತ್ತಾರನ ಹದಿಯಲು ಗ 10 ಬಿಳಿಯ ನಾರಣಹೆ–
39. ಬಾರ ಹದಿ ಗ 7 ಶಂಕ (ರ) ಲಿಂಗಸೆಟ್ಟಿಯೆ ಹದಿ ಗ 5 ಬೆಂಗರೆಭಟ್ಟನ
40. ಹದಿಗ 4 ಧನ್ಯರ ಹದಿ ಗ 2 ಚಾತುಮ್ಮಧ್ಯಸ್ತ ಹದಿ ಗ 7 ಅಂತು ಗ 35 ವರಹ–
41. ನನು ಯೆಕಧಾರಖಾನವೊಡೆಯರು ಅಚಂದ್ರಾರ್ಕಾಸ್ತಾಯಿಯಾಗಿ ನಡೆವತಿ–
42. ಬದು ಬಹಿರಿಯೆಂದು ಯೆಕದಾರಖಾನವೊಡೆಯರೂ ಕೋಟೇಶ್ವರದೇವರಿಗೆ

ಮೊದಲನೆಯದು 1419ರ ಮಂಗಳೂರು ಕೋಡಿಯಾಲಬೈಲಿನ ಶಾಸನ (*South Indian Inscriptions,* Volume III, No. 182/AR, No. 22 of 1901). ಈ ಶಾಸನದ ಪ್ರಕಾರ 1419ರ ಸಮಯದಲ್ಲಿ ವಿಜಯನಗರ ಸಾಮ್ರಾಜ್ಯಕ್ಕೆ ಒಳಪಟ್ಟ ಮಂಗಳೂರು ರಾಜ್ಯದಲ್ಲಿ, ಆಳರಸನಾದ ದೇವರಾಯ ಮಹಾರಾಯ ಬಯಿಚದಂಣಾಯಕ ಒಡೆಯನ ನಿರೂಪದಿಂದ ತಿಮ್ಮಣ್ಣ ಒಡೆಯನ ರಾಜ್ಯಪಾಲನಾಗಿ ಕಾರ್ಯನಿರ್ವಹಿಸುತ್ತಿದ್ದನೆಂದು ತಿಳಿಸುತ್ತದೆ. ಈ ಸಂದರ್ಭದಲ್ಲಿ ಮಂಗಳೂರು ರಾಜ್ಯದ ವ್ಯಾಪಾರ ಚಟುವಟಿಕೆಗಳನ್ನು ಮುಸಲ್ಮಾನ ವರ್ತಕರ ಸಂಘಟನೆ ನಖರ ಹಂಜಮಾನ ನೋಡಿಕೊಳ್ಳುತ್ತಿತ್ತು. ಆದರೆ, ರಾಜ್ಯಪಾಲ ತಿಮ್ಮಣ್ಣ ಒಡೆಯ ರಾಜ ಪ್ರತಿನಿಧಿಯಾಗಿ ಕರ್ತವ್ಯ ನಿರ್ವಹಿಸುವಲ್ಲಿ ವಿಫಲನಾಗುತ್ತಾನೆ. ಯಾವುದೇ ಕಾರಣವಿಲ್ಲದೆ ಮಂಗಳೂರಿನ ನಖರ ಹಂಜಮಾನದವ ರೊಂದಿಗೆ ರಾಜ್ಯಪಾಲನು ಅಶಿಸ್ತಿನಿಂದ ವರ್ತಿಸಿದನು. ಪೂರ್ವ ಮರ್ಯಾದೆಗಳನ್ನು

ಶಿಸ್ತಿನಿಂದ ಕಾಪಾಡಿಕೊಂಡು ಬಂದಿದ್ದು, ನಗರದ ನಖರ ಹಂಜಮಾನದವರ ಮೇಲೆ ತಿಮ್ಮಣ್ಣ ಒಡೆಯನು ಯಾವುದೋ ಕಾರಣಕ್ಕಾಗಿ ತನ್ನ ಸೇನೆಯ ಸಹಯೋಗದೊಂದಿಗೆ ದಾಳಿ ನಡೆಸಿದನು. ಈ ದಾಳಿಯ ಪರಿಣಾಮದಿಂದ ಹಂಜಮಾನದವರ ಅಧಿಕಾರ ವ್ಯಾಪ್ತಿಯಲ್ಲಿ ಬರುವ ಕೆಲವು ಗ್ರಾಮಗಳು ನಾಶವಾದವು. (ಸುಟ್ಟು ಹಾಕಲಾಯಿತು). ಶಾಸನವೇ ಹೇಳುವಂತೆ ನಾಲ್ಕರಿಂದ ಐದು ಪಳ್ಳಿಗಳು (ಮಸೀದಿಗಳು) ಹಾನಿಗೀಡಾಗಿದವು. ಈ ಘಟನೆಯ ವಿವರಗಳು ಆಗ ಚಕ್ರವರ್ತಿಯಾಗಿದ್ದ ಒಂದನೇ ದೇವರಾಯ ಬಯಿಚ ದಣ್ಣಾಯಕ ಮತ್ತು ಸಾಮ್ರಾಜ್ಯದ ಇತರ ಹಿರಿಯ ಅಧಿಕಾರಿಗಳ ಗಮನಕ್ಕೆ ಬಂದಿತು. ಘಟನೆಯ ಪ್ರಬಲತೆಯನ್ನು ಅರಿತ ರಾಜ, ನಖರ ಹಂಜಮಾನದವರ ವಿರುದ್ಧ ಕೈಗೊಂಡಿದ್ದ ಎಲ್ಲಾ ಕಾರ್ಯಗಳನ್ನು ಆ ಕೂಡಲೇ ನಿಲ್ಲಿಸಿ, ಅವರ ಒಕ್ಕಲುತನವನ್ನು ಅವರಿಗೆ ಒಪ್ಪಿಸತಕ್ಕದ್ದೆಂದೂ, ಅವರಿಗೆ 'ಮಾನ್ಯ ಪರಿಹಾರ' ಕೊಡಬೇಕೆಂದೂ, ರಾಜ್ಯಪಾಲ (ತಿಮ್ಮಣ್ಣ ಒಡೆಯ)ನಿಗೆ ಕಟುವಾಗಿ ಆಜ್ಞೆ ನೀಡಲಾಯಿತು.

ಜೊತೆಗೆ ತನ್ನ ಪ್ರಜೆಗಳಾದ ನಖರ ಹಂಜನಮಾನದವರಿಗೆ ಆದ ತೊಂದರೆಯ ಬಗ್ಗೆ ವಿಚಾರಣೆ ನಡೆಸಲು ದೇವರಾಯನು ತನ್ನ ಪ್ರಧಾನಿಗಳ ಸಹಕಾರದಿಂದ ಒಂದು ಸಮಿತಿ ರಚಿಸಿದನು. ಈ ಸಮಿತಿಗೆ ಸ್ಥಳೀಯ ಅರಸು ಮನೆತನದವರಾದ ಬಂಗರು, ಚೌಟರು, ಅಜಿಲರು ಮೊದಲಾದ 'ಸಮಸ್ತ ಕಟ್ಟಳೆ'ಯವರು ಸದಸ್ಯರಾಗಿದ್ದರು. ಇವರುಗಳನ್ನೊಳಗೊಂಡ ಸಮಿತಿ ತಿಮ್ಮಣ್ಣ ಒಡೆಯನು ಎಸಗಿದ ಲೋಪವನ್ನು ವಿಚಾರಿಸಿ, ಅದು ತಪ್ಪೆಂದು ಪರಿಗಣಿಸಿ ಸಮಸ್ತ ಕಟ್ಟಳೆಯವರ ಸಮಕ್ಷಮದಲ್ಲಿ ಅನ್ಯಾಯಕ್ಕೊಳಗಾದ ನಖರ ಹಂಜಮಾನದವರನ್ನು ಕರೆಸಿ ಸಮಾನ ಪರಿಹಾರ ನೀಡಲಾಗುವುದೆಂದು ರಾಜನ ಪರವಾಗಿ ಒಂದು ಆಜ್ಞೆ ಹೊರಡಿಸಲಾಯಿತು. ಅದರಂತೆ ನಾಶವಾದ ಜಮಾಅತ್ ಪಳ್ಳಿ (ಮಸೀದಿ)ಯ ದುರಸ್ತಿಗೆ ಮತ್ತು ಹಾನಿಗೀಡಾದ ಗ್ರಾಮಗಳ ಅಭಿವೃದ್ಧಿಗೆ ಫಲವತ್ತಾದ ಭೂಮಿಯನ್ನು ದಾನವಾಗಿ ತಿಮ್ಮಣ್ಣ ಒಡೆಯನು ನೀಡಿದನು. ಇದಲ್ಲದೆ, ಹೀಗೆ ಮಸೀದಿಗೆ ಬಿಟ್ಟು ಕೊಟ್ಟ ಭೂಮಿಯನ್ನು (ಇನ್ನು ಮುಂದೆ) ನಾಶ ಮಾಡಿದರೆ ಅವರು ಕಾಶಿಯಲ್ಲಿ ಒಂದು ಸಾವಿರ ದನಗಳನ್ನು ಕೊಂದಷ್ಟು ಪಾಪವನ್ನು ಅನುಭವಿಸುವರು ಎಂದೂ ಶಾಸನದಲ್ಲಿ ಬರೆಸಲಾಗಿದೆ.

ಎರಡನೆ ಶಾಸನ (*South Indian Inscriptions*, Volume IX, Part II No. 621, PP. 626-27). ವಿಜಯನಗರ ಸಾಮ್ರಾಜ್ಯವನ್ನು 1546 ಮತ್ತು 1551ರ ನಡುವೆ ಸದಾಶಿವರಾಯನು ರಾಜನಾಗಿರುವ ಸಂದರ್ಭದಲ್ಲಿ, ಅವನ ಸಾಮ್ರಾಜ್ಯದ ಅವಿಭಾಜ್ಯ ಅಂಗವಾಗಿರುವ ಬಾರಕೂರು ರಾಜ್ಯದಲ್ಲಿ ರಾಮರಾಜ ವೆಂಕಟಾದ್ರಿ ರಾಜನ ನಿರೂಪದಿಂದ ಏಕದಳಖಾನ್ ಒಡೆಯನು ರಾಜ್ಯಪಾಲನಾಗಿದ್ದನು ಎಂದು ಉಲ್ಲೇಖಿಸುತ್ತದೆ. ಬಹುಶಃ ಲಭ್ಯವಿರುವ ಶಾಸನಗಳಲ್ಲಿ ಉಲ್ಲೇಖವಾಗಿರುವ ಒಬ್ಬನೇ ಒಬ್ಬ ಮುಸ್ಲಿಂ ರಾಜ್ಯಪಾಲ (ವಿಜಯನಗರ ಕಾಲದಲ್ಲಿ) ಈ ಏಕದಳಖಾನ್. ಸಂಪ್ರದಾಯದ ಪ್ರಕಾರ ವಿಜಯನಗರ ಸಾಮ್ರಾಟರ ಪ್ರತಿನಿಧಿಯಾಗಿ ಬಾರಕೂರು–ಮಂಗಳೂರು ರಾಜ್ಯಗಳ ಆಡಳಿತ ನೋಡಿಕೊಂಡ ಎಲ್ಲಾ ರಾಜ್ಯಪಾಲರಿಗೂ 'ಒಡೆಯ' ಎಂಬ ಪದನಾಮದಿಂದ ಗುರುತಿಸಲಾಗುತ್ತಿತ್ತು. ಸಂಪ್ರದಾಯಕ್ಕೆ ಯಾವುದೇ ಚ್ಯುತಿಬಾರದಂತೆ ನೋಡಿಕೊಳ್ಳಲು ಈ ಮುಸ್ಲಿಂ ರಾಜ್ಯಪಾಲ ಏಕದಳಖಾನ್ ಒಡೆಯ ಎಂದೇ ಕರೆಯಲಾಗುತ್ತಿದ್ದಿರಬೇಕು. ಐತಿಹಾಸಿಕವಾಗಿ, ಈತನ

ಕಾಲದಲ್ಲಿ ನಡೆದ ಅನೇಕ ಕಾರ್ಯಗಳಲ್ಲಿ ಕೋಟೇಶ್ವರ ಕೋಟಿಲಿಂಗೇಶ್ವರ ದೇವಾಲಯದಲ್ಲಿ ನಡೆದ ಘಟನೆಯು ಒಂದು. ಈ ಘಟನೆಗೆ ಸಂಬಂಧಿಸಿದಂತೆ ಏಕದಳಖಾನ್ ಒಡೆಯ ಒಬ್ಬ ಅನ್ಯ ಕೋಮೊಂದಕ್ಕೆ ಸೇರಿದವನಾಗಿದ್ದರೂ ಕೂಡ, ಅವನ ಕಾಲದಲ್ಲಿ ಹಿಂದೂಗಳ ನಡುವೆಯೇ ನಡೆದ ಧಾರ್ಮಿಕ ಸಂಘರ್ಷವನ್ನು ಸರಿಪಡಿಸಲು ಇವನು ಪಾಲಿಸಿದ ಧೋರಣೆ ಅನನ್ಯವಾದುದು.

ಘಟನೆ ಹೀಗಿದೆ. ಕೋಟೇಶ್ವರ ಗ್ರಾಮದಲ್ಲಿ ವರ್ಷಂಪ್ರತಿಯಂತೆ ಕೋಟಿಲಿಂಗೇಶ್ವರ ದೇವರಿಗೆ ನಡೆಯುವ ತುಡಿಯ (ಕುಡಿ) ಹಬ್ಬವೆಂಬ ವಿಶೇಷ ಸಂದರ್ಭದಲ್ಲಿ, ಇಡೀ ತುಳು ರಾಜ್ಯವೇ ಒಂದಾಗಿ ನೆರೆದಿತ್ತು. ಆಗ ಯಾವುದೋ ಕಾರಣಕ್ಕಾಗಿ ನೆರೆದ ಭಕ್ತಾದಿಗಳ ನಡುವೆ ನಡೆದ ಧಾರ್ಮಿಕ ಘರ್ಷಣೆಯಲ್ಲಿ ಬ್ರಾಹ್ಮಣರು ಮತ್ತು ಶೂದ್ರರು ತಮ್ಮ ತಮ್ಮೊಳಗೆ ಕಾದಾಡಿದ ಪರಿಣಾಮವಾಗಿ ದೇವಾಲಯದೊಳಗೆ ಅನೇಕ ಹೆಣಗಳು ಬಿದ್ದು, ಗೋಹತ್ಯೆಯು ಆಗಿತ್ತು. ಈ ಕಾರಣದಿಂದ ದೇವಾಲಯ ಅಪವಿತ್ರಗೊಂಡು, ದೇಗುಲದ ಬಾಗಿಲು ಮುಚ್ಚಿ, ಯಾವುದೇ ಕಟ್ಟು ಕಟ್ಟಳೆಗಳ ಆಚರಣೆ ಮತ್ತು ಪೂಜೆ ಪುರಸ್ಕಾರಗಳು, ಸುಮಾರು ಆರು ತಿಂಗಳ ಕಾಲ ಸ್ಥಗಿತಗೊಂಡಿದ್ದವು. ಇಂತಹ ದುರ್ಘಟನೆಯಿಂದಾಗಿ ಅಲ್ಲಿಯ ದೇವರಿಗೆ ಅಪಚಾರವಾದುದಲ್ಲದೆ, ಸಾಮ್ರಾಜ್ಯವನ್ನಾಳುವ ಪ್ರಭು ಮತ್ತು ಅವನ ಯಶಸ್ಸಿಗೆ ದಿನಂಪ್ರತಿ ಶ್ರಮಿಸುವ ಅಧಿಕಾರಿ ವರ್ಗಕ್ಕೆ ಅನ್ಯಾಯವಾಗಬಾರದೆಂದು ರಾಜ್ಯಪಾಲ ಏಕದಳಖಾನ್ ಒಡೆಯನು ಕೋಟೇಶ್ವರ ಕೋಟೀಲಿಂಗೇಶ್ವರ ದೇಗುಲವನ್ನು ಶುದ್ಧೀಕರಿಸಿ, ಪವಿತ್ರ ಗೊಳಿಸಿ, ಪುನಃ ಪೂಜೆ ಪುರಸ್ಕಾರಗಳು ಅಲ್ಲಿನ ಕಟ್ಟು ಕಟ್ಟಳೆಯಂತೆ ಆರಂಭಿಸಲು ಸರಕಾರದ ವತಿಯಿಂದ ಕ್ರಮ ತೆಗೆದುಕೊಂಡನು. ಅದಕ್ಕೆ ತಗಲುವ ಖರ್ಚನ್ನು ಸರಕಾರದ ಖಜಾನೆಯಿಂದಲೇ ಭರಿಸಲಾಯಿತು. ಜೊತೆಗೆ ದೇವರಿಗೆ ಹುದುರುಹಳ್ಳಿ (ಹೊದ್ರಾಳಿ)ಯಲ್ಲಿ 35 ವರಹದ ಭೂಮಿಯನ್ನು ದಾನವಾಗಿ ಬಿಟ್ಟುಕೊಟ್ಟನು. ಅಲ್ಲದೆ, ಆ ಸಂದರ್ಭದಲ್ಲಿ ಪೂಜಾಕಾರ್ಯಗಳು ಸುಸೂತ್ರವಾಗಿ ಅಡೆತಡೆಗಳಿಲ್ಲದೆ ನೆರವೇರಲು ಸರಕಾರದ ವತಿಯಿಂದ ವ್ಯವಸ್ಥೆ ಮಾಡಿದನು. ಈ ವಿವರಗಳನ್ನು ಶಾಸನದಲ್ಲಿ ಬರೆಸಿರುವವನು ಬಾರಕೂರ ಕರಣಿಕ ಕೃಷ್ಣಯ್ಯ ಎಂದೂ, ಸಾಕ್ಷಿಗಳಾಗಿ ಕೋಟೇಶ್ವರ ಗ್ರಾಮದ ಅಣ್ಣೀ ಹತ್ವಾರ, ಪಡುಮನೆ ಹೆಬ್ಬಾರ, ಪಡುಮನೆ ಹತ್ವಾರ, ಮೂರು ಮನೆಯ ಹೆಬ್ಬಾರ ಮತ್ತು ರಾಜ್ಯಪಾಲ ಏಕದಳಖಾನ್ ಒಡೆಯ ಇದ್ದರು ಎಂದು ಶಾಸನ ತಿಳಿಸುತ್ತದೆ.

ಮೇಲೆ ಚರ್ಚಿಸಿದ ಎರಡು ಘಟನೆಗಳಲ್ಲಿ ಪ್ರಭುತ್ವ ಮತ್ತು ಜನ ಸಾಮಾನ್ಯರ ನಡುವೆ ಬೇರೂರಿದ ಸಂಬಂಧವನ್ನು ಹಾಗೂ ಸಾಮ್ರಾಜ್ಯದೊಳಗೆ ವಿವಿಧ ಸಮುದಾಯಕ್ಕೆ/ ಕೋಮಿಗೆ ಸೇರಿದ ಪ್ರಜೆಗಳ ನಡುವೆ ಸಾಮರಸ್ಯ/ಸೌಹಾರ್ದವನ್ನು ಸ್ಥಾಪಿಸಲು ರಾಜ/ ರಾಜಪ್ರತಿನಿಧಿಗಳು ಪಾಲಿಸಿದ ಮಾರ್ಗಗಳನ್ನು ತಿಳಿಯಬಹುದು. ಈ ಎರಡು ಘಟನೆಗಳನ್ನು ಚರ್ಚಿಸಿ, ಸಂಬಂಧಿಸಿದ ದಾಖಲೆಗಳನ್ನು ನೀಡುವ ಅನಿವಾರ್ಯತೆಗೆ ಒಂದು ಮುಖ್ಯ ಕಾರಣವೂ ಇದೆ. ಭಾರತ ಇತಿಹಾಸದ ಮರುನಿರೂಪಣೆಯ ಕಾರ್ಯ ಸ್ವಾತಂತ್ರ್ಯೋತ್ತರ ಕಾಲದಲ್ಲಿ ವಿವಿಧ ಆಯಾಮಗಳನ್ನು ತೆಗೆದುಕೊಂಡಿದೆ. ಅನೇಕ ವಿಶ್ವವಿಖ್ಯಾತ ವಿದ್ವಾಂಸರು, ಇತಿಹಾಸಕಾರರು, ಸಮಾಜಶಾಸ್ತ್ರಜ್ಞರು, ಚಿಂತಕರು ಇದರಲ್ಲಿ ಸಕ್ರಿಯವಾಗಿ ಪಾಲ್ಗೊಂಡು ನಮ್ಮ ದೇಶದ ಇತಿಹಾಸವನ್ನು ಸಮರ್ಪಕವಾಗಿ ಪುನರ್ರಚಿಸಿದ್ದಾರೆ ಮತ್ತು ಅದನ್ನು ಮುಂದುವರಿಸಿದ್ದಾರೆ. ಡಿ.ಡಿ. ಕೋಸಾಂಬಿ, ಆರ್. ಎಸ್. ಶರ್ಮ, ರೋಮಿಲಾ ಥಾಪರ್,

ಬಿಪನ್ ಚಂದ್ರ, ಇರ್ಫಾನ್ ಹಬೀಬ್, ಹರ್ಬನ್ಸ್ ಮುಖಿಯಾ, ಡಿ.ಎನ್. ಜಹ್ಹಾ, ಎಂ.ಜಿ.ಎಸ್. ನಾರಾಯಣನ್, ಚಂಪಕಲಕ್ಷ್ಮಿ, ರಾಜನ್ ಗುರುಕಲ್, ಕೇಶವನ್ ವೆಳುತ್ತಾಟ್ ಮತ್ತು ಇತರ ಅನೇಕ ಇತಿಹಾಸಕಾರರು ಈ ಪ್ರಕ್ರಿಯೆಯಲ್ಲಿ ತೊಡಗಿಸಿಕೊಂಡವರು. ಇವರುಗಳು ಬೇರೆ ಬೇರೆ ಪ್ರದೇಶಗಳಿಗೆ ಸಂಬಂಧಿಸಿದಂತೆ, ಬೇರೆ ಬೇರೆ ರಾಜವಂಶಗಳ ಕುರಿತಾದ ವಿಶೇಷ ಸಂಶೋಧನೆಯಲ್ಲಿ ಭಾಗಿಯಾಗಿದವರು. ಬಹುಶ: ಇವರು ಆರಂಭಿಸಿದ ಮಾದರಿಗಳು, ಇತಿಹಾಸರಚನಾಶಾಸ್ತ್ರವು ವಿದೇಶಿ ಸಾಮ್ರಾಜ್ಯಶಾಹಿ ಬರಹಗಾರರು ಭಾರತದ ಇತಿಹಾಸ ರಚನೆಯಲ್ಲಿ ಪಾಲಿಸಿದ ಮಾದರಿಗಳಿಗೆ ವಿರುದ್ಧವಾಗಿರುವಂತಹದ್ದಾಗಿ ಮತ್ತು ಪರ್ಯಾಯ ಮಾರ್ಗವಾಗಿ ಬೆಳೆಯಿತು.

ಹೀಗೆ ರಚಿಸಲ್ಪಟ್ಟಿರುವುದು ದಕ್ಷಿಣ ಭಾರತದಲ್ಲಿ ವಸಾಹತುಪೂರ್ವ ಸಮಯದಲ್ಲಿ ಆಳಿದ ವಿಜಯನಗರ ಸಾಮ್ರಾಜ್ಯದ ಇತಿಹಾಸದ ಪುನರ್ರಚನೆ. ಒಂದು ವರ್ಗದ ಇತಿಹಾಸಕಾರರು ಅಂದರೆ ರಾಬರ್ಟ್ ಸಿವೆಲ್ (ಎಂಡ್ ಕಂಪೆನಿ) ನಂತಹ ಸಾಮ್ರಾಜ್ಯಶಾಹಿ ಇತಿಹಾಸಕಾರರು ಮತ್ತು ರಾಷ್ಟ್ರವಾದಿ ಇತಿಹಾಸಕಾರರಿಗೆ ವಿಜಯನಗರ ಸಾಮ್ರಾಜ್ಯದ ಸ್ಥಾಪನೆಯು ಒಂದು ಪ್ರಮುಖ ವ್ಯವಸ್ಥೆಯನ್ನು ಪ್ರತಿನಿಧಿಸುತ್ತದೆ. ಅವರ ಪ್ರಕಾರ ಈ ರಾಜಕೀಯ ವ್ಯವಸ್ಥೆಯು ಉತ್ತರ ಭಾರತದಿಂದ ಆರಂಭವಾದ ಮುಸಲ್ಮಾನರ ಆಕ್ರಮಣದಿಂದ ದಕ್ಷಿಣದ ಭಾಗವನ್ನು ರಕ್ಷಿಸಲು ಉಗಮವಾಗಿರುವುದು ಎಂದು ಹೇಳಲಾಗಿದೆ. ಅಂದರೆ, ಹಿಂದೂ ಸಂಸ್ಕೃತಿ ಮತ್ತು ಆ ಸಂಸ್ಕೃತಿ ವಿಶಾಲವಾಗಿ ಬೆಳೆದು ಬಂದ ಕೇಂದ್ರವಾಗಿ ಮಾರ್ಪಾಟಾಗಿರುವ ದಕ್ಷಿಣವನ್ನು ರಕ್ಷಿಸುವ ಜವಾಬ್ದಾರಿಯೊಂದಿಗೆ ವಿಜಯನಗರ ಸಾಮ್ರಾಜ್ಯದ ಸ್ಥಾಪನೆ ಆಗಿತ್ತು ಎಂದು ಬಣ್ಣಿಸಲಾಗಿತ್ತು. ಇಲ್ಲಿ ಸಮಾಜವನ್ನು ವಿಭಜಿಸುವ ಪ್ರಯತ್ನ ಮಾಡಿರುವುದು ಸತ್ಯ ಸಂಗತಿ. ಮತ್ತು ಹಿಂದೂ ಸಂಸ್ಕೃತಿ ದುರ್ಬಲವಾಗುವುದಿದ್ದರೆ ಅದಕ್ಕೆ ಒಂದು ಕೋಮಿನ ದಾಳಿಯೇ ಕಾರಣ ಎಂದು ಹೇಳುವ ಉದ್ದೇಶ ಅಡಗಿದೆ. ಹೀಗೆ ರಚಿಸಲ್ಪಟ್ಟ ಇತಿಹಾಸದಲ್ಲಿ ಹಿಂದೂಗಳ ಆಳ್ವಿಕೆಯ ಕಾಲದಲ್ಲಿ/ಮುಸ್ಲಿಮರ ಆಳ್ವಿಕೆಯ ಕಾಲದಲ್ಲಿ ಸಹಬಾಳ್ವೆ, ಧರ್ಮ ಸಾಮರಸ್ಯವಿಲ್ಲವೆಂದೆ ಹೇಳುವ ಪ್ರಯತ್ನ ಇದೆ. ಜೊತೆಗೆ ರಾಷ್ಟ್ರ ಕಲ್ಪನೆಯನ್ನು ಜಾತ್ಯಾತೀತ ಕಲ್ಪನೆಗಳನ್ನು ಇಂತಹ ಸಂದರ್ಭಗಳಲ್ಲಿ ಎತ್ತಿ ಹಿಡಿಯುವ ಕೆಲಸವು ನಡೆದಿದೆ. ಆದರೆ, ಇಂತಹ ಯಾವುದೇ ಕಲ್ಪನೆಗಳು ಆಧುನಿಕ ಕಲ್ಪನೆಗಳಾಗಿದ್ದು, ಮಧ್ಯಯುಗದಲ್ಲಿ ಅನುಷ್ಠಾನದಲ್ಲಿದ್ದವು ಎಂದು ಹೇಳಲಾಗದು. ಈ ಯಾವುದೇ ಕಲ್ಪನೆಗಳು ಮಧ್ಯಯುಗದ ರಾಜರುಗಳ ಯೋಜನೆಗಳಲ್ಲಿ ಕಂಡು ಬರುವುದಿಲ್ಲ. ಜೊತೆಗೆ ಅವರುಗಳನ್ನು ಕೇಂದ್ರಿಕರಿಸಿದ ಯಾವುದೇ ಚಟುವಟಿಕೆಗಳು ಒಂದು ಸಮುದಾಯದ ವಿರುದ್ಧ ಇನ್ನೊಂದು ಸಮುದಾಯ ಪರ್ಯಾಯ ವ್ಯವಸ್ಥೆ ನಿರ್ಮಿಸುವ ಪ್ರಯತ್ನಗಳಾಗಿರಲಿಲ್ಲ. ಅಲ್ಲಿ ಧರ್ಮದ ರಕ್ಷಣೆ, ಸಂಸ್ಕೃತಿ ರಕ್ಷಣೆ ಪ್ರಶ್ನೆಗಳು ಪ್ರವೇಶ ಮಾಡುವುದೇ ಇಲ್ಲ. ಯಾರು ಯಾರ ಧರ್ಮವನ್ನು ಪ್ರತಿನಿಧಿಸಿದ್ದರು ಎಂಬುದರ ಬಗ್ಗೆ, ಆ ಕಾಲದ ರಾಜರಿಗೆ ಅರಿವು ನಾವೀಗ ಜಾತ್ಯಾತೀತ ನೆಲೆಯಲ್ಲಿ ಅರ್ಥೈಸಿಕೊಂಡಂತೆ ಖಂಡಿತ ಇರಲಿಲ್ಲ. ಬದಲಾಗಿ, ಅದೊಂದು ವಿಶಿಷ್ಟವಾದ ಧರ್ಮ. ಆ ಧರ್ಮಕ್ಕೆ ನಾವು ಆಧುನಿಕ ಯುಗದಲ್ಲಿ ಒತ್ತು ಕೊಡುವ ರಿಲೀಜನ್ (Religion) ಯಾವುದೇ ಸಂಬಂಧವನ್ನು ಬೆಳೆಸಿಕೊಳ್ಳುವುದಿಲ್ಲ. ಬದಲಾಗಿ, ಅದೊಂದು ಮಾನವ ಧರ್ಮ. ಒಂದು ಸಾಮ್ರಾಜ್ಯದೊಳಗೆ ಎಷ್ಟು ಸಮುದಾಯದವರಿದ್ದರೂ, ಅವರುಗಳು ಪ್ರಭುಗೆ ಪ್ರಜೆಗಳಾಗಿರುತ್ತಿದ್ದರು. ರಾಜನು/ಪ್ರಭುವೇ ಒಂದು ಹೆಜ್ಜೆ ಮುಂದೆ ಹೋಗಿ

ಇವರು (ಒಂದು ವರ್ಗದ ಪ್ರಜೆಗಳು) ನನ್ನ ವಂಶದವರು, ಕೋಮಿನವರು, ಸಮುದಾಯ ದವರು ಎಂದು ಎಣಿಸಿ ಆ ವರ್ಗಕ್ಕೆ ಹೆಚ್ಚು ಆದ್ಯತೆ ನೀಡುವುದು, ಇನ್ನೊಂದು ವರ್ಗದ ಪ್ರಜೆಗಳು ಅನ್ಯ ಧರ್ಮಕ್ಕೆ ಸೇರಿದವರು–ಅವರನ್ನು ನಿಕೃಷ್ಟವಾಗಿ ನೋಡುವ ಮಾದರಿಯನ್ನು ಯಾವ ರಾಜನು/ಪ್ರಭುವು ಪಾಲಿಸಿರಲಿಲ್ಲ. ಬದಲಾಗಿ, ತನ್ನ ಅಧಿಕಾರದ ವ್ಯಾಪ್ತಿಗೆ ಒಳಪಡುವ ಪ್ರಜೆಗಳು ಒಂದೇ ಮತ್ತು ಅವರ ಸರ್ವತೋಮುಖ ಅಭಿವೃದ್ಧಿಗೆ ಪ್ರಭುವಾಗಿ ಕಾರ್ಯನಿರ್ವಹಿಸುವುದು ತನ್ನ ಆದ್ಯ ಕರ್ತವ್ಯವೆಂದೇ ಆ ಕಾಲದ ರಾಜ ಭಾವಿಸಿದ್ದ. ಆ ಭಾವನೆ ಒಂದು ಧರ್ಮವಾಗಿ ಕಾರ್ಯರೂಪಕ್ಕೆ ಬಂದು ಜನ ಸಾಮಾನ್ಯರ ನಡುವೆ ಸಹಬಾಳ್ವೆ, ಸಾಮರಸ್ಯ, ಸಮೃದ್ಧವಾಗಿ ಬೆಳೆಯಲು ಕಾರಣವಾಯಿತು.

ಮಧ್ಯಯುಗ ತುಳುನಾಡಿನಲ್ಲಿ ನಡೆದ ಮೇಲಿನ ಎರಡು ಘಟನೆಗಳು ಇದಕ್ಕೆ ಜ್ವಲಂತ ಸಾಕ್ಷಿಗಳಾಗುತ್ತವೆ. ಕೊಡಿಯಾಲ್‌ಬೈಲ್‌ನಲ್ಲಿ ನಡೆದ ಘಟನೆಯಲ್ಲಿ ರಾಜ ಪ್ರತಿನಿಧಿಯೇ ಮುಂದೆ ಬಂದು ತೊಂದರೆಗೀಡಾದ ಪ್ರಜಾ ಸಮೂಹಕ್ಕೆ ಪರಿಹಾರ ನೀಡಿದ್ದಲ್ಲದೆ, ಅವರ ಮುಂದಿನ ಕ್ಷೇಮಾಭಿವೃದ್ಧಿ ತನ್ನ ಆದ್ಯ ಕರ್ತವ್ಯವೆಂದು ವ್ಯಕ್ತಪಡಿಸಿರುವುದು ಅನ್ಯಧರ್ಮಕ್ಕೆ ಸೇರಿದ ಪ್ರಭು. ಅದು ವಿಜಯನಗರದ ಸಾಮ್ರಾಟರು. ಒಂದು ವರ್ಗದ ಇತಿಹಾಸಕಾರರ ಪ್ರಕಾರ ಇವರು ಹಿಂದೂ ಧರ್ಮದ ರಕ್ಷಕರು ಮತ್ತು ಮುಸ್ಲಿಂರ ವಿರೋಧಿಗಳು. ನಾನು ಉಲ್ಲೇಖಿಸಿರುವ ಘಟನೆ ಇಂತಹ ಇತಿಹಾಸ ರಚನಾಶಾಸ್ತ್ರಕ್ಕೆ ವಿರೋಧವಾಗಿರುವುದು.

ಎರಡನೇ ಘಟನೆ ಕೋಟೇಶ್ವರ ದೇವಾಲಯದಲ್ಲಿ ಹಿಂದೂಗಳಾದ ಬ್ರಾಹ್ಮಣರು ಮತ್ತು ಶೂದ್ರರ ನಡುವೆ ನಡೆದ ಘರ್ಷಣೆ. ಇದಕ್ಕೆ ಪರಿಹಾರ ಕಂಡುಕೊಂಡವ ಇನ್ನೊಂದು ಧರ್ಮಕ್ಕೆ ಸೇರಿದ ರಾಜಪ್ರತಿನಿಧಿ. ಇಲ್ಲಿಯೂ ಈ ರಾಜ್ಯಪಾಲ ಏಕದಳಖಾನ್ ಒಡೆಯ ತನ್ನ ಸಮುದಾಯದೊಂದಿಗೆ ಗುರುತಿಸಿಕೊಳ್ಳಲಿಲ್ಲ. ಬದಲಾಗಿ, ಒಬ್ಬ ರಾಜಪ್ರತಿನಿಧಿಯಾಗಿ ತನ್ನ ಅಧಿಕಾರ ವ್ಯಾಪ್ತಿಗೆ ಒಳಪಡುವ ಪ್ರದೇಶದಲ್ಲಿ ಶಾಂತಿ ನೆಲೆಸಲು ಚಾಲ್ತಿಯಲ್ಲಿದ್ದ ಧರ್ಮದ ಪ್ರಕಾರ ಕ್ರಮ ಕೈಗೊಂಡನು. ಅದು ಅವನು ಪಾಲಿಸಿದ ರಾಜ ಧರ್ಮವೇ ಆಗಿದ್ದು, ಅವನಿಗೆ ಸರಿ ಎಂದು ಕಂಡಿತ್ತು. ಈ ಎರಡು ಘಟನೆಗಳು ಮತ್ತು ಆ ಘಟನೆಗಳ ಸಂದರ್ಭದಲ್ಲಿ ಅಧಿಕಾರದಲ್ಲಿದ್ದವರು ಸ್ಪಂದಿಸಿದ/ಪಾಲಿಸಿದ ಮಾರ್ಗಗಳು ಸಮಕಾಲೀನ ತುಳುನಾಡಿನಲ್ಲಿ ಬೆಳೆಸಬೇಕಾದ ಸಾಮರಸ್ಯ/ಸಹಬಾಳ್ವೆಗೆ ದಿಕ್ಸೂಚಿಗಳಾಗಬಾರದೇಕೆ? ಏಕೆಂದರೆ, ಆ ಕಾಲದಲ್ಲಿ ಯಾವುದೇ ಸಂಘರ್ಷಗಳು ನಡೆದರೆ ಜನ ಸಾಮಾನ್ಯರ ಬದುಕಿಗೆ ಧರ್ಮಿಷ್ಟನಾದ ರಾಜರು ಸೂಕ್ತ ಕ್ರಮ ಕೈಗೊಂಡಿದ್ದರು. ಯಾವುದೇ ಕಾರಣಕ್ಕೂ ಆ ಘಟನೆಗಳು ಯಾವುದೇ ತಿರುವು ಪಡೆದು ನೆಲೆಸಿರುವ ಶಾಂತಿಯನ್ನು ಕದಡಿಸಲಿಲ್ಲ. ಬದಲಾಗಿ ಸುಸಂಸ್ಕೃತ ಬದುಕನ್ನು ಮುಂದುವರಿಸಲು ಪರಿಹಾರ ಮಾರ್ಗಗಳನ್ನು ಅಧಿಕಾರದಲ್ಲಿರುವವರು ಕಂಡುಕೊಂಡರು ಮತ್ತು ಸಂಮೃದ್ಧ ಬದುಕಿನ ಪ್ರವಾಹ ಸಾಮಾನ್ಯರನ್ನು ಆವರಿಸಲು ಸಹಕಾರಿಯಾದವು. ಇಂತಹ ಪ್ರಯತ್ನಗಳು ಬಹುಶ: ಇಂದಿನ ಸಮಾಜಕ್ಕೆ ಅನಿವಾರ್ಯವಾಗಿಬೇಕಾಗಿವೆ.

ಜಿ.ಎಸ್. ಆಮೂರರ ಒಮ್ಮುಖ ಬೇಂದ್ರೆ ವಾಙ್ಮಯದಲ್ಲಿ ತತ್ವ ಮತ್ತು ಕಾವ್ಯ ಹಾಗೂ ಅನುವಾದ

ಎನ್.ಎಸ್. ಗುಂಡೂರ
ಸಹ ಪ್ರಾಧ್ಯಾಪಕರು, ಇಂಗ್ಲಿಶ್ ಅಧ್ಯಯನ ಹಾಗೂ ಸಂಶೋಧನ ವಿಭಾಗ
ತುಮಕೂರು ವಿಶ್ವವಿದ್ಯಾಲಯ, ತುಮಕುರು

ದ.ರಾ.ಬೇಂದ್ರೆ ಸಾಹಿತ್ಯ ಕುರಿತು ಅಧ್ಯಯನ ಮಾಡಿದ ವಿದ್ವಾಂಸರು ಹಲವರು, ಆದರೆ, ನಮ್ಮ ನಡುವೆ ಇರುವ 'ಬೇಂದ್ರೆ ಸ್ಕಾಲರ್' ಅಂದರೆ, ಪ್ರೊಫೆಸರ ಜಿ.ಎಸ್. ಆಮೂರರ ಹೆಸರು ಮೊದಲು ನಮ್ಮ ನೆನಪಿಗೆ ಬರುತ್ತದೆ. 1991ರಲ್ಲಿ ಪ್ರಕಟವಾದ ಆಮೂರರ ಭುವನದ ಭಾಗ್ಯ ಬೇಂದ್ರೆಯವರ ಸಾಹಿತ್ಯ ಕುರಿತು ಬಂದ ಮೊದಲ ಸಮಗ್ರ ಅಧ್ಯಯನವಷ್ಟೇ ಅಲ್ಲ, ಅದು ಸಮಕಾಲೀನ ಸಾಹಿತ್ಯ ವಿಮರ್ಶಾ ಕ್ಷೇತ್ರದಲ್ಲಿ ಹೊರಬಂದ ಒಂದು ಉತ್ಕೃಷ್ಟ ಗ್ರಂಥವಾಗಿದೆ. ಸದಾ ತನ್ನ ಮೇಲೆ ಗ್ರಂಥ, ಸಂಶೋಧನ ಕೃತಿ, ಪುಸ್ತಿಕೆ ಹಾಗೂ ಲೇಖನಗಳನ್ನು ಬರೆಸಿಕೊಳ್ಳುತ್ತಿರುವ ಬೇಂದ್ರೆ ಸಾಹಿತ್ಯದ ಶಕ್ತಿ ಒಂದು ಕಡೆ ನಮ್ಮ ಗಮನ ಸೆಳೆದರೆ, ಇನ್ನೊಂದೆಡೆ ಆಮೂರರ ವಿಮರ್ಶೆ ಮತ್ತೆ ಮತ್ತೆ ಬೇಂದ್ರೆ ಸಾಹಿತ್ಯದತ್ತ ಮುಖ ಮಾಡುತ್ತಿರುವುದು, ಬೇಂದ್ರೆ ಸಾಹಿತ್ಯ ಆಮೂರರ ವಿಮರ್ಶೆಯ ಅತಿಮುಖ್ಯ ಕಾಳಜಿಗಳಲ್ಲೊಂದಾಗಿದೆ ಎಂಬುದು ಇನ್ನೊಂದು ವಿಶೇಷ.

ಇಂಗ್ಲಿಷ್, ಕನ್ನಡ ಎರಡರಲ್ಲೂ ಸೇರಿದಂತೆ, ಆಮೂರರು ಇಲ್ಲಿಯವರಿಗೆ ಬೇಂದ್ರೆ ಸಾಹಿತ್ಯದ ಕುರಿತು ಎಂಟು ಕೃತಿಗಳನ್ನು ರಚಿಸಿದ್ದಾರೆ. ಈ ಎಲ್ಲಾ ಗ್ರಂಥಗಳ ಮಧ್ಯೆ ಪ್ರಸ್ತುತ ಒಮ್ಮುಖ ಬೇಂದ್ರೆಯವರ ವಿಶಿಷ್ಟ ಅಧ್ಯಯನವಾಗಿದೆ (ಸಾಹಿತ್ಯ ಪ್ರಕಾಶನ; ಹುಬ್ಬಳ್ಳಿ, 2016; ಪುಟಗಳು 200; ಬೆಲೆ 160). ಮೊದಲಿನ ಗ್ರಂಥಗಳು ಸ್ಥೂಲವಾಗಿ ಸಾಹಿತ್ಯ ವಿಮರ್ಶಾ ಗ್ರಂಥಗಳಾದರೆ, ಸದ್ಯದ ಅಧ್ಯಯನ ತತ್ವಶಾಸ್ತ್ರದ ಕಡೆ ವಾಲುತ್ತದೆ.ಇದು ಆಮೂರರ ವಿದ್ವತ್ಕೆಲಸ ಈಗ ಪಡೆದುಕೊಂಡ ಹೊಸ ತಿರುವನ್ನು ನಮ್ಮಗಮನಕ್ಕೆ ತಂದರೆ, ಸ್ವಲ್ಪ ಮಟ್ಟಿಗೆ ಬಿಕ್ಕಟ್ಟನ್ನು ಎದುರಿಸುತ್ತಿರುವ ಕನ್ನಡದ ವಿಮರ್ಶೆ ಯಾವ ದಿಕ್ಕನ್ನು ತುಳಿಯಬೇಕೆಂಬುದಕ್ಕೆ ದಿಕ್ಸೂಚಿಯಾಗಿದೆ.

ಪುಸ್ತಕದ ಶೀರ್ಷಿಕೆ 'ಒಮ್ಮುಖ'ವಾದರೂ, ಈ ಪುಸ್ತಕದಲ್ಲಿ ಎರಡು ಬೇರೆಬೇರೆಯಾದ ವಿಷಯಗಳನ್ನು ಚರ್ಚಿಸಲಾಗಿದೆ. ಮೊದಲನೇ ಭಾಗವು ಬೇಂದ್ರೆಯಲ್ಲಿ 'ಕಾವ್ಯ ಹಾಗೂ ತಾತ್ವಿಕತೆ'ಯ ಸಂಬಂಧದ ಚರ್ಚೆ ಮಾಡಿದರೆ, ಎರಡನೇ ಭಾಗವು ಬೇಂದ್ರೆಯವರು ಮಾಡಿದ ಅನುವಾದಗಳನ್ನು ಪುನರ್‌ಪರಿಶೀಲನೆ ಮಾಡುತ್ತದೆ.

ಆನಂದ ಝುಂಝುರವಾಡರು ಸಂಗ್ರಹಿಸಿದ ಮರಾಠಿ ಲೇಖನಗಳನಿಟ್ಟುಕೊಂಡು ಆಮೂರರು ಒಂದು ತರಹದ 'ಆರ್ಕಾಯ್ವಲ್' ಮಾದರಿಯ ಸಂಶೋಧನೆ ಮಾಡುವುದರ ಮೂಲಕ ಬೇಂದ್ರೆಯವರಲ್ಲಿ ಶ್ರೇಷ್ಠ ಚಿಂತಕನನ್ನು ಹುಡುಕುವ ಪ್ರಯತ್ನ ಮಾಡಿದ್ದಾರೆ. ಇದಕ್ಕಾಗಿ ಆಮೂರರು ಉಪಯೋಗಿಸಿದ ಅಧ್ಯಯನ ತಂತ್ರವೇನೆಂದರೆ ಬೇಂದ್ರೆಯವರ

ತಾತ್ವಿಕ ವಿಚಾರಗಳನ್ನು ಅವರೇ ರಚಿಸಿದ ಕವಿತೆಗಳಿಗೆ ಅನ್ವಯಿಸಿ ತೋರಿಸುವುದು. 'ಸತ್ಯ', 'ನಿಷ್ಠೆ', 'ಯೋಗ', 'ವಿವೇಕ', 'ಚೈತನ್ಯ'ಗಳಿಂದ ಹಿಡಿದು 'ಕಾವ್ಯಸೃಷ್ಟಿ', 'ಕಲ್ಪನೆ', 'ಬುದ್ಧಿ','ಭಾವ' ಮುಂತಾದ ಇಪ್ಪತ್ತಕ್ಕೂ ಹೆಚ್ಚು ಎನ್ನಬಹುದಾದ ತಾತ್ವಿಕ ಪರಿಕಲ್ಪನೆಗಳು ಬೇಂದ್ರೆ ಕಾವ್ಯದೊಂದಿಗೆ ಹೇಗೆ ಬೆಸೆದುಕೊಂಡಿವೆ ಎಂದು ಆಮೂರರು ಪ್ರಮಾಣೀಕರಿಸುತ್ತಾರೆ.

ಇಲ್ಲಿ ಇವರು ಬಳಸುವ ನಿರೂಪಣೆಯ ತಂತ್ರ ಸರಳವಾದುದು. ಮೊದಲು,ತಾತ್ವಿಕ ಪರಿಕಲ್ಪನೆಗಳನ್ನು ವಿವರಿಸಿ, ನಂತರ ಬೇಂದ್ರೆ ಕಾವ್ಯದಲ್ಲಿ ಅವು ಮೂಡಿಬಂದ ಬಗೆಯನ್ನು ಸ್ಪಷ್ಟವಾಗಿ ವಿಶ್ಲೇಷಿಸುತ್ತಾರೆ. ಇದೊಂದು ರೀತಿಯ ಸರಳೀಕರಣವೆಂದರೆ ತಪ್ಪಾಗುತ್ತದೆ. ಇದು ತಾತ್ವಿಕ ಪರಿಕಲ್ಪನೆಗಳ ಹಾಗೂ ಬೇಂದ್ರೆ ಕಾವ್ಯದ ಮೇಲೆ, ಆಮೂರರಿಗಿರುವ ಆಳವಾದ ಗ್ರಹಿಕೆಯನ್ನು ಸೂಚಿಸುತ್ತದೆ. ನಮ್ಮ ಗ್ರಹಿಕೆಗಳು ಆಳವಾಗಿದ್ದರೆ ಮಾತ್ರ ನಾವು ಅವುಗಳನ್ನು ಸ್ಪಷ್ಟವಾಗಿ ಹಾಗೂ ಸರಳವಾಗಿ ಸಂವಹನ ಮಾಡಲು ಸಾಧ್ಯ. ಈ ಕಾರಣದಿಂದ ಅವರ ಸರಳ ನಿರೂಪಣೆ ಸಾಮಾನ್ಯ ಓದುಗನಿಗೂ ಮುಟ್ಟುವಂತಿದೆ.

ಈ ರೀತಿಯ ಅಧ್ಯಯನ ಒಂದು ದೃಷ್ಟಿಯಿಂದ ಬೇಂದ್ರೆ ಸಾಹಿತ್ಯ ಅಧ್ಯಯನದಲ್ಲಿ ಹೊಸ ಪ್ರಯತ್ನ. ಆದರೆ ಇನ್ನೊಂದು ದೃಷ್ಟಿಕೋನದಿಂದ ಇದು ಒಂದು ಪ್ರಾಯೋಗಿಕ ವಿಮರ್ಶೆ ಅಷ್ಟೇ ಅನಿಸಿದರೂ ಇದರ ಒಂದು ಉಪಫಲಿತಾಂಶವೇನೆಂದರೆ ಮರಾಠಿ ಸಾಹಿತ್ಯದ ತಾತ್ವಿಕ–ಕಾವ್ಯದ ಪರಂಪರೆಯಲ್ಲಿಟ್ಟು ಬೇಂದ್ರೆಯವರನ್ನು ನೋಡುವುದು. ಜ್ಞಾನದೇವನ ಜ್ಞಾನೇಶ್ವರಿ, ಅನುಭವಾಮೃತ ಹಾಗೂ ಅಭಂಗಗಳು ಹೇಗೆ ಬೇಂದ್ರೆಯವರ ಕಾವ್ಯಾಭಿವ್ಯಕ್ತಿಯನ್ನು ರೂಪಿಸಿವೆ ಎಂದು ಆಮೂರರು ತೋರಿಸುತ್ತಾ, ಬೇಂದ್ರೆ ಕಾವ್ಯದ ತಾತ್ವಿಕ ಕುರುಹುಗಳನ್ನು ಗುರುತಿಸಿದ್ದಾರೆ. ಇಲ್ಲಿ ಬೇಂದ್ರೆ ಸಾಹಿತ್ಯದ ಮುಂದಿನ ಸಂಶೋಧನೆಗೆ ಅವರು ಮಹತ್ತರ ಸುಳಿವನ್ನು ಕೂಡಾ ಸೂಚಿಸಿದ್ದಾರೆ. ಈ ಪುಸ್ತಕದ ಎರಡನೇ ಭಾಗ ಬೇಂದ್ರೆಯವರನ್ನು ಅನನ್ಯ ಅನುವಾದಕನಾಗಿ ಚರ್ಚಿಸುತ್ತದೆ. ಭುವನದ ಭಾಗ್ಯದಲ್ಲಿಯೇ ಆಮೂರರು ಬೇಂದ್ರೆಯವರ ಅನುವಾದಗಳನ್ನಿಟ್ಟುಕೊಂಡು, ಸೈದ್ಧಾಂತೀಕರಣ ಮಾಡುವ ಪ್ರಯತ್ನ ಮಾಡಿದ್ದರು. ಆ ಕೆಲಸವನ್ನು ಆಮೂರರು ಸಮರ್ಪಕವಾಗಿ ಇಲ್ಲಿ ಮುಂದುವರಿಸಿದ್ದಾರೆ. ಬೇಂದ್ರೆಯವರ ಅನುವಾದಗಳನ್ನು ಮೂಲಗಳ ಜೊತೆಗಿಟ್ಟು, ವಿಶ್ಲೇಷಿಸುತ್ತಾ ಬೇಂದ್ರೆ ಅವರ ಅನುವಾದವು 'ಏಕಮುಖವಾಗಿರದೇ, ಚಲನಶೀಲವಾಗಿದೆ' ಎಂದು ತೋರಿಸುತ್ತಾರೆ.

ಸಂಸ್ಕೃತ, ಮರಾಠಿ, ಇಂಗ್ಲೀಷ್, ಬಂಗಾಲೀ, ಹಿಂದೀ ಭಾಷೆಗಳಿಂದ ಅನುವಾದ ಮಾಡಿದ ಕೃತಿಗಳ ಅನುವಾದ ನೀತಿಯನ್ನು ಪರೀಕ್ಷಿಸುತ್ತಾ, ಬೇಂದ್ರೆಯವರು ಅನುವಾದ ಮಾಡುವಾಗ ಎದುರಿಸಿದ ಸಮಸ್ಯೆಗಳನ್ನು ಹೇಗೆ ಬಗೆಹರಿಸುತ್ತಾರೆಂದು ಆಮೂರರು ಮಾರ್ಮಿಕವಾಗಿ ವಿವರಿಸುತ್ತಾರೆ. ಅವರು ಗುರುತಿಸುವ ಹಾಗೆ ಬೇಂದ್ರೆಯವರ ಭಾಷಾಂತರದ ಮುಖ್ಯ ಲಕ್ಷಣವೇನೆಂದರೆ, ಭಾಷಾಂತರ ಕ್ರಿಯೆ ಮೂಲವನ್ನು ಮುರಿದು ಕಟ್ಟುವ 'ಪುನರ್‌ರಚನೆ', ಮೂಲದ ಭಾವವನ್ನು ಸೆರೆಹಿಡಿಯುವ 'ಭಾವಗ್ರಹಣ'. ಆಮೂರರ ಪ್ರಕಾರ ಬೇಂದ್ರೆಯವರು ಅಕಾಡೆಮಿಕ್ ಭಾಷಾಂತರಕಾರರಾಗಿರಲಿಲ್ಲ, ಅವರು ಭಾಷಾಂತರದ ಕ್ರಿಯೆಯಲ್ಲಿ ಶ್ರಮವಹಿಸಿ ತಮ್ಮನ್ನು ತಾವು ತೊಡಗಿಸಿಕೊಂಡವರು. ಅದಕ್ಕಾಗಿಯೇ ಅವರ ಭಾಷಾಂತರದ ನೀತಿಯು 'ಸ್ವೀಕೃತಭಾಷೆ' (receiving language) ಯ ಓದುಗನನ್ನು ಗಮನದಲ್ಲಿಟ್ಟುಕೊಂಡಿತ್ತೇ ವಿನಹಃ, ಭಾಷಾಂತರದ ವಿದ್ವನ್ಮನ್ನಣೆಗಾಗಿ ಅಲ್ಲ. ಇಂತಹ ಭಾಷಾಂತರ ನೀತಿಯು ಮೂಲವನ್ನು ಮುರಿದು 'ಪುನರ್‌ರಚನೆ'ಗೆ ಹೆಚ್ಚು ಒಲವು ತೋರಿಸುತ್ತದೆ

ಎಂಬುದನ್ನು ಗಮನಿಸಬೇಕು.

ಮುಂದೆ ಬೇಂದ್ರೆಯವರ ಅನುವಾದದ ಮೀಮಾಂಸೆಯಲ್ಲಿ ಆಮೂರರು ಮಾಡಿದ ವಿಶಿಷ್ಟ ವಿಶ್ಲೇಷಣೆ ಏನೆಂದರೆ, ಕವಿ ತನ್ನ ಕವಿತೆಗಳ ಅನುವಾದವನ್ನು ಮಾಡಿದಾಗ ಏನಾಗುತ್ತದೆಂಬ ಪ್ರಶ್ನೆ. ಬಹುಶಃ 'ಅನುವಾದ ಅಧ್ಯಯನ'ಗಳ ಸಂಶೋಧನೆಯಲ್ಲಿಯೇ ಇದು ವಿನೂತನ ಪ್ರಶ್ನೆಯಾಗಿದೆ. ಬೇಂದ್ರೆಯವರು ತಮ್ಮ ಕನ್ನಡದ ಕವಿತೆಗಳನ್ನು ಮರಾಠಿಗೆ ಅನುವಾದಿಸುವಾಗ ಅವರು ಅನುಸರಿಸಿದ ನೀತಿಯನ್ನು ವಿಶ್ಲೇಷಿಸುತ್ತಾ, ಕವಿ ತನ್ನ ಕವಿತೆಗಳ ಅನುವಾದಕನಾದಾಗ ಹೆಚ್ಚಿನ ಸ್ವಾತಂತ್ರ್ಯವನ್ನು ಗಳಿಸಿಕೊಳ್ಳುತ್ತಾನೆಂಬುದು ಆಮೂರರು ಸಾಬೀತುಪಡಿಸುತ್ತಾರೆ. ಸ್ವತಃ ಮರಾಠಿ ಭಾಷೆಯ ಹಿಡಿತವು ಆಮೂರರವರಿಗೆ ಇರುವುದರಿಂದ, ಅವರು ಈ ವಿಶ್ಲೇಷಣೆಯನ್ನು ಬಹಳ ಅಧಿಕೃತವಾಗಿ ಮಾಡಿದ್ದಾರೆ.

ಆಳವಾದ ತಾತ್ವಿಕ ತಳಹದಿ ಇರುವ ಈ ಪುಸ್ತಕ ಒಂದು ಉತ್ತಮ ಸಾಹಿತ್ಯವಿಮರ್ಶಾ ಕೃತಿಯೂ ಆಗಿದೆ. ಕೊನೆಗೂ ಆಮೂರರು ಈ ಪುಸ್ತಕದಲ್ಲಿ, ಅವರೇ ಹೇಳುವಂತೆ, ಬೇಂದ್ರೆ ಕಾವ್ಯದ ಅನನ್ಯತೆಯ ಶೋಧವನ್ನು ಮಾಡಿದ್ದಾರೆ. ಅವರ ಒಟ್ಟಾರೆ ವಿಮರ್ಶಾ ತತ್ವವು ನಂಬಿಕೊಂಡಿರುವ ಮೌಲ್ಯವೂ ಸಹ 'ಅನನ್ಯತೆ'; ಬೇಂದ್ರೆಯವರಿಗೂ ತಮ್ಮ ಕಾವ್ಯದ ಅನನ್ಯತೆಯ ಅರಿವಿತ್ತು. ಈ ನಿಲುವಿಗೆ ಸಂಬಂಧಪಟ್ಟಂತೆ ಇಲ್ಲಿ ಕಾವ್ಯ ಹಾಗೂ ವಿಮರ್ಶೆ 'ಒಮ್ಮುಖ'ವಾಗಿವೆ.

ಮಾತಿಗಿಂತಲೂ ನಿನ್ನ
ಮೌನ ನನಗಿಷ್ಟವೇ
ಮನ ಬಯಸಿದಂತದರ
ನಾನರ್ಥೈಸಿಕೊಳುವೆ

ಗಾಯಕನ, ವಾದಕನ ಮತ್ತು ನರ್ತಕನ ಗಾನಾನುಸಂಧಾನ

ಕೃಷ್ಣಪ್ರಕಾಶ ಉಳಿತ್ತಾಯ
'ಈಶಾವಾಸ್ಯ', ಪೆರ್ಮಂಕಿ
ಉಳಾಯಿಬೆಟ್ಟು ಗ್ರಾಮ ಮತ್ತು ಪೋಸ್ಟ್, ಮಂಗಳೂರು – 575145

ಕಲೆ ಮತ್ತು ಕಲಾವಿದನ ವ್ಯಕ್ತಿತ್ವದ ಕುರಿತಾಗಿ ಯೊಚಿಸುತ್ತಿದ್ದಾಗ ಹೊಳೆಯುವುದಿಷ್ಟು. ಕಲಾವಿದನ ವ್ಯಕ್ತಿತ್ವವೇ ಕಲೆಯಲ್ಲಿ ಅಭಿವ್ಯಕ್ತವಾಗುವುದು. ಇದಕ್ಕೆ ಕಲಾವಿದನ ಸಂಸ್ಕಾರ, ಇಲ್ಲಿಯವರೆಗಿನ ಅನುಭವಗಳ ಪ್ರಭಾವೆಲ್ಲವಿವೆ. ಇದು ಜೀವನಕ್ಕೂ ಒಪ್ಪುವ ಮಾತು ಹೌದಷ್ಟೆ? ಅಂತೆಯೇ, ಕಲಾವಿದನಾದವ ಕಲೆಯಲ್ಲಿ ಏನನ್ನು ಹೇಳುತ್ತಾನೆಯೋ ಅವೆಲ್ಲ ಅವನ ಒಟ್ಟು ಜೀವನಾನುಭವಗಳನ್ನು ಸಮಪಾಕದ ಪ್ರತಿಬಿಂಬ. ಇದು ವಾದನದಲ್ಲೂ, ಗಾಯನದಲ್ಲಿ, ನರ್ತನದಲ್ಲಿ ಮತ್ತು ಇನ್ನಿತರ ಯಾವುದೇ ಕಲೆಗಳಲ್ಲೂ ಕೂಡ ಸತ್ಯಕ್ಕೆ ಹತ್ತಿರವಾದ ವಿಚಾರ. ವ್ಯಕ್ತಿಯ ಜೀವನ ಧೀರತೆಯಿಂದ ಕೂಡಿದ್ದರೆ ಮತ್ತು ನೇರಾ ನೇರವಾಗಿದ್ದರೆ ಕಲೆಯಲ್ಲಿ ಕೂಡ ಯಾವುದೇ ರೀತಿಯ ಅಧೀರತೆ, ವಕ್ರಗತಿಗಳಿರುವ ಸಂಭವವಿರುವುದಿಲ್ಲ. ಕಲಾವಿದ ಎಷ್ಟೇ ಬಿಗಿಹಿಡಿತದಿಂದ ಕಲಾಭಿವ್ಯಕ್ತಿಯನ್ನು ಮಾಡಿದರೂ ಎಲ್ಲೋ ಒಂದು ಕಡೆ ಆತನ ಪೂರ್ವ ಸಂಸ್ಕಾರದ ವಾಸನೆ ಕಲೆಯಲ್ಲಿ ಬಾರದೇ ಇರದು. ಇದರ ನೆರಳಿನ ಆಸುಪಾಸಲ್ಲೇ ಸಾಗುವ ಚಿಂತನೆ ವಾಚಕರ ಮುಂದಿದೆ.

ಗಾಯಕನ ಗಾನಾನುಸಂಧಾನ ಮತ್ತು ವಾದಕನ ಗಾನಾನುಸಂಧಾನ

ಈ ಲೇಖನದ ಕೇಂದ್ರ ವಸ್ತು ಯಕ್ಷಗಾನವೇ. ಅದನ್ನು ವಸ್ತುವಾಗಿರಿಸಿಕೊಂಡು ಭಾಗವತ ಮತ್ತು ವಾದಕ ಗಾನದ ಅಂತರ್ಯವನ್ನು ಹೇಗೆ ವೀಕ್ಷಿಸುತ್ತಾನೆ ಮತ್ತು ಅದರಿಂದ ಹೊರಹೊಮ್ಮುವ ಪರಿಣಾಮ ರಮಣೀಯತೆಯ ನೆಲೆ ಏನು? ಎತ್ತ? ಎಂಬುದರ ಬಗೆಗಿನ ವಿಶ್ಲೇಷಣೆ. ಒಂದೇ ಹಾಡು, ಒಂದೇ ರಾಗ, ಅದೇ ತಾಳ ಹೀಗಿದ್ದರೂ ಒಬ್ಬ ಗಾಯಕ ಹಾಡಿದ ಗಾನದ ಸ್ತರಕ್ಕಿಂತ ಇನ್ನೊಬ್ಬ ಗಾಯಕ ಹಾಡಿದ ಅದೇ ಗಾನದ ಸ್ತರ ಭಿನ್ನವಾಗಿರುತ್ತದೆ. ಇದು ಭಾವದಲ್ಲಾಗಿರಬಹುದು ಅಥವಾ ರಾಗ ತೀವ್ರತೆಯಲ್ಲಾಗಿರಬಹುದು. ಯಾಕೆ ಹೀಗೆ? ಅದಕ್ಕೆ ಕಾರಣ ಈ ರೀತಿಯೆಂದು ಕಂಡುಕೊಳ್ಳಬಹುದೇನೋ? ಗಾಯಕನ ಗಾನದ ಬಗೆಗಿರುವ ಅರ್ಥಾನುಸಂಧಾನ ಮತ್ತು ಭಾವಾನುಸಂಧಾನ ಇವೆರಡರ ಮೇಲೆ ಕಲಾವಿದನ ಒಟ್ಟು ವ್ಯಕ್ತಿತ್ವದ ಆವೇಶವೂ ಇಲ್ಲದಿಲ್ಲ. ಉದಾಹರಣೆಗೆ ಪಾರ್ತಿಸುಬ್ಬನ ಚೂಡಾಮಣಿ ಪ್ರಸಂಗದ ಕ್ಷೇಮವೇನ್ನೈ ಹನುಮಾ ಎಂಬ ಪದವನ್ನು ಹಾಡುವಾಗ ಭಾಗವತನಾದವನಿಗೆ ಸೀತೆಗೆ ರಾಮನ ಮೇಲಿರುವ ಪ್ರೇಮ– ಭಕ್ತಿ, ಹನುಮನ ಮೇಲೆ ದಿಢೀರನೆ ಹುಟ್ಟುವ ಮಾತೃವಾತ್ಸಲ್ಯ ಮತ್ತು ತಾನು ಅಯೋಧ್ಯೆಯ ಮಹಾರಾಜ್ಞಿಯೆಂಬ ಜಾಗೃತಾವಸ್ತೆ ಇವೆಲ್ಲದರ ಅನುಸಂಧಾನ ಮನದಲ್ಲಿ ಇದೇ ಇದ್ದರಂತೂ ಈ ಗಾನದ ಮಟ್ಟವನ್ನು ವಿವರಿಸಲು ಪದಗಳ ದೌರ್ಬಲ್ಯವನ್ನು ಅನುಭವಿಸಬೇಕಾಗುತ್ತದೆ.

ವಾದಕನಾದವನಿಗೂ ಇದೇ ರೀತಿಯ ಸ್ಪಂದನಾ ಸಾಮರ್ಥ್ಯವಿದ್ದರೆ ಅಂತಹದ್ದೇ ಮೇಲ್ಮಟ್ಟದ ಪದ್ಯದ ಭಾವವನ್ನು ವಾದನದ ಮೂಲಕ ಪ್ರತಿಫಲಿಸುವಂತಹಾ ವಾದನ

ಸೌಂದರ್ಯವನ್ನು ಅನುಭವಿಸಬಹುದು. ಮದ್ದಳೆಯ ಬಲ ಬದಿಯ ಸೌಮ್ಯ ನುಡಿಗಳಾದ 'ನಂ', 'ತಿಂ', 'ತೊಂ', 'ತ' 'ತಾಂ' ಇತ್ಯಾದಿ ಮತ್ತು ಮದ್ದಳೆಯ ಎಡ ಬದಿಯ ಸೌಶೀಲ್ಯಭರಿತ ನುಡಿಗಳಾದ 'ಧಿಂ', 'ಗುಂ','ಗು','ಗ್', 'ತ್' ಇತ್ಯಾದಿಗಳ ಭಾವಪೂರ್ವಕ ಮಿಶ್ರಣಗಳಿಂದ ಮದ್ದಳೆಯಲ್ಲೂ ಗಾನಕ್ಕೆ ಸಂವಾದಿಯಾಗಿ ಸೊಲ್ಕಟ್ಟುಗಳ ಮಹಾಕಾವ್ಯವನ್ನೇ ಕಟ್ಟಬಹುದು. ಅಷ್ಟುಮಾತ್ರವಲ್ಲ ದಿ.ಹಿರಿಯ ಕುದುರೆಕೋಡ್ಲು ರಾಮಭಟ್ಟರು ಬಲಿಪ (ಹಿರಿಯ) ನಾರಾಯಣ ಭಾಗವತರ ಸಂಸ್ಮರಣಾ ಗ್ರಂಥದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯದಂತೆ: ಯಾವುದೇ ಪದ್ಯವನ್ನಾದರೂ ಭಾಗವತರು ಹಾಡುತ್ತಿರುವಾಗ ತಾನೂ ಅದನ್ನು ಹಾಗೆಯೇ ಮನಸ್ಸಿನಲ್ಲೇ ಆವರ್ತಿಸುತ್ತಾ ಮೃದಂಗ ನುಡಿಸಿದರೆ ಸರಿಯಾದ ಹೊಂದಾಣಿಕೆಯಾಗುತ್ತದೆ. ರಸ ಭಾವಗಳಿಗೆ ಪುಷ್ಟಿ ದೊರೆಯುತ್ತದೆ. ತಾಳದ ಆವರ್ತಗಳನ್ನು ಮೃದಂಗದಲ್ಲಿ ನುಡಿಸುವುದಕ್ಕೆ ಬದಲಾಗಿ ಪದ್ಯವನ್ನೇ ನುಡಿಸಿದಂತಾಗುತ್ತದೆ. ಇಂತಹಾ ಸಹಕಾರ ಮೃದಂಗವಾದಕನಿಂದ ದೊರೆತಾಗ ಭಾಗವತನ ಹಾಡುಗಾರಿಕೆಗೂ ಕಳೆ ಏರುತ್ತದೆ. ಅಂದರೆ ಇಲ್ಲಿ ಆಗುವ ಕ್ರಿಯೆ ವಾದನವೂ ಗಾಯನವಾಗುವುದು.

ಒಟ್ಟಿನಲ್ಲಿ ಕಲೆ ಬಯಸುವುದು ಗಾಯಕ-ವಾದಕರಲ್ಲಿರಬೇಕಾದ ಆತ್ಮಸಂವಾದ

ಇಂತಹಾ ಪರಸ್ಪರ ಸಂವಾದದ ಪೂರ್ವಸೂಚನೆಯೂ ವಾದಕ-ಗಾಯಕರಿಗೆ ಇರುವುದಿಲ್ಲ. ಅದು ಅ ಕ್ಷಣಕ್ಕೆ ಸಿದ್ಧಿಸುವುದು. ಪರಸ್ಪರರ ಬಾವಸಂಸ್ಕಾರ ಬೇರೆ ಬೇರೆಯಾಗಿದ್ದ ರಂತೂ ಆಗುವ ಅನರ್ಥವೇ ಬೇರೆಯದು. ಇದನ್ನೇ ನಾನೆಂದದ್ದು ಗಾಯನ, ವಾದನ, ನರ್ತನ ಇವುಗಳ ಸಾಂಗತ್ಯ ಬೇರೆಯಲ್ಲ ಜೀವನದಲ್ಲೊದಗುವ ಸ್ನೇಹ, ಪ್ರೇಮ, ವಾತ್ಸಲ್ಯಗಳ ಸಾಂಗತ್ಯ ಬೇರೆಯಲ್ಲ ಎಂದು. ಇದನ್ನು ಯಾವಾಗಲೂ ನಿರೀಕ್ಷಿಸಿದರೆ ಅದು ಒದಗಿಬಾರದು. ಒದಗಿ ಬಾರದೇ ಇರಲು ಕಾರಣಗಳು ಅನೇಕ ಇರಬಹುದು-ಮಾನಸಿಕ ತುಮುಲಗಳು, ದೈಹಿಕ ಶ್ರಮ ಇತ್ಯಾದಿ. ಆದುದರಿಂದ ಗಾಯಕನ ಗಾನಾನುಸಂಧಾನತೆ ಯಂತೆಯೇ ವಾದಕನ ಗಾನಾನುಸಂಧಾನತೆ ಒಟ್ಟು ರಸೋದ್ದೀಪನಕ್ಕೆ ಕಾರಣವಾಗಿರುತ್ತದೆ. ಗಾಯಕರಲ್ಲಿ ಅಥವಾ ಗಾಯನದಲ್ಲಿ ಹುಟ್ಟಿದ ಸಂಗೀತ ವಾದಕನಲ್ಲಿ ಅಥವಾ ವಾದನದೊಂದಿಗೆ ಮಿಳಿತಹೊಂದಿ ಮುಂದುವರಿದು ರಸಿಕರ ಮನದಲ್ಲಿ ಮರುಹುಟ್ಟನ್ನೋ-ಯಾವುದೋ ಬಗೆಯ ಸಂಸ್ಕಾರವನ್ನೋ ಪಡೆದು ಇನ್ನಾವುದೋ ರೀತಿಯಲ್ಲಿ ಮರು ಅಭಿವ್ಯಕ್ತಿಯನ್ನು ಪಡೆದುಕೊಳ್ಳುತ್ತದೆ. ವಿಳಂಬಗತಿಯ ನರ್ತನದಲ್ಲಾಗಲೀ ಗಾಯನದಲ್ಲಾಗಲೀ ಮತ್ತಿವುಗಳಿಗೆ ಪೂರಕವಾದ ವಾದನದಲ್ಲಿ ಹುಟ್ಟುವ ಸಂಗೀತಕ್ಕಿರುವ ಸಾತ್ವಿಕ ಭಾವವನ್ನು, ಸತ್ ಸಂಸ್ಕಾರವನ್ನು ಸೃಜಿಸುವ ಶಕ್ತಿ ಧ್ರುತಗತಿಯ ಸಂಗೀತಕ್ಕಿಲ್ಲವೆಂದೇ ನನ್ನ ಸದ್ಯದ ನಂಬಿಕೆ. ಇದಕ್ಕೆ ಉದಾಹರಣೆಯಾಗಿ ನೆಬ್ಬೂರು ನಾರಾಯಣ ಭಾಗವತರು 1992ರಲ್ಲಿ ಮಂಗಳೂರಲ್ಲಿ ನಡೆದ ನನ್ನ ಊಹೆಯಂತೆ ಸರ್ವ ಪ್ರಥಮ ಯಕ್ಷಗಾಯನ ಕಾರ್ಯಕ್ರಮದಲ್ಲಿ ಹಾಡಿದ್ದನ್ನು ನೆನಪು ಮಾಡಿಕೊಳ್ಳಬಹುದು. ವಿಳಂಬಗತಿಯ 'ಆವಲ್ಲಿಗೆ ಪಯಣವಯ್ಯ' ಎಂಬ (ಸುಧನ್ವ ಮೋಕ್ಷ ಪ್ರಸಂಗ) ರೂಪಕ ತಾಳದಲ್ಲಿ ಪ್ರಸ್ತುತ ಪಡಿಸಿದ ಗಾನ ಪ್ರಭಾವಯುತವಾಗಿ ಮನಸ್ಸಿನಲ್ಲಾಗುತ್ತಿದ್ದ ಆಂದೋಳನದ ಮೂರ್ತ ರೂಪದಂತಿತ್ತು. ದೀರ್ಘವಾದ ಆಲಾಪನೆ ಮತ್ತು ಮುಖ್ಯವಾದ ಸಾಹಿತ್ಯಿಕ ಅಂಶಗಳಿಗೆ ಭಾಗವತರು ಗಮನವಿರಿಸಿ ಕೊಡುತ್ತಿದ್ದ ಪಲುಕುಗಳು ಇಡೀ ಕಾರ್ಯಕ್ರಮದ ಮುಖ್ಯ ಗಾನವಾಗಿ ಮಂಡಿತವಾಯಿತು. ಈ ಗಾನಕ್ಕೆ ಸೂಕ್ತವಾದ ಹಿನ್ನೆಲೆಯನ್ನು ಒದಗಿಸಿದ ಕೀರ್ತಿ ಸುಬ್ರಹ್ಮಣ್ಯ ಧಾರೇಶ್ವರರಿಗೆ (20ರ

ಹರೆಯ) ಸಿಗಬೇಕು. ಯಾಕೆಂದರೆ, ಅವರು ಪ್ರಸ್ತುತ ಪಡಿಸಿದ 'ಅನಿತೊರಳಾಗ ಪ್ರಭಾವತಿಯು' ಎಂಬ ತಾಳರಹಿತ ಗಾನ ಚುರುಕಲ್ಲಿ ಆರಂಭವಾಗಿ ಕೊನೆಗೆ ಬಾಯಿತಾಳದಲ್ಲಿ ಮುಕ್ತಾಯವಾದುದು ಪ್ರಭಾವತಿಯ ಮನದ ಬಯಕೆ ಪ್ರತಿಬಿಂಬಿತವಾಗುತ್ತಿತ್ತು. ಆದರೆ ಸುಧನ್ವನು ಯುದ್ಧಕ್ಕೆ ಅಣಿಯಾದ ರೂಪ ಕಂಡೊಡನೆಯೇ ಮನಸ್ಸಿನಲ್ಲಿ ಆಂದೋಳನ ಏರ್ಪಟ್ಟು ಒಮ್ಮೆಲೇ ನಿಧಾನವಾಗಿ ಗಂಡನನ್ನು ವಿಚಾರಿಸುವ, ರಮಿಸುವ ಮಡದಿಯಾಗಿ ಮಾರ್ಪಾಟಾಗುವ ರೀತಿ ನೆಬ್ಬೂರರ ಪ್ರಸ್ತುತಿಯಲ್ಲಿ ಕಂಡುಬಂತು. ಇದು ಇಡೀ ರಂಗವನ್ನು ಕಟ್ಟಿಕೊಡುವಲ್ಲಿ ಯಶಸ್ವಿಯಾಯಿತೆನ್ನಬಹುದು. ಇದೇ ಗಾಯಕನ ಗಾನಾನುಸಂಧಾನಕ್ಕಿರುವ ಮಹತ್ವ. ವಾದಕನ ಗಾನಾನುಸಂಧಾನತೆಯ ವಿಚಾರದಲ್ಲಿ ನೋಡಿದಾಗ ನನಗೆ ಮತ್ತೆ ಮತ್ತೆ ನೆನಪಿಗೆ ಬರುವುದು ದಿವಂಗತ ಪಾಲ್ಘಾಟ್ ಮಣಿ ಅಯ್ಯರ್ ಮಹಾಶಯರು. ಅದ್ಯಾವ ಮಾಟದಿಂದ ಅವರಿಗೆ ಕೀರ್ತನೆಯ ಗರ್ಭದ ಒಳಹೊಕ್ಕು ಅದರ ನಾಡಿಮಿಡಿತಕ್ಕೆ ತನ್ನ ಮೃದಂಗದಲ್ಲಿ ಸ್ಪಂದಿಸಲಾಗುತ್ತಿತ್ತೋ? ಎಲ್ಲಿ ಬಿಗು ನೀಡಬೇಕು? ಎಲ್ಲಿ ಮೃದು ಛಾಪು, ಮೀಟು ಛಾಪು, ಬಿಗು ಉರುಳಿಕೆ, ಮೃದು ಸುನಾದ ಭರಿತ ಉರುಳಿಕೆ, ಗುಮ್ಕಿ ಇತ್ಯಾದಿಗಳು ಬೇಕೋ ಎಂಬ ಪ್ರಜ್ಞೆ ಅವರಲ್ಲಿದ್ದ ಗಾನಾನುಸಂಧಾನತೆಗೆ ಹಿಡಿದ ಕೈ ಕನ್ನಡಿ.

2016ರ ಎಪ್ರಿಲ್ ತಿಂಗಳಲ್ಲಿ ಮಧೂರಿನಲ್ಲಿ ನಡೆದ ಯಕ್ಷಗಾನ ಗಾನವೈಭವದ ಅನುಭವ ಇಲ್ಲಿ ಪೂರಕ ಎಂದು ವಿವೇಚಿಸುತ್ತೇನೆ. ಕೃಷ್ಣಸಂಧಾನದ 'ಈತೆರಳೊದಸುರಾರಿ...' ಎಂಬ ಪದವನ್ನು ಭಾಗವತರಾದ ಪುತ್ತಿಗೆ ರಘುರಾಮ ಹೊಳ್ಳರು ನಿಧಾನಗತಿಯಲ್ಲಿ ಆರಂಭಿಸಿ ಇದೇ ಹಾಡಲ್ಲಿ ಬರುವ 'ನಿನದ' ಎಂಬ ಕಡೆ ಚೆಂಡೆ ಮದ್ದಳೆಗೆ ಎಡೆ ಬಿಡಿತ ನುಡಿಸಲು ಅನುವು ಮಾಡಿಕೊಟ್ಟರು. ನಿನದ ಎಂಬ ಶಬ್ದವನ್ನೇ ಪ್ರಧಾನವಾಗಿಟ್ಟುಕೊಂಡು 'ನನಧೀಂ' ಎಂಬ ಸೊಲ್ಕಟ್ಟನ್ನು ಕೇಂದ್ರೀಕರಿಸಿ ಬಿಡ್ತಿಗೆ/ತನಿ ನಾನು ಮದ್ದಳೆಯಲ್ಲಿ ಆರಂಭಿಸಿದೆ. ಒಂದಾವರ್ತಿ ನುಡಿಸಿ ಚೆಂಡೆಯಲ್ಲಿದ್ದ ಪ್ರತಿಭಾನ್ವಿತ ಯುವಮದ್ದಳೆಗಾರ ಚೈತನ್ಯಕೃಷ್ಣ ಪದ್ಯಾಣರಿಗೆ ಬಿಟ್ಟುಕೊಟ್ಟೆ. ಚೈತನ್ಯರಾದರೋ ಚೆಂಡೆಕೋಲಿನ ತುದಿಯಿಂದ ಮೃದುವಾಗಿ ಯಾವುದೇ ಉದ್ವೇಗವಿಲ್ಲದೆ ಚೆಂಡೆಗೆ ತಾಡಿಸುತ್ತಾ 'ನಿನದ' ಶಬ್ದಕ್ಕೆ ಸಂವಾದಿಯಾಗಿ ತನ್ನ ಎಂದಿನ ಕಲ್ಪನಾ ಸಾಮರ್ಥ್ಯದಿಂದ ಒಂದಾವರ್ತಿ ನುಡಿಸಿ ನನಗೆ ಬಿಟ್ಟುಕೊಟ್ಟರು. ಅದೇ ಲಹರಿಯಲ್ಲಿ ತನಿ ಮುಗಿಸಿದ ನನಗೆ ಯಾವತ್ತೂ ಮರೆಯದ ಆಹ್ಲಾದಾನುಭವವನ್ನು ಕೊಟ್ಟಿದೆ. ತನಿ ಎಂದರೆ ಸಂತೋಷದಿಂದ, ಲಾಸ್ಯದಿಂದ ನುಡಿಸುವುದೆಂದರ್ಥ. ಇದರರ್ಥ ಅಲ್ಲಿ ಸಾರ್ಥಕವಾಗಿದೆ ಎಂದು ಭಾವನೆ. ಅಲ್ಲಿ ಯಾವುದೇ ರೀತಿಯ ಗಿಮಿಕ್‌ಗಳಿಗೆ ಹೋಗಿಲ್ಲವೆಂಬುದೂ ಗಮನಾರ್ಹ ವಿಚಾರ. ಕಲಾವಿದನ ಕಲೆ ಆಳವಾದಷ್ಟೂ, ವಿಸ್ತಾರ ವಾದಷ್ಟೂ ಗಿಮಿಕ್‌ಗಳನ್ನು ನೆಚ್ಚಿಕೊಳ್ಳುವ ಅಗತ್ಯ ಬೀಳುವುದಿಲ್ಲ.

ನರ್ತಕನಲ್ಲಾಗುವ ಗಾನದ ಅನುಸಂಧಾನಕ್ಕೆ ಒಂದು ಉದಾಹರಣೆ: ಉಡುಪಿಯ ಯಕ್ಷಗಾನ ಕಲಾರಂಗದವರು ಏರ್ಪಡಿಸಿದ 'ವಿಶ್ವಾಮಿತ್ರ ಮೇನಕೆ' ಆಖ್ಯಾನದಲ್ಲಿ ನನಗಾದ ಅನುಭವ ಇದು. ದಿನೇಶ ಅಮ್ಮಣ್ಣಾಯರು ಮಲಯಮಾರುತ ರಾಗದಲ್ಲಿ ಪ್ರಸ್ತುತ ಪಡಿಸಿದ 'ಮಂದ ಮಾರುತ ಬೀಸಿ' ಎಂಬ ಹಾಡಿಗೆ ಮಂದ ಮಾರುತ ಎಂಬಲ್ಲಿ ಮಂದ್ರ ಸ್ಥಾಯಿಯಲ್ಲಿ ವಿಳಂಬಗತಿಯಲ್ಲಿ ಹಾಡುವಾಗ ಮೇನಕೆ ಪಾತ್ರಧಾರಿ ದೀಪಕ್ ರಾವ್ ಪೇಜಾವರ ತೋರಿದ ಸೃಜನಶೀಲ ಅಭಿನಯ (ಇಡೀ ದೇಹ ಮಂದವಾದ ಗಾಳಿಗೆ ಮೃದುವಾಗಿ ಕಂಪಿಸುವಂತೆ) ಅತ್ಯಂತ ಭಾವಪೂರ್ಣವಾಗಿ ಮೂಡಿಬಂತು. ಮಂದಮಾರುತ ಎಂಬ ಶಬ್ದಕ್ಕೂ ಮಂದ್ರ ಸ್ಥಾಯಿಯಲ್ಲಿ ಮೂಡಿದ ಮಲಯಮಾರುತ ಎಂಬ ರಾಗಕ್ಕೂ ಅಮ್ಮಣ್ಣಾಯರು ಕೊಟ್ಟ

ಶಕ್ತಿ ಮೂರ್ತ ಸ್ವರೂಪ ತಾಳಿದ್ದು ದೀಪಕ್‌ರಾವ್ ಪೇಜಾವರರ ಅಭಿನಯದಲ್ಲಿ. ಇದು ಸಣ್ಣ ಸಂಗತಿಯಲ್ಲ. ರಂಗ ಪ್ರಕ್ರಿಯೆಯನ್ನು ಗಮನವಿಟ್ಟು ನೋಡಿದರೆ ಇಂತಹ ಅನೇಕ ಸಂಗತಿಗಳು ನಮ್ಮ ಕಣ್ಣ ಮುಂದೆ ನಡೆಯುತ್ತವೆ. ಈ ಹಾಡಿಗೆ ಪೇಜಾವರರು ಸಣ್ಣ ಚಾಲಿತ ಕುಣಿತವನ್ನೂ ಕುಣಿದಿದ್ದರು. ಅದು ಹೇಗಿತ್ತೆಂದರೆ–ಮಂದ ಮಾರುತಕ್ಕೆ ಸಣ್ಣಗೆ ತೊಯ್ದಾಡುವ ತರಗೆಲೆಯಂತೆ ಪುಟ್ಟ ಪುಟ್ಟ ಹೆಜ್ಜೆಗಾರಿಕೆಯ ಚುಟುಕಾದ–ಅಭಿನಯ ಪ್ರಧಾನವಾದ– ಚಾಲು ಕುಣಿತ.

ನಮ್ಮ ಸುತ್ತಲಿನ ಪ್ರಕೃತಿಯೇ ಆ ಕ್ಷಣದ ರಸ ಪ್ರತಿಪಾದನೆಗೆ, ರಸ ರಸಗ್ರಹಣಕ್ಕೆ, ಧ್ವನಿಯ ಅನುಸಂಧಾನಕ್ಕೆ ಪ್ರಧಾನ ಕಾರಣವಾದರೂ, ಕಲಾವಿದನ ಮೂಲಕ ರಸದ ಹೊರ ಹೊಮ್ಮುವಿಕೆ ಇದೆಯಲ್ಲಾ ಅದು ಕಲಾವಿದನಿಂದ ಕಲಾವಿದನಿಗೆ ಭಿನ್ನತರವಾಗಿ ಇರುತ್ತದೆ. ಬಣ್ಣ ಬಣ್ಣದ ಗಾಜಿನಿಂದ ಆಯಾಯಾ ಬಣ್ಣದ ಬೆಳಕು ಹೊಮ್ಮುವಂತೆ–ಬೆಳಕು ಒಂದೇ ಆದರೂ. ಇಲ್ಲಿ ಮುಖ್ಯವಾಗುವುದು ಕಲಾವಿದನ ವಸ್ತುಧಾರಣ ಸಾಮರ್ಥ್ಯ, ಅನುಸಂಧಾನದ ಮಟ್ಟ ಇತ್ಯಾದಿ. ಕಲಾವಿದನ ಬಾಲ್ಯದ ಅನುಭವಗಳು, ಕಷ್ಟ ಸಹಿಷ್ಣುತೆ, ಸಂತೋಷಪಡುವ ಸಾಮರ್ಥ್ಯ, ದುಃಖವನ್ನು ಭರಿಸುವ ಸಾಮರ್ಥ್ಯ ಇತ್ಯಾದಿ ಇವೆಲ್ಲವೂ ರಸ ಪ್ರತಿಪಾದನೆಯಲ್ಲಿ ಪರಿಗಣನೆಗೆ ಬರುತ್ತವೆ. ಹೀಗೆ ರೂಪುಗೊಂಡ ವ್ಯಕ್ತಿತ್ವವೇ ಕಲೆಗೆ ಬಣ್ಣವನ್ನೂ ಕೊಟ್ಟು ಕಲಾವಿದನ ಮೂಲಕ ಬಿಂಬಿಸಲ್ಪಡುತ್ತದೆ. ಸೂಕ್ಷ್ಮ ಒಳನೋಟದ ಕಲಾವಿದನ ಮೂಲಕವೇ ಜಡ ಚೇತನ ಪ್ರಕೃತಿಯು ಕಲೆಯ ರೂಪದಲ್ಲಿ ಹೊರಬರುವುದು. ಒಳ್ಳೆಯ ಕತೆಯ ರೀತಿಯ ಬಳುಕನ್ನು ನಾಟ್ಯದಲ್ಲಿ ಕಂಡಂತೆ, ನದಿಯ ಅಥವಾ ತೆರೆಗಳ ಹರಿವು ಸಂಗೀತದ ಆಲಾಪನೆಯಲ್ಲಿ ಪರಿಭಾವಿಸಿದಂತೆ. ಭರತನ ನಾಟ್ಯಶಾಸ್ತ್ರದಲ್ಲಂದಂತೆ ಲೋಕಾನುಕೃತಿಯ ನೆನಪಾಗುತ್ತದೆ.

ಮನವೆಂಬುದು
ಗಡಿಯಾರದ
ಲೋಲಕದಂತೆ ಸದಾ ಚಲಿತ
ಎಲ್ಲ ಕಾಲಗಳಲ್ಲೂ
ಯಾವುದೋ ಒಂದು
ಸ್ಥಿತಿಯಲ್ಲಿರುವುದಂತೂ ನಿಶ್ಚಿತ!

ಕನ್ನಡ ನಿಘಂಟುಗಳ ವರ್ಗೀಕರಣದತ್ತ

ಡಾ. ಬಿ.ವಿ. ಮಹೀದಾಸ
ನಿವೃತ್ತ ಸಹನಿರ್ದೇಶಕರು ಶಿಕ್ಷಣ ಇಲಾಖೆ

ಯಾವುದೇ ಶಾಸ್ತ್ರದಲ್ಲಿ ವಸ್ತುವಿಸ್ತಾರವಾದಂತೆ ವರ್ಗೀಕರಣವು ಒಂದು ಅನಿವಾರ್ಯ ಪ್ರಕ್ರಿಯೆ. ಭಾಷೆಗೆ ಸಂಬಂಧಿಸಿದಂತೆ ವಾಕ್ಯಗಳ ವರ್ಗೀಕರಣ, ಪದ–ಪ್ರತ್ಯಯಗಳ ವರ್ಗೀಕರಣ, ಇತ್ಯಾದಿ ಎಷ್ಟೋ ಅಂಶಗಳು ಮೊದಲಿನಿಂದಲೇ ಖ್ಯಾತವಾಗಿವೆ. ಸಾಹಿತ್ಯ ಪ್ರಕಾರಗಳ ವರ್ಗೀಕರಣ, ಛಂದಸ್ಸುಗಳ ವರ್ಗೀಕರಣ, ಗಣಗಳ ವರ್ಗೀಕರಣ–ಹೀಗೆ ಅಧ್ಯಯನಾನುಕೂಲೀ ವರ್ಗೀಕರಣಗಳು ಎಲ್ಲ ಶಾಸ್ತ್ರಗಳಲ್ಲೂ ಇವೆ. ನಿಘಂಟು ಶಾಸ್ತ್ರವೂ ಇದಕ್ಕೆ ಹೊರತಲ್ಲ. ವ್ಯಾಕರಣಗಳಲ್ಲಿ ಕಂಡುಬರುವ ಪದ–ಪ್ರತ್ಯಯ ವರ್ಗೀಕರಣಗಳನ್ನು ನಿಘಂಟುಗಳಲ್ಲಿ ಧಾರಾಳವಾಗಿ ಬಳಸಿಕೊಳ್ಳಲಾಗಿದೆ. ನಿಘಂಟುಗಳ ಸಂಖ್ಯೆ ಬೆಳೆದಂತೆ ಮತ್ತು ವೈವಿಧ್ಯ ಹೆಚ್ಚಾದಂತೆ ನಿಘಂಟುಗಳ ವರ್ಗೀಕರಣ ಮತ್ತು ಪ್ರತಿಯೊಂದು ವಿಧದ ಲಕ್ಷಣನಿರ್ವಚನ ಅಗತ್ಯ ಮತ್ತು ಮುಖ್ಯವಾಗುತ್ತದೆ. ಪ್ರಪಂಚದ ಇತರೆಡೆಗಳಲ್ಲಿ ಪ್ರಥಮ ನಿಘಂಟುಗಳ ರಚನೆಯಾದ ಕಾಲಕ್ಕೂ ಕನ್ನಡದಲ್ಲಿ ಅವು ಜನ್ಮ ತಳೆದ ಕಾಲಕ್ಕೂ ಅಜಗಜಾಂತರವಿದೆ. ಚೀಣೀಯರು ಮತ್ತು ಸುಮೇರಿಯನ್ನರಲ್ಲಿ ಕ್ರಿ.ಪೂ. ಶತಮಾನಗಳಷ್ಟು ಪ್ರಾಚೀನ ಕಾಲದಲ್ಲಿಯೇ ನಿಘಂಟುಗಳ ರಚನೆಯಾಗಿದ್ದಿತೆಂದು ಉಲ್ಲೇಖಗಳಿವೆ. ಇಂಗ್ಲೀಷಿನಲ್ಲಿ ಕ್ರಿ.ಶ.ಹದಿನೈದನೆಯ ಶತನಾನದಲ್ಲೇ ಪ್ರಥಮ ನಿಘಂಟುಗಳು ರಚನೆಯಾಗಿದ್ದವು (Dictionary in Wikipaedia). ಕನ್ನಡದಲ್ಲಿ ನಿಘಂಟು ಎಂಬ ನಾಮಮಾತ್ರಕ್ಕೆ ಅರ್ಹವಾದ ಕೃತಿಗಳು ಹತ್ತನೆಯ ಶತಮಾನದವರೆಗೆ ರಚನೆಯಾಗಲಿಲ್ಲ. ಇಲ್ಲಿಂದ ಮುಂದಿನ ಬೆಳವಣಿಗೆಯಲ್ಲಿ ಐವತ್ತಕ್ಕೂ ಹೆಚ್ಚು ಸಂಖ್ಯೆಯ ಕನ್ನಡ ನಿಘಂಟುಗಳು ಬಂದಿವೆ, ವೈವಿಧ್ಯವೂ ಉಂಟಾಗಿದೆ. ಅವುಗಳಲ್ಲಿ ಹಲವು ಬಗೆಯವು ಇವೆಯಾದರೂ ಪ್ರತಿಯೊಂದು ವಿಧದಲ್ಲಿ ಕೃತಿಗಳ ಸಂಖ್ಯೆ ಗಣನೀಯವಾಗಿಲ್ಲ; ಕೆಲವು ವಿಭಾಗಗಳಲ್ಲಿ ಒಂದೊಂದು ಮಾತ್ರ ಇವೆ. ವ್ಯಕ್ತಿಗೆ ತನಗೊಂದು ಅರ್ಥಸಂಬಂಧೀ ಜ್ಞಾನದ ಕೊರತೆಯುಂಟಾದಾಗ ತಾನು ಆರಿಸಿಕೊಳ್ಳಬೇಕಾದ ನಿಘಂಟು ಯಾವುದು ಎಂಬದನ್ನು ನಿರ್ಧರಿಸುವುದಕ್ಕಾಗಿ ವರ್ಗೀಕರಣದ ಅವಶ್ಯಕತೆ (ಸ್ವಾನಪೋಲ್: ಪು.44) ಎಂಬ ಅಭಿಪ್ರಾಯವಿದ್ದು ಇದು ವರ್ಗೀಕರಣಪೂರ್ವದಲ್ಲಿ ಗಣನೀಯ ಸಂಖ್ಯೆಯ ನಿಘಂಟುಗಳಿರುವುದನ್ನು ಅಪೇಕ್ಷಿಸುತ್ತದೆ. ಈ ದೃಷ್ಟಿಯಿಂದ ಕನ್ನಡದಲ್ಲಿ ನಿಘಂಟು ವರ್ಗೀಕರಣಕ್ಕೆ ಕಾಲ ಪಕ್ವವಾಗಿಲ್ಲ ಎನಿಸಬಹುದಾದರೂ ನಿಘಂಟು ಶಾಸ್ತ್ರದಲ್ಲಿ ವಿಶ್ವದ ಇತರೆಡೆ ಆಗಿರುವ ಬೆಳವಣಿಗೆಗಳ ಜೊತೆ ಸಮನ್ವಯಗೊಳಿಸಿ ನಮ್ಮ ಭಾಷೆಯಲ್ಲಿ ಶಾಸ್ತ್ರವನ್ನು ಬೆಳೆಸುವ ದೃಷ್ಟಿಯಿಂದ ಇದು ಅನಿವಾರ್ಯ. ಇಂತಹ ಕಾರ್ಯದಿಂದ ಒಟ್ಟಾರೆ ನಿಘಂಟು ಶಾಸ್ತ್ರದಲ್ಲಿ ಕನ್ನಡದ ಸ್ಥಾನ ಎಲ್ಲಿದೆ ಎಂಬುದೂ ಇದರಿಂದ ಕನ್ನಡದಲ್ಲಿ ಬೆಳೆಸಬೇಕಾದ ಕ್ಷೇತ್ರಗಳಾವುವು ಎಂಬುದೂ ಸ್ಪಷ್ಟವಾಗುತ್ತವೆ; ವಿವಿಧ ಕ್ಷೇತ್ರಗಳಲ್ಲಿ ಕನ್ನಡದ ಪ್ರಯೋಗಗಳು ಅಧಿಕೃತಗೊಳ್ಳುತ್ತವೆ ಮತ್ತು ಸ್ಥಿರವಾಗುತ್ತವೆ. ನಿರ್ದಿಷ್ಟ ಸಂದರ್ಭವೊಂದರಲ್ಲಿ ಯಾವ ನಿಘಂಟನ್ನು ಆರಿಸಿಕೊಳ್ಳ ಬಹುದೆಂಬ ಬಗ್ಗೆಯೂ ಹೊಳಹುಗಳು ಸಿಗುತ್ತವೆ.

ವಿಶ್ವಮಟ್ಟದಲ್ಲಿ ಕೂಡ ನಿಘಂಟು–ವರ್ಗೀಕರಣ ಪದ್ಧತಿಯು ಸರ್ವಸಮ್ಮತವಾಗಿ ಮತ್ತು ಏಕಪ್ರಕಾರವಾಗಿ ಬಳಕೆಯಾಗುತ್ತಿಲ್ಲ. ನಿಘಂಟುವರ್ಗೀಕರಣಕ್ಕಾಗಿ ಹಲವು ಮಾನದಂಡಗಳನ್ನು ಬಳಸಲಾಗುತ್ತಿದ್ದು ವಿಭಿನ್ನ ಜಾಡಿನಲ್ಲಿ ವರ್ಗಗಳನ್ನು ನಿರ್ವಚಿಸಲಾಗುತ್ತಿದೆ. ಹಲವರು ಕಾಲಾನುಕ್ರಮ ವರ್ಗೀಕರಣ ಮಾದರಿಯನ್ನು ಅನುಸರಿಸಿ ಮೂರು ವರ್ಗಗಳನ್ನು ಹೀಗೆ ವಿವರಿಸುತ್ತಾರೆ: (1) ನಿಘಂಟು ಪೂರ್ವಯುಗ (2) ಮೊದಲ ನಿಘಂಟುಗಳ ಯುಗ ಮತ್ತು (3) ನಿಘಂಟುಗಳ ಅಭಿವೃದ್ಧಿಯುಗ. ಅಸ್ಪಷ್ಟವೆನಿಸುವ ಪದಗಳಿಗೆ ಅರ್ಥಸ್ಪಷ್ಟನೆಗಾಗಿ ಚಿಕ್ಕ ಕೋಶಿಕೆಗಳು ಪ್ರಥಮ ಅವಧಿಯಲ್ಲಿ ಹುಟ್ಟಿಕೊಂಡವು. ಎರಡನೆಯ ಅವಧಿಯಲ್ಲಿ ಸಾಹಿತ್ಯಿಕ ಭಾಷೆಯ ಅಧ್ಯಯನಕ್ಕೆ ಪೂರಕವಾದ ನಿಘಂಟುಗಳ ರಚನೆಯಾಯಿತು. ಹದಿನೆಂಟು ಹತ್ತೊಂಬತ್ತನೆಯ ಶತಮಾನಗಳಲ್ಲಿ ಈ ಪ್ರಕ್ರಿಯೆ ನಡೆಯಿತು. ಮೂರನೆಯ ಅವಧಿಯಲ್ಲಿ ವೈಜ್ಞಾನಿಕ ರೀತಿಯಲ್ಲಿ ನಿಘಂಟುಗಳ ರಚನೆ ಪ್ರಾರಂಭವಾಯಿತು. ಭಾಷೆಯ ಪದಗಳನ್ನು ಸ್ಥಿರಗೊಳಿಸಿ ಭಾಷಾಸಂಸ್ಕೃತಿಯ ಬೆಳವಣಿಗೆಯನ್ನು ಸಾಧಿಸುವುದು ಈ ಪ್ರಕ್ರಿಯೆಯ ಒಂದು ಕಾರ್ಯ. ಹತ್ತೊಂತ್ತು ಮತ್ತು ಇಪ್ಪತ್ತನೆಯ ಶತಮಾನದ ಆದಿ ಭಾಗ ನಿಘಂಟುಗಳ ಈ ಮಹತ್ವದ ಬೆಳವಣಿಗೆಯ ತಿರುಳುಕಾಲ. ಅನಂತರ ಇಪ್ಪತ್ತನೆಯ ಶತಮಾನದಲ್ಲಿ ಚಾರಿತ್ರಿಕವಾಗಿ ಪದಗಳ ಬೆಳವಣಿಗೆ, ಪದಗಳ ನಿಷ್ಪತ್ತಿ, ಇತರ ಭಾಷಾ ಪದಗಳೊಂದಿಗೆ ಆಯಾ ಪದದ ಸಂಬಂಧ ಇಂತಹ ಆಯಾಮಗಳನ್ನು ಒಳಗೊಳಿಸಿಕೊಂಡು ಭಾಷಿಕ ಸಂಶೋಧನೆಗೆ ಸಹಾಯಕ ನಿಘಂಟುಗಳ ರಚನೆ ಪ್ರಸ್ತುತವಾಯಿತು (http://encyclopedia2.thefreedictionary.com/Metalexicography).

ಮೊದಲನೆಯ ಕಾಲಘಟ್ಟದಲ್ಲಿ ನಿಘಂಟುಗಳ ಸ್ವರೂಪವು ಈಗಿನಷ್ಟು ಸ್ಪಷ್ಟವಾಗಿರಲಿಲ್ಲ. ಪ್ರಾಚೀನ ಕಾವ್ಯೇತಿಹಾಸಗಳನ್ನು ಓದುವಾಗ ಸಾಲುಗಳ ನಡುವೆ ಬರೆದುಕೊಂಡ ಪದಗಳ ಅರ್ಥಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಲು ಪ್ರಾರಭಿಸಿದ್ದೇ ಮೊದಲ ನಿಘಂಟುಗಳಾದುವೆಂದು ಹೇಳುತ್ತಾರೆ (http://grammar.about.com/od/il/g/lexicogterm.htm). ಇಂಗ್ಲಿಷ್ ಮತ್ತು ಲ್ಯಾಟಿನ್ ನಿಘಂಟುಗಳಿಗೆ ಸಂಬಂಧಿಸಿ ಹೇಳುವ ಈ ಮಾತನ್ನು ಕನ್ನಡಕ್ಕೂ ಅನ್ವಯಿಸುವುದು ಉಚಿತವಲ್ಲವೆಂದು ತೋರುತ್ತದೆ. ಇಂತಹ ಪಾದಮಧ್ಯ ಪದಾರ್ಥ ಕೋಶಗಳು ಕನ್ನಡದಲ್ಲಿದ್ದುದಕ್ಕೆ ಸಾಕ್ಷ್ಯಾಧಾರಗಳೇನೂ ಇಲ್ಲದಿದ್ದು ಇಂತಹ ಪದ್ಧತಿ ಇಲ್ಲಿ ಇತ್ತೋ ಇಲ್ಲವೋ ಸಂದೇಹಾಸ್ಪದ. ಏಕೆಂದರೆ ಹಸ್ತಪ್ರತಿಗಳು ತಾಡಪತ್ರದವುಗಳಾಗಿದ್ದು ಸಾಲುಗಳ ಮಧ್ಯೆ ಕಂಟದಿಂದ ಕೊರೆಯುವ ಬರವಣಿಗೆ ಸುಲಭವಾಗಿರಲಿಲ್ಲ. ಸಾಲುಗಳ ನಡುವಣ ಅರ್ಥಕೋಶಗಳು ಕ್ರಿಸ್ತಪೂರ್ವ ಮೊದಲನೆಯ ಸಹಸ್ರಮಾನದಲ್ಲಿ ವೇದಗಳಿಗೆ ಇದ್ದುವೆಂಬ ಅಭಿಪ್ರಾಯವಿದೆಯಾದರೂ (ಮೇಲಿನದೇ ಅಂತರ್ಜಾಲತಾಣ) ವೇದಗಳದು ಕರ್ಣಾಕರ್ಣಿ ಸಂಪ್ರದಾಯವಾಗಿದ್ದು ಇಂತಹ ಪದಾರ್ಥ ಪಟ್ಟಿಗಳಿದ್ದವೆಂಬುದು ವಿವಾದಾತೀತವಲ್ಲ.

ನಿಘಂಟುಗಳ ಯುಗವೆಂಬ ಎರಡನೆಯ ಕಾಲಘಟ್ಟದಲ್ಲಿ ಸಾಹಿತ್ಯದ ಅಧ್ಯಯನಕ್ಕೆ ಅನುಕೂಲವಾಗುವಂತಹ ಸಂಕ್ಷಿಪ್ತ ಏಕಭಾಷಾ ನಿಘಂಟುಗಳ ರಚನೆಯಾದುವೆಂಬುದು ಕನ್ನಡದಲ್ಲಿಯೂ ಸ್ಪಷ್ಟವಾಗಿ ಕಂಡುಬರುವ ವಿದ್ಯಮಾನ. ಸಾಮಾನ್ಯವಾಗಿ ಹದಿನೆಂಟನೆಯ ಶತಮಾನದವರೆಗೆ ಎಂದು ಗುರುತಿಸಲ್ಪಡುವ ಈ ಘಟ್ಟ ಕನ್ನಡದಲ್ಲಿ ಹತ್ತೊಂಬತ್ತನೆಯ ಶತಮಾನದವರೆಗೂ ವಿಸ್ತೃತವಾಗಿತ್ತು. ಇಂತಹ ನಿಘಂಟುಗಳಲ್ಲಿ ಮೊದಲನೆಯದು ಖ್ಯಾತ ಕವಿ ರನ್ನನಿಂದ ರಚಿತವಾದ ರನ್ನಕಂದ. ಇದು ಕಂದರೂಪದಲ್ಲಿದೆ. ಅಪೂರ್ಣವಾಗಿದ್ದು ಉಪಲಬ್ಧವಿರುವಷ್ಟು ಭಾಗದಲ್ಲಿ ಒಂದು ನೂರ ಇಪ್ಪತ್ತಮೂರು ಪದಗಳಿವೆ. ಇಂತಹ

ನಿಘಂಟುಗಳಲ್ಲಿ ಕೊನೆಯದು ಕ್ರಿ.ಶ.1810ರಲ್ಲಿ ರಚಿತವಾದ ಶಬ್ದಾರ್ಥಮಂಜರಿ (ಸೀತಾರಾಮಯ್ಯ, 1975:ಪು.293). ಇಂತಹ ನಿಘಂಟುಗಳ ಸಂಖ್ಯೆ ಇಪ್ಪತ್ತರಷ್ಟಿದ್ದು ಕಾವ್ಯಗಳನ್ನು ಕಲಿಯುವವರು ಇವುಗಳನ್ನು ಉರು ಹಾಕಿ ಪಾಠ ಮಾಡುತ್ತಾರೆ ಎಂಬ ಗಂಗಾಧರೇಶ್ವರ ಮಡಿವಾಳೇಶ್ವರ ತುರಮುರಿಯವರ ಮಾತು (ಧಾರವಾಡಕರ, 1975: 204–5 ಇಲ್ಲಿ ಉದ್ಧೃತ) ಸರಿಯಾಗಿದೆ. ಸಂಸ್ಕೃತದಲ್ಲಿ ಕಂಡುಬರುವ ಅಮರಕೋಶದಂತಹ ವ್ಯಾಪಕ ಮತ್ತು ಸಮಗ್ರ ರೀತಿಯ ನಿಘಂಟುಗಳು ಕನ್ನಡದಲ್ಲಿ ರಚನೆಯಾಗಲಿಲ್ಲವೆಂಬದು ವಿಪರ್ಯಾಸವೇ ಸರಿ. ಪಾಶ್ಚಾತ್ಯ ಜ್ಞಾನದ ಪ್ರಭಾವದನಂತರವೇ ವೈಜ್ಞಾನಿಕ ರೀತಿಯ ನಿಘಂಟುಗಳ ರಚನೆ ಕನ್ನಡದಲ್ಲಿ ಮೊದಲಾದುದು. ಈ ಮಧ್ಯದಲ್ಲಿ ಸುಧಾರಿತ ನಿಘಂಟುಗಳಲ್ಲಿ ಕಂಡುಬರುವ ಪದಪಟ್ಟಿಗಳ ತರಹದ ತುಂಬ ಪರಿಮಿತ ಸಂಖ್ಯೆಯ ಪದಗಳನ್ನೊಳಗೊಂಡ ಸಣ್ಣಪದಪಟ್ಟಿಗಳ ರೂಪ ಶಬ್ದಮಣಿದರ್ಪಣ (ಕೇಶಿರಾಜ,1260)ದಲ್ಲಿ ಕಾಣಸಿಗುವುದು. ಉಪಯೋಗಿಸಬೇಕಾದ ಪದಗಳನ್ನು ತೋರಿಸುವ ಒಂದು ಪಟ್ಟಿ, ಧಾತುಗಳ ಒಂದು ಪಟ್ಟಿ ಮತ್ತು ಪದಾರ್ಥ ಚಿಂತಾಮಣಿ ಎಂಬ ಕ್ಲಿಷ್ಟಪದಗಳ ಅರ್ಥಗಳನ್ನ ಹೇಳುವುದಕ್ಕಾಗಿಯೇ ಇರುವ ಒಂದು ಪಟ್ಟಿ ಹೀಗೆ ಪದಪಟ್ಟಿಗಳನ್ನು ಸಿದ್ಧಪಡಿಸುವ ಒಂದು ಅತಿಚಿಕ್ಕ ಪ್ರಯತ್ನವನ್ನು ಇಲ್ಲಿ ಕಾಣಬಹುದು. ಶಬ್ದಮಣಿದರ್ಪಣದಲ್ಲಿ ಧಾತುಗಳ ಪಟ್ಟಿಯನ್ನು ಅಂತ್ಯಾಕ್ಷರ ಅಕಾರಾದಿಯಾಗಿ ಜೋಡಿಸಲಾಗಿದೆ. ಈ ಮೂರೂ ಪಟ್ಟಿಗಳಿಂದ ಒಟ್ಟು 1441 ಪದಗಳು ಮಾತ್ರ ಇಲ್ಲಿದ್ದು ಧಾತುಗಳಿಗೆ ಸಂಸ್ಕೃತ ಭಾಷೆಯಲ್ಲಿ ಅರ್ಥವಿದೆ; ಉಳಿದ ಪದಪಟ್ಟಿಗಳಲ್ಲಿರುವ ಪದಗಳಿಗೆ ಕನ್ನಡ ಪರ್ಯಾಯ ಪದಗಳನ್ನೇ ಅರ್ಥವನ್ನಾಗಿ ನೀಡಿದೆ. ಒಟ್ಟಾರೆಯಾಗಿ ಈ ನಿಘಂಟುಗಳಲ್ಲಿ ನಮೂದುಗಳ ವ್ಯಾಕರಣರೂಪದಲ್ಲಾಗಲೀ ಅರ್ಥನಿರೂಪಣೆಗಾಗಿ ಕೊಟ್ಟಿರುವ ಪರ್ಯಾಯ ಪದಗಳ ವ್ಯಾಕರಣರೂಪದಲ್ಲಾಗಲೀ ಏಕಸೂತ್ರತೆ ಇಲ್ಲ. ಪದಗಳನ್ನು ವ್ಯವಸ್ಥಿತವಾಗಿ ಜೋಡಿಸುವುದು ಮತ್ತು ಅವುಗಳಿಗೆ ಅರ್ಥ ಹೇಳುವುದು ಎಂಬ ತತ್ವ ಮತ್ತು ಭಾಷಾರೂಪ ಗಳನ್ನು ಶುದ್ಧವಾಗಿ ಉಳಿಸಿಕೊಳ್ಳ ಬೇಕೆಂಬ ಕಾಳಜಿ ಇಲ್ಲಿ ಕಾಣುತ್ತವೆ. ಹೀಗೆ ನಿಘಂಟು ಎಂಬ ಪರಿಕಲ್ಪನೆ ಸ್ಥೂಲವಾಗಿ ರೂಪಗೊಂಡು ಒಂದು ಸಂದಿಗ್ಧ ಸ್ವರೂಪವನ್ನು ಪಡೆದುಕೊಂಡುದು ಈ ಕಾಲದ ವೈಶಿಷ್ಟ್ಯ.

ಕನ್ನಡದಲ್ಲಿ ಇಲ್ಲಿಂದ ಮುಂದಿನ ಕಾಲವನ್ನೆಲ್ಲ ನಿಘಂಟುಗಳ ಅಭಿವೃದ್ಧಿಯುಗವೆಂದು ಕರೆಯಬಹುದು. ಅಂದರೆ ಹತ್ತೊಂಬತ್ತನೆಯ ಶತಮಾನ ಮತ್ತು ಅಲ್ಲಿಂದ ಮುಂದಿನ ಕಾಲದಲ್ಲಿ ನಿಘಂಟುಗಳ ಸ್ವರೂಪ, ವಿಸ್ತಾರ, ವೈವಿಧ್ಯ, ಉಪಯೋಗ–ಇವುಗಳಲ್ಲೆಲ್ಲ ಹೊಸತನ ಉಂಟಾಯಿತು ಮತ್ತು ಬೆಳವಣಿಗೆಗಳಾದುವು. ನಿಜವಾದ ಅರ್ಥದ ನಿಘಂಟುಗಳು ಈ ಕಾಲದಲ್ಲಿ ಮತ್ತು ಅಲ್ಲಿಂದ ಮುಂದೆ ರಚನೆಯಾದವು. ಹತ್ತೊಂಬತ್ತನೆಯ ಶತಮಾನದಲ್ಲೇ ಈ ಬೆಳವಣಿಗೆಗಳ ಮಹತ್ತಾದ ಪರಿಚಯ ಕನ್ನಡಿಗರಿಗೆ ಆಯಿತೆಂಬುದು ವಿಶೇಷ. ಕಲಿಯುವವರ ಹೊಸ ವರ್ಗ ಸೃಷ್ಟಿಯಾದುದರಿಂದ ಹೊಸ ರೀತಯ ನಿಘಂಟುಗಳು ಅಗತ್ಯವಾದುವು. ಕನ್ನಡ–ಇಂಗ್ಲಿಷ್, ಇಂಗ್ಲಿಷ್–ಕನ್ನಡ, ಲ್ಯಾಟಿನ್–ಕನ್ನಡ ಮತ್ತು ಕನ್ನಡ–ಲ್ಯಾಟಿನ್ ನಿಘಂಟುಗಳ ರಚನೆಯಾಯಿತು. ಹೀಗೆ ಹತ್ತೊಂಬತ್ತನೆಯ ಶತಮಾನವು ಮುಖ್ಯವಾಗಿ ದ್ವಿಭಾಷಾ ನಿಘಂಟುಗಳ ಯುಗ. ಈ ಯುಗವು ಯೂರೋಪು ಖಂಡದಲ್ಲಿ 15–16 ನೆಯ ಶತಮಾನಗಳಲ್ಲೇ ಪ್ರಾರಂಭವಾಗಿತ್ತು. ಕ್ರಿ.ಶ. 1445ರಲ್ಲಿ ವೆನಿಸ್ ನಗರದಲ್ಲಿ ಮುದ್ರಿತವಾದ ಇಟಾಲಿಯಾನೋ–ಟೆಡೆಸ್ಕೊ ಎಂಬ ಕೃತಿಯೇ ವಿಶ್ವದ ಪ್ರಥಮ ದ್ವಿಭಾಷಾ ನಿಘಂಟು ಎಂದು ಉಲ್ಲೇಖವಿದೆ (ಪೋಧಜೆಕ್ಕ: ಪು.7).

ನಿಘಂಟುಗಳ ವರ್ಗೀಕರಣವೆಂಬುದು ಪ್ರಾರಂಭವಾಗಬೇಕಾದ್ದು ಈ ಕಾಲದ ನಿಘಂಟುಗಳಿಂದ. ನಿಘಂಟುಗಳ ಸಂಖ್ಯಾ ಬಾಹುಳ್ಯ ಮತ್ತು ವೈವಿಧ್ಯಮಯ ಬೆಳವಣಿಗೆ ಕೂಡ ಇದೇ ಶತಮಾನದಲ್ಲಿ ಅಂಕುರಸಿ ಇಲ್ಲಿಂದ ಮುಂದುವರೆಯಿತು. ಹತ್ತೊಂಬತ್ತನೆಯ ಶತಮಾನದ ಈ ನಿಘಂಟುಗಳನ್ನು ಭಾಷಾಂತರಕ್ಕಾಗಿ ನಿಘಂಟುಗಳು ಎಂದು ವರ್ಗೀಕರಿಸ ಬಹುದೆಂದು ಮೇಲ್ನೋಟಕ್ಕೆ ಎನಿಸುತ್ತದೆ. ಇವುಗಳ ಮುಖ್ಯ ಉದ್ದೇಶವೇ ಬೈಬಲ್ ಮತ್ತಿತರ ಕ್ರೈಸ್ತ ಧಾರ್ಮಿಕ ಸಾಹಿತ್ಯವನ್ನು ಕನ್ನಡಕ್ಕೆ ಅನುವಾದಿಸಲು ವಾತಾವರಣವನ್ನು ಅಣಿಗೊಳಿಸುವುದು ಮತ್ತು ಅಗತ್ಯ ಪರಿಕರಗಳನ್ನು ಒದಗಿಸುವುದು. ಭಾಷಾಂತರವು ಸಂಸ್ಕೃತಿಯ ತಿಳಿವಳಿಕೆಯನ್ನು ಅನಿವಾರ್ಯವಾಗಿ ಬೇಡುತ್ತದೆ. ಆದ್ದರಿಂದಲೇ ಈ ನಿಘಂಟುಗಳು ಈ ನಾಡಿನ ಸಂಸ್ಕೃತಿಯನ್ನು ವಿದೇಶೀಯರಿಗೆ ಅರ್ಥೈಸುವ ಕಾರ್ಯವನ್ನೂ ಒಳಗೊಂಡಿವೆ. ರೀವ್ ನಿಘಂಟಿನಲ್ಲಿ mendicant, Himalaya ಇತ್ಯಾದಿ ಪದಗಳಿಗಿರುವ ದೀರ್ಘ ವಿವರಣೆಗಳು ಈ ಕಾರ್ಯವನ್ನೇ ಮಾಡುತ್ತಿವೆ. ಅವನ ಇನ್ನೊಂದು ಕೃತಿಯಾದ ಕನ್ನಡ-ಇಂಗ್ಲಿಷ್ ನಿಘಂಟೂ ಇದೇ ರೀತಿಯ ಕಾರ್ಯನಿರತ ಗ್ರಂಥ. ಸ್ಕೇರ್ಬಾನ ಪ್ರಕಾರ ಯಾವುದೇ ಎರಡು ಭಾಷೆಗಳ ಸಂದರ್ಭದಲ್ಲಿ ನಾಲ್ಕು ನಿಘಂಟುಗಳ ರಚನೆ ಅಗತ್ಯ. ಎರಡು ನಿಘಂಟುಗಳು ವಿದೇಶೀ ನಮೂದುಗಳಿಗೆ ಸ್ವಂತ ಭಾಷೆಯಲ್ಲಿ ವಿವರಣೆಗಳನ್ನು ನೀಡುವಂತಹವು ಮತ್ತು ಎರಡು ಭಾಷಾಂತರಕ್ಕೆ ಅನುಕೂಲವಾದಂತಹ ದ್ವಿಭಾಷಾ ನಿಘಂಟುಗಳು. ಎರಡೂ ರೀತಿಯ ನಿಘಂಟುಗಳು ಎರಡೂ ದಿಕ್ಕುಗಳಲ್ಲಿ ಸಕ್ರಿಯವಾಗಿರುತ್ತವೆ ಎಂಬುದನ್ನು ವಿದ್ವಾಂಸರು ಗುರುತಿಸಿದ್ದಾರೆ (ಪೋಧೆಜೆಕ್ಕ, ಪು.9). ಅಲ್ಲದೆ ಒಂದು ನಿಘಂಟು ಭಾಷಾಂತರಕ್ಕೆ ಮಾತ್ರ ಸಹಾಯ ಮಾಡುವಂತಹುದು ಎಂದಾಗಲೀ ಇನ್ನೊಂದು ನಿಘಂಟು ಪರ್ಯಾಯ ಪದಗಳನ್ನು ನೀಡುವಂತಹದಾದ್ದರಿಂದ ಪರಾಮರ್ಶನಯೋಗ್ಯವಾದುದು ಮಾತ್ರವೆಂದಾಗಲೀ ಹಣೆಪಟ್ಟಿ ಹಚ್ಚುವುದು ಸರಿಯಾಗಲಾರದು. ಇವೆಲ್ಲವುಗಳ ರೂಪ ಒಂದೇ ಆಗಿದ್ದು ಅವುಗಳನ್ನು ದ್ವಿಭಾಷಾ ನಿಘಂಟುಗಳೆಂದಷ್ಟೇ ಗುರುತಿಸುವುದು ಉಚಿತವಾಗ ಬಹುದು. ರೀವನ ನಿಘಂಟುಗಳು (1824 & 1832), ಗ್ಯಾರೆಟ್ಟನ ಎ.ಮ್ಯಾನುಯಲ್ ಆಫ್ ಇಂಗ್ಲಿಷ್ ಅಂಡ್ ಕ್ಯಾನರೀಸ್ ಡಿಕ್ಷನರಿ (1842), ರೀವನ ನಿಘಂಟುಗಳನ್ನು ವಿಸ್ತರಿಸಿ ಮತ್ತು ಸಂಕ್ಷೇಪಿಸಿ ಸ್ಯಾಂಡರ್ಸನ್ ತಯಾರಿಸಿದ ನಿಘಂಟುಗಳು(1858), ಬ್ಯೂಶರ್ ಕಿಟೆಲನ ನಿಘಂಟನ್ನಾಧರಿಸಿ ಹೊರತಂದ ಕನ್ನಡ-ಇಂಗ್ಲಿಷ್ ನಿಘಂಟು(1899)-ಇಂಥವೆಲ್ಲ ಇದೇ ವರ್ಗದವು. 1872ರಲ್ಲಿ ಜೀಗ್ಲರ್ ಇಂಗ್ಲಿಷ್-ಕನ್ನಡ ಸ್ಕೂಲ್ ಡಿಕ್ಷನರಿಯೊಂದನ್ನು ಸಂಪಾದಿಸಿದ್ದಾನೆ. ಅನಂತರ ಇದರ ಪರಿಷ್ಕೃತ ರೂಪಗಳೂ ಪ್ರಕಟಗೊಂಡಿವೆ. ಇದರಲ್ಲಿ ಪದಗಳನ್ನೂ ಅವುಗಳನ್ನೊಳಗೊಂಡ ನುಡಿಗುಚ್ಛಗಳನ್ನೂ ಹೇಗೆ ಪ್ರಯೋಗಿಸ ಬಹುದೆಂಬುದನ್ನು ಉದಾಹರಣೆ ನೀಡಿ ಸ್ಪಷ್ಟಪಡಿಸಿದ್ದಾನೆ. ಉದಾಹರಣೆಗೆ take liberty ಎಂದರೆ ಸ್ವಾತಂತ್ರ್ಯ ವಹಿಸು ಎಂದರ್ಥವಾಗುತ್ತದೆ; at liberty ಎಂದರೆ ಹಾಗೆ ಮಾಡುವ ಸ್ವಾತಂತ್ರ್ಯ ನಿನಗಿದೆ ಎಂದರ್ಥ-ಇಂತಹ ವಿಷಯಗಳನ್ನು ಇವನು liberty ಎಂಬ ಉಲ್ಲೇಖ ಪದದಡಿ ಸೇರಿಸಿದ್ದಾನೆ. ಈ ಗುಣದಿಂದ ಇದು ಭಾಷಾಂತರಕ್ಕೂ ಸಹಾಯಕವಾಗಿದೆ. ಬಳಕೆ ಮಾಡುವವರು ಯಾರು ಎಂಬುದು ಶೀರ್ಷಿಕೆಯಲ್ಲಿ ಸೇರಿದ್ದು ಶಾಲಾನಿಘಂಟು ಎಂದು ಇದನ್ನು ಹೆಸರಿಸಲಾಗಿದೆಯಾದರೂ ಅದೂ ಒಂದು ಪರಾಮರ್ಶನ ಯೋಗ್ಯ ದ್ವಿಭಾಷಾ ನಿಘಂಟೇ ಎಂಬುದು ಸ್ಪಷ್ಟವಿದೆ. ಇಂತಹ ನಿಘಂಟುಗಳನ್ನೆಲ್ಲ ಬೇರೊಂದು ವರ್ಗವನ್ನಾಗಿಸುವ ಅಗತ್ಯವಿರಲಾರದು. ಉಲ್ಲೇಖ ಭಾಷೆ ಮತ್ತು ಲಕ್ಷ್ಯಭಾಷೆಗಳು ಬೇರೆಬೇರೆಯಾಗಿರುವುದು,

ಅರ್ಥಗಳು ಲಕ್ಷ್ಯಭಾಷೆಯ ಸಮಾನಾರ್ಥಕಗಳಿಂದ ಮತ್ತು ವ್ಯಾಖ್ಯೆಗಳಿಂದ ನಿರೂಪಿತವಾಗಿರುವುದು ಮತ್ತು ಬಳಕೆದಾರರ ಆವಶ್ಯಕತೆಗಳಿಗನುಸಾರವಾಗಿ ಉದಾಹರಣೆಗಳು, ಪ್ರಯೋಗಗಳು ಅಥವ ಹೆಚ್ಚುವರಿ ವಿವರಗಳಿರುವುದು–ಇವು ಇಂತಹ ನಿಘಂಟುಗಳ ಲಕ್ಷಣಗಳು.

ಹತ್ತೊಂಬತ್ತನೆಯನೆಯ ಶತಮಾನದ ಅಂತ್ಯ ಮತ್ತು ಇಪ್ಪತ್ತನೆಯ ಶತಮಾನದ ಪ್ರಾರಂಭದಲ್ಲಿ ಕಿಟೆಲನ ಕನ್ನಡ–ಇಂಗ್ಲಿಷ್ ಡಿಕ್ಷನರಿ(1894) ಪ್ರಕಟವಾಯಿತು. ಇದು ಮೇಲುರೂಪದಲ್ಲಿ ದ್ವಿಭಾಷಾ ನಿಘಂಟಾಗಿದ್ದರೂ ಇದರ ಉದ್ದೇಶವು ಭಾಷಾಂತರವಾಗಲೀ ಸಾಮಾನ್ಯ ಓದುಗ ತನ್ನ ಓದುವಿಕೆಯ ಸಂದರ್ಭದಲ್ಲಿ ಅರ್ಥ ಸ್ಪಷ್ಟಗೊಳಿಸಿಕೊಳ್ಳಲು ತೊಡಗುವ ಪರಾಮರ್ಶೆಯಾಗಲೀ ಅಲ್ಲ; ಇದು ಅಷ್ಟು ಸರಳ ನಿಘಂಟಲ್ಲ. ಇದರ ಗಾತ್ರವೂ ಸಾಮಾನ್ಯವಾದ ಕೈಹಿಡಿಗಿಂತ ಹೆಚ್ಚೇ ಆಗಿದೆ. ಹಲವು ಹೊಸ ಆವಿಷ್ಕಾರಗಳನ್ನು ಇದರಲ್ಲಿ ಅಳವಡಿಸಲಾಗಿದೆ. ಶುದ್ಧ ಕನ್ನಡ ಪದಗಳನ್ನು ದಪ್ಪಕ್ಷರಗಳಲ್ಲೂ ಕನ್ನಡದಲ್ಲಿ ಬಳಕೆ ಇರುವ ಇತರ ಭಾಷಾ ಪದಗಳನ್ನು ಸಾಮಾನ್ಯ ಆಕಾರದಲ್ಲೂ ಮುದ್ರಿಸಿರುವುದರಿಂದ ದೇಶ್ಯ–ಅನ್ಯದೇಶ್ಯ ರೀತಿಯ ವರ್ಗೀಕರಣವೊಂದು ಪ್ರಾಥಮಿಕ ಸ್ವರೂಪದಲ್ಲಿಯೇ ಅಳವಟ್ಟಿದೆ. ಶಕಟರೇಫೆ, ರಳ ಮತ್ತು ಕುಳಗಳನ್ನು ಸರಿಯಾದ ಜಾಗದಲ್ಲಿ ಬಳಸಿರುವುದರಿಂದ ಕನ್ನಡ ಪದಗಳ ಸರಿಯಾದ ರೂಪವೂ ತಿಳಿಯುತ್ತದೆ. ವ್ಯಾಖ್ಯೆಯು ಉಲ್ಲೇಖಪದದ ಅರ್ಥವನ್ನು ಸ್ಪಷ್ಟಡಿಸಿದರೆ, ಪ್ರತಿಪದಕ್ಕೆ ಸೋದರೀ ಭಾಷಾ ಜ್ಞಾತಿಪದಗಳನ್ನು ನೀಡಿರುವುದರಿಂದ ಪದದ ನಿಷ್ಪತ್ತಿಯ ಬಗ್ಗೆ ಹೊಳಹುಗಳು ಸಿಗುತ್ತವೆ; ಕನ್ನಡದ ಒಂದು ಪದವನ್ನು ಇತರ ದ್ರಾವಿಡ ಭಾಷೆಗಳ ಸದೃಶ ಪದಗಳೊಂದಿಗೆ ತುಲನೆ ಮಾಡುವುದು ಸುಲಭವಾಗುತ್ತದೆ. ಇದಾದನಂತರ ಪದವು ಕನ್ನಡ ಕಾವ್ಯಗಳಲ್ಲಿ ಪ್ರಯೋಗವಾಗಿರುವ ವಾಕ್ಯಭಾಗಗಳನ್ನು ಚರಿತ್ರಾನುಕ್ರಮದಲ್ಲಿ ಉದಾಹರಿಸಿದ್ದು ಪದದ ಪ್ರಾಚೀನತೆ ಮತ್ತು ಅರ್ಥವಿಕಾಸದ ಪರಿ ಅರಿವಿಗೆ ಬರುತ್ತವೆ. ಹೀಗೆ ಇದು ಸಾಮಾನ್ಯ ಉಪಯೋಗಕ್ಕಾಗಿರುವ ನಿಘಂಟು ಮಾತ್ರವಲ್ಲ (Dictionary for General Use, DGU ಅಷ್ಟೇ ಅಲ್ಲ); ಮುಂದುವರೆದ ಭಾಷಾ ಶಾಸ್ತ್ರೀಯ ಅಧ್ಯಯನಗಳಿಗೆ ಪೂರಕವಾದ ನಿಘಂಟು. ಇದೊಂದು ನಿಘಂಟು ಶಾಸ್ತ್ರದ ಅದ್ಭುತ ಸಾಹಸವಾಗಿದ್ದು ಇದನ್ನು ಸಮಗ್ರ ಬಹೂದ್ದೇಶೀ ಅಧ್ಯಯನ ಪೂರಕ ನಿಘಂಟು ಎಂದು ವರ್ಗೀಕರಿಸುವುದು ಉಚಿತವಾಗಬಹುದು. ಈಚೆಗೆ ಪ್ರೊ.ಮರಿಯಪ್ಪ ಭಟ್ಟರು ಕಿಟೆಲನ ನಿಘಂಟನ್ನು ಪರಿಷ್ಕರಿಸಿ(1968) ವಿಸ್ತರಿಸಿದ್ದು ಇದೂ ಸಮಗ್ರ ಬಹೂದ್ದೇಶೀ ಅಧ್ಯಯನ ಪೂರಕ ನಿಘಂಟಾಗಿದೆ. ಇಪ್ಪತ್ತನೆಯ ಶತಮಾನದ ಅಂತ್ಯದಲ್ಲಿ ಕಿಟೆಲ್ ನಿಘಂಟಿಗೆ ಪೈಪೋಟಿ ನೀಡಬಲ್ಲ ಏಕಭಾಷಾ ನಿಘಂಟೊಂದನ್ನು ಕನ್ನಡ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ವಿದ್ವಾಂಸ ಮಂಡಳಿಯೊಂದು ರಚಿಸಿತು. ಇದು ಎಂಟು ಸಂಪುಟಗಳಲ್ಲಿ ಪ್ರಕಟವಾಗಿರುವ ಕನ್ನಡ ಸಾಹಿತ್ಯ ಪರಿಷತ್ತಿನ ನಿಘಂಟು(1995). ಕಿಟೆಲ್ ನಿಘಂಟಿನ ಎಲ್ಲ ಲಕ್ಷಣಗಳ ಜೊತೆಗೆ ಮತ್ತಷ್ಟು ಹೊಸ ಮಧ್ಯವರ್ತನಗಳನ್ನು ಇಲ್ಲಿ ಸೇರಿಸಿದ್ದು ನಿಘಂಟು ಭಾಷಿಕ ಸಂಶೋಧನೆಗಳಿಗೆ ಹೆಚ್ಚು ಉಪಯುಕ್ತವಾಗಿದೆ. ಈ ನಿಘಂಟನ್ನೂ ಇದೇ ಗುಂಪಿನಲ್ಲಿ ಸೇರಿಸಬೇಕು. ಕಿಟೆಲ್ ನಿಘಂಟು, ಅದರ ಮರಿಯಪ್ಪ ಭಟ್ಟರ ಪರಿಷ್ಕರಣ, ಪರಿಷತ್ ನಿಘಂಟು ಇಂತಹವು ಪದಗಳ ಇತಿಹಾಸ, ಪ್ರತಿಪದದ ರೂಪ ಮತ್ತು ಅರ್ಥಗಳಲ್ಲಾದ ಕಾಲಾನುಕಾಲ ವ್ಯತ್ಯಾಸ–ಇವುಗಳನ್ನು ತೋರಿಸುತ್ತವೆ. ಹಾಗೆಯೇ ಜ್ಞಾತಿಪದಗಳನ್ನು ನೀಡಿರುವುದರಿಂದ ಪದದ ಮೂಲಸ್ವರೂಪ ಮತ್ತು ಅದು ಭಾಷೆಯಿಂದ ಭಾಷೆಗೆ

ವ್ಯತ್ಯಾಸವಾಗುವ ಪರಿಯೂ ಒಟ್ಟಾಗಿ ತಿಳಿಯುತ್ತವೆ. ನಿಷ್ಪತ್ತಿ ಸೂಚನೆಯೂ ಅನೇಕ ವೇಳೆ ಜ್ಞಾತಿಪದಗಳೊಂದಿಗೆ ತುಲನೆಯಿಂದ ವ್ಯಕ್ತವಾಗುತ್ತದೆ ಎಂಬ ವಿದ್ವಾಂಸರ ಅಭಿಪ್ರಾಯ (ಸ್ವಾನಪೋಲ್: ಪು.53) ಈ ನಿಘಂಟಿಗೆ ಚೆನ್ನಾಗಿ ಅನ್ವಯಿಸುತ್ತದೆ.

ಈ ಎಲ್ಲ ನಿಘಂಟುಗಳೂ ಜುಗುಸ್ತ ಹೇಳುವಂತೆ ನಿಘಂಟು ರಚನೆಯಲ್ಲಿ ಪ್ರತಿ ಭಾಷೆಯಲ್ಲಿ ಸಾಮಾನ್ಯವಾಗಿ ಅನುಸರಿಸಬೇಕಾದ ಅನುಕ್ರಮವಾದ ಸಂಕ್ಷಿಪ್ತ–ಏಕಭಾಷಾ ನಿಘಂಟುಗಳು, ದ್ವಿಭಾಷಾ ನಿಘಂಟುಗಳು ಮತ್ತು ವಿಸ್ತೃತ ಸಮಗ್ರ ಏಕಭಾಷಾ ನಿಘಂಟುಗಳು ಎಂಬ ತತ್ವಕ್ಕೂ ಅನುಸಾರವಾಗಿಯೇ ಇವೆ (ಜುಗುಸ್ತ: ಪು.346). ಈ ಹಂತಗಳೇ ನಿಘಂಟುಗಳ ಒಂದು ಸ್ಥೂಲ ವರ್ಗೀಕರಣವೂ ಆಗಿವೆ. ಕನ್ನಡದಲ್ಲಿ ಪ್ರಥಮಾವಸ್ಥೆಯ ಸಂಕ್ಷಿಪ್ತ ಏಕಭಾಷಾ ನಿಘಂಟುಗಳ ಕಾಲದನಂತರ ಹತ್ತೊಂಬತ್ತನೆಯ ಶತಮಾನದಲ್ಲಿ ಎರಡನೆಯ ಹಂತ ಪ್ರಾರಂಭವಾಗಿದ್ದು ಈ ಹಂತದ ದ್ವಿಭಾಷಾ ನಿಘಂಟುಗಳಲ್ಲಿ ಕನ್ನಡ–ಇಂಗ್ಲಿಷ್ ಮತ್ತು ಇಂಗ್ಲಿಷ್–ಕನ್ನಡದವೇ ಹೆಚ್ಚು ಸಂಖ್ಯೆಯವು. ಮೂರನೆಯ ಹಂತದಲ್ಲಿ ಏಕಭಾಷಾ ನಿಘಂಟನ್ನು ಮಾತ್ರ ಜುಗುಸ್ತ ಹೇಳಿದ್ದರೂ ಪರಿಸ್ಥಿತಿಗನುಗುಣವಾಗಿ ಕನ್ನಡದಲ್ಲಿ ವ್ಯಾಪಕತೆ, ಸಮಗ್ರತೆ, ಚಾರಿತ್ರಿಕತೆ ಮತ್ತು ಸೋದರ ಭಾಷೆಗಳೊಂದಿಗೆ ತುಲನೆ–ಇವುಗಳನ್ನೊಳಗೊಂಡಂತೆ ಫರ್ಡಿನಂದ್ ಕಿಟೆಲ್ ರಚಿಸಿದ ಕನ್ನಡ–ಇಂಗ್ಲಿಷ್ ನಿಘಂಟೂ ಈ ಹಂತಕ್ಕೆ ಸೇರಿದ್ದೆಂದು ಹೇಳಬೇಕಾಗುತ್ತದೆ.

ದ್ವಿಭಾಷಾ ನಿಘಂಟುಗಳು ಮುಖ್ಯವಾಗಿ ವಿದೇಶೀ ಭಾಷೆಯ ಕಲಿಕೆಗೆ ಸಹಾಯಕವಾಗುವಂತಹವು. ಅಥವ ವ್ಯಕ್ತಿ ತನ್ನ ಮಾತೃಭಾಷೆಯಲ್ಲದ ಭಾಷೆಯನ್ನು ಕಲಿಯುವಾಗ, ಪಠ್ಯ ಅಥವ ಹೆಚ್ಚುವರಿ ಸಾಹಿತ್ಯವನ್ನು ಓದುವ ಸಂದರ್ಭಗಳಲ್ಲಿ ಎದುರಾಗುವ ಕ್ಲಿಷ್ಟ ಪದಗಳ ಅರ್ಥವನ್ನು ಹುಡುಕಿಕೊಳ್ಳಲು ಇಂತಹ ನಿಘಂಟುಗಳು ಉಪಯುಕ್ತವಾಗುತ್ತವೆ; ಸೂಕ್ತ ನುಡಿಗಟ್ಟುಗಳನ್ನು ಅರಿಯಲು ಮತ್ತು ಯಾವ ಪದದ ಜೊತೆಗೆ ಯಾವ ಪದ ಬಳಸಬೇಕೆಂಬುದನ್ನು ನಿರ್ಧರಿಸಲು ಇವುಗಳಿಂದ ಅನುಕೂಲವಾಗುತ್ತದೆ. ಏಕಭಾಷಾ ನಿಘಂಟುಗಳು ಹಾಗಲ್ಲದೆ ಅದೇ ಭಾಷೆಯನ್ನೇ ಮಾತನಾಡುವ ಸ್ಥಳೀಕರ ಉಪಯೋಗಕ್ಕಾಗಿ ಇದ್ದು ಪ್ರಾಚೀನ ಕಾವ್ಯಗಳ ಅಧ್ಯಯನದಲ್ಲಿ ಕ್ಲಿಷ್ಟ ಪದಗಳನ್ನು ಅರ್ಥ ಮಾಡಿಕೊಳ್ಳಲು ಅಥವ ಸಾಮಾನ್ಯ ಅಧ್ಯಯನದಲ್ಲಿ ಎದುರಾಗುವ ಅಪುರೂಪದ ಪದಗಳನ್ನು ಅರ್ಥೈಸಿಕೊಳ್ಳಲು ಪ್ರಯೋಜನಕ್ಕೆ ಬರುತ್ತದೆ. ಪದಗಳ ಸೂಕ್ತ ಸ್ಥಾನದ ಬಗ್ಗೆ ಸಂಶಯಗಳು ಬಂದಾಗಲೂ ಇಂತಹ ನಿಘಂಟುಗಳನ್ನು ಪರಾಮರ್ಶಿಸಬಹುದು. ಈ ನಿಘಂಟುಗಳಲ್ಲೆಲ್ಲ ಸಾಮಾನ್ಯವಾಗಿ ನಿರ್ದಿಷ್ಟ ಅರ್ಥಗಳನ್ನು ವ್ಯಾಖ್ಯೆಗಳಿಂದಾಗಲೀ, ಸಮಾನಾರ್ಥಕ ಪದಗಳಿಂದಾಗಲೀ ನೀಡುವುದು ಸಂಪ್ರದಾಯ.

ಇಲ್ಲಿಂದ ಮುಂದೆ ಅನೇಕ ದ್ವಿಭಾಷಾ ನಿಘಂಟುಗಳೂ ಏಕಭಾಷಾ ನಿಘಂಟುಗಳೂ ರಚನೆಯಾದುವಲ್ಲದೆ ಈ ಚೌಕಟ್ಟಿನಿಂದ ಹೊರಗೆ ಬೆಳವಣಿಗೆಗಳಾಗಿದ್ದು ಅವನ್ನು ಹಲವು ವರ್ಗಗಳಲ್ಲಿ ನೋಡುವ ಅಗತ್ಯವಿದೆ. ದ್ವಿಭಾಷಾ ನಿಘಂಟುಗಳಲ್ಲಿ ಸಂಸ್ಕೃತ, ಹಿಂದಿ, ತೆಲುಗು, ರಶ್ಯನ್, ಇಂಗ್ಲಿಷ್–ಹೀಗೆ ಹಲವು ಭಾಷೆಗಳ ಜೊತೆಗೆ ಸಂಬಂಧ ಕಲ್ಪಿಸುವಂತಹವು ಇವೆ. ಮೈಸೂರು ವಿಶ್ವವಿದ್ಯಾಲಯದ ಇಂಗ್ಲಿಷ್–ಕನ್ನಡ ನಿಘಂಟು(ಪ್ರಥಮ ಮದ್ರಣ:1947) ಬಿ. ವೆಂಕಟನಾರಣಪ್ಪ ಇವರ ಪ್ರಧಾನ ಸಂಪಾದಕತ್ವದಲ್ಲಿ ರಚನೆಯಾಗಿದ್ದು ಕಾಲದಿಂದ ಕಾಲಕ್ಕೆ ಪರಿಷ್ಕೃತಗೊಳ್ಳುತ್ತಿದೆ. ಇದೊಂದು ಪ್ರಮುಖ ಕೃತಿ. ಇಂಗ್ಲಿಷ್ ಪದಗಳಿಗೆ ಕನ್ನಡದ್ದೇ ಪದಗಳು ಎಂಬ ವಿಭಿನ್ನ ನಿಘಂಟನ್ನು ಡಿ.ಎನ್. ಶಂಕರಭಟ್ಟರು 2008ರಲ್ಲಿ ರಚಿಸಿದ್ದು

ಇದರಲ್ಲಿ ಸು.15,000 ಪದಗಳಷ್ಟು ಪ್ರಧಾನ ಉಲ್ಲೇಖಗಳಿವೆ. ಇಲ್ಲಿ ಇಂಗ್ಲಿಷ್ ಪದಗಳಿಗೆ ಶುದ್ಧ ಕನ್ನಡ ಸಮಾನಾರ್ಥಕಗಳಿದ್ದು ಇಲ್ಲಿರುವ ಪದಗಳನ್ನು ಅಗತ್ಯಕ್ಕೆ ತಕ್ಕಂತೆ ಸೇರಿಸಿಕೊಂಡು ಅಥವ ಪದಕ್ಕೆ ಸೂಕ್ತ ಪ್ರತ್ಯಯ(ಒಟ್ಟು)ವನ್ನು ಸೇರಿಸಿ ಹೊಸ ಅಚ್ಚಗನ್ನಡ ಪದಗಳನ್ನು ಸೃಷ್ಟಿಸಿಕೊಳ್ಳಬೇಕೆಂಬುದು ನಿಘಂಟುಕಾರರ ಆಶಯ. ಅದರಂತೆ chief-whip 'ಮಲ್ಲಚಾವಟಿ' ಯಾಗುತ್ತಾನೆ; Chief-guest 'ಮಲ್ಲ ಬಿದ್ದಿನ'ನಾಗುತ್ತಾನೆ; Bilingual dictionary 'ಇನ್ನುಡಿ ಪದನೆರಕೆ'ಯಾಗುತ್ತದೆ. ವೈಯಕ್ತಿಕ ಒಲವುಗಳು ಮತ್ತು ಸಾಮೂಹಿಕ ಇಚ್ಛಾಶಕ್ತಿ ಒಗ್ಗೂಡಿದರೆ ಇಂತಹ ಪದಗಳನ್ನು ಕನ್ನಡದಲ್ಲಿ ಬಳಕೆಗೆ ತರುವುದು ಅಸಾಧ್ಯವೇನಲ್ಲ. ಇದೊಂದು ಪ್ರಯೋಗಶೀಲ ನಿಘಂಟೇ ಆದರೂ ಪ್ರತ್ಯೇಕ ವರ್ಗವಾಗಿ ನೋಡುವ ಅಗತ್ಯವಿಲ್ಲ. ಇದೊಂದು ದ್ವಿಭಾಷಾ ನಿಘಂಟುಗಳ ವರ್ಗಕ್ಕೆ ಸೇರಿದ ಹೊಸ ನಿಘಂಟು.

ಸಂಸ್ಕೃತ, ಹಿಂದಿ, ಇಂಗ್ಲಿಷ್ ಇವುಗಳಲ್ಲೊಂದು ಉಲ್ಲೇಖ ಭಾಷೆಯಾಗಿರುವ ಮತ್ತು ಕನ್ನಡ ಲಕ್ಷ್ಯ ಭಾಷೆಯಾಗಿರುವ ಹಲವು ವ್ಯಾಪಕವಾದ, ಸಾಮಾನ್ಯ ಉಪಯೋಗಕ್ಕಾಗಿರುವ ನಿಘಂಟುಗಳು ಬಂದಿವೆ. ಉದಾ. ಎಸ್.ವಿ.ಹಂಜಿ ಅವರ 'ಸಂಸ್ಕೃತ–ಕನ್ನಡ ಕೋಶ'(1967), ಪ್ರೊ.ಗುರುನಾಥ ಜೋಶಿ ಅವರ 'ಹಿಂದಿ–ಕನ್ನಡ ಶಬ್ದಕೋಶ'(1950), ಇತ್ಯಾದಿ.ಹಾಗೆಯೇ ಕನ್ನಡ ಉಲ್ಲೇಖ ಬಾಷೆಯಾಗಿದ್ದುಕೊಂಡು ಸಂಸ್ಕೃತ, ಹಿಂದಿ, ಇಂಗ್ಲಿಷ್ ಭಾಷೆಗಳಲ್ಲಿ ಅರ್ಥ ನಿರೂಪಣೆ ಇರುವ ನಿಘಂಟುಗಳೂ ಕನ್ನಡದಲ್ಲಿವೆ. ಉದಾ: ಚಾಂದುಲಾಲ ದುಬೆ ಮತ್ತು ಇತರರು ರಚಿಸಿದ 'ಸಚಿತ್ರ ಕನ್ನಡ–ಹಿಂದಿ ಆದರ್ಶಕೋಶ'(1957). ಇವಲ್ಲದೆ ಕನ್ನಡ ಪದಗಳಿಗೆ ತೆಲುಗು ಮತ್ತು ತಮಿಳುಗಳಲ್ಲಿ ಸಮಾನಾರ್ಥಕಗಳನ್ನು ನೀಡುವ ನಿಘಂಟುಗಳು ಅಂತರ್ಜಾಲದಲ್ಲಿ ಲಭ್ಯವಿವೆ. ಕನ್ನಡ–ರಶ್ಯನ್ (1975) ನಿಘಂಟಿನ ಮುದ್ರಿತ ರೂಪ ಲಭ್ಯವಿದೆ.

ಇಪ್ಪತ್ತನೆಯ ಶತಮಾನದಲ್ಲಿ ಏಕಭಾಷಾ ನಿಘಂಟುಗಳೂ ವಿಪುಲ ಸಂಖ್ಯೆಯಲ್ಲಿ ರಚಿತವಾದುವು ಮತ್ತು ಅವುಗಳಲ್ಲಿ ಹಲವು ಜನಪ್ರಿಯವಾಗಿವೆ. ಶಿವರಾಮ ಕಾರಂತ, ಜಿ ವೆಂಕಟಸುಬ್ಬಯ್ಯ, ಹಾ ಮಾನಪ್ಪ ನಾಯಕ ಮುಂತಾದವರರು ಸಾಮಾನ್ಯ ಉಪಯೋಗಕ್ಕಾಗಿ ವ್ಯಾಪಕ ಏಕಭಾಷಾ ನಿಘಂಟುಗಳನ್ನು ರಚಿಸಿದ್ದು ಇವುಗಳಲ್ಲಿ ಉಲ್ಲೇಖಿತ ಪದದ ವ್ಯಾಕರಣ ವಿವರ, ನಿಷ್ಪತ್ತಿಸೂಚನೆ ಇಂತಹವನ್ನೂ ಒಳಗೊಂಡಿವೆ. ಗಾತ್ರಾನುಸಾರಿಯಾಗಿ ಇವುಗಳಲ್ಲಿ ವಿಧಗಳನ್ನು ಗುರುತಿಸುವ ಅಗತ್ಯವಿರಬಹುದು.

ಅರೆದ್ವಿಭಾಷಾ ನಿಘಂಟುಗಳೆಂಬ ಒಂದುವರ್ಗವನ್ನು ಕೆಲವರು ಸೂಚಿಸುತ್ತಾರೆ. ಅರೆ ಅಂದರೆ ಅರ್ಧ; ದ್ವಿ ಅಂದರೆ ಎರಡು; ಆದ್ದರಿಂದ ಅರೆದ್ವಿಭಾಷೆ ಎಂದರೆ ಏಕಭಾಷೆ ಎಂದೇ ಅರ್ಥ ಎಂದು ಬೇರೆ ಕೆಲವರು ಈ ನಿಲುವನ್ನು ವ್ಯಂಗ್ಯವಾಡುತ್ತಾರೆ. ಆದರೆ ಜೆ.ಡಿ.ಮೈಸಾಳೆ ಇವರ ಹಿಂದಿ–ಹಿಂದಿ– ಕನ್ನಡ ರತ್ನಕೋಶ(1951), ಶೇಷಗಿರಿರಾವ್ ಮತ್ತಿತರರ ಇಂಗ್ಲಿಷ್–ಇಂಗ್ಲಿಷ್–ಕನ್ನಡ ನಿಘಂಟು ಇಂತಹವುಗಳು ಶುದ್ಧವಾದ ಏಕಭಾಷಾ ನಿಘಂಟುಗಳೂ ಅಲ್ಲದೆ, ಶುದ್ಧವಾದ ದ್ವಿಭಾಷಾ ನಿಘಂಟುಗಳೂ ಅಲ್ಲದಿದ್ದು ಇಂತಹವು ಗಳನ್ನು ಅರೆದ್ವಿಭಾಷಾ ನಿಘಂಟುಗಳೆಂದು ಕರೆಯುವುದು ಉಚಿತವಾಗಬಹುದು. ಗುರುನಾಥ ಜೋಶಿಯವರ 'ಕನ್ನಡ–ಕನ್ನಡ–ಹಿಂದಿ ಶಬ್ದಕೋಶ'(1957) ಆರ್.ಎಸ್.ರಾಮರಾವ್ ಅವರು 1965ರಲ್ಲಿ ರಚಿಸಿದ ಕನ್ನಡ–ಕನ್ನಡ ಇಂಗ್ಲಿಷ್ ನಿಘಂಟು ಪ್ರೊ.ಜಿ. ವೆಂಕಟಸುಬ್ಬಯ್ಯ ಮತ್ತು ಇತರರು 1981ರಲ್ಲಿ ರಚಿಸಿದ 'ಕನ್ನಡ–ಕನ್ನಡ–ಇಂಗ್ಲಿಷ್–ನಿಘಂಟು' ಇಂತಹ ಅರೆದ್ವಿಭಾಷಾ ನಿಘಂಟುಗಳು ಹಲವು ಕನ್ನಡದಲ್ಲಿ ಲಭ್ಯವಿದ್ದು ಸರ್ವಜನೋಪಯೋಗಿಯಾಗಿವೆ.

ಎರಡಕ್ಕಿಂತ ಹೆಚ್ಚು ಭಾಷೆಗಳನ್ನೊಳಗೊಂಡ ಕೆಲವು ನಿಘಂಟುಗಳೂ ಕನ್ನಡದಲ್ಲಿದ್ದು

ಒಂದರಲ್ಲಿ ಹಿಂದಿ, ಒಂದರಲ್ಲಿ ತುಳು ಮತ್ತು ಮೂರನೆಯದರಲ್ಲಿ ಕನ್ನಡ ಉಲ್ಲೇಖ ಭಾಷೆಗಳಾಗಿವೆ. ಇಂತಹವನ್ನು ಬಹುಭಾಷಾ ನಿಘಂಟುಗಳೆಂಬ ಪ್ರತ್ಯೇಕ ವಿಧದಲ್ಲಿ ಸೇರಿಸುವುದು ಉಚಿತವಾಗಬಹುದು. ಎಲ್.ಎಸ್. ಚಿಟಗುಪ್ಪಿಯವರ ಆಧುನಿಕ ಹಿಂದಿ–ಕನ್ನಡ–ಇಂಗ್ಲಿಶ್ಶಬ್ದಕೋಶದಲ್ಲಿ ಕನ್ನಡ ಮತ್ತು ಇಂಗ್ಲಿಷ್ ಲಕ್ಷ್ಯ ಭಾಷೆಗಳಾಗಿವೆ. ಗೋವಿಂದ ಪೈ ಸಂಶೋಧನಾ ಸಂಸ್ಥೆ ಯು.ಪಿ.ಉಪಾಧ್ಯಾಯ ಇವರ ಪ್ರಧಾನ ಸಂಪಾದಕತ್ವದಲ್ಲಿ ತುಳು–ಕನ್ನಡ–ಇಂಗ್ಲಿಷ್ ನಿಘಂಟನ್ನು (1997) ರಚಿಸಿ ಪ್ರಕಟಿಸಿದೆ. ಹಲವು ವಿದ್ವಾಂಸರ ಹಲವು ರ್ಷಗಳ ಫಲದಿಂದ ಈ ಗ್ರಂಥ ರಚನೆಯಾಗಿದ್ದು ಇದು ಈ ವರ್ಗದ್ದೇ ಆದರೂ ಅದು ಆರು ಸಂಪುಟಗಳಲ್ಲಿದ್ದು ಬೃಹತ್ ಗಾತ್ರದ್ದಾಗಿದೆ. ಸಮಗ್ರತೆ, ವ್ಯಾಪ್ತಿ ಮತ್ತು ತಾಂತ್ರಿಕತೆಗಳಲ್ಲಿ ಅನನ್ಯವಾಗಿರುವ ಈ ನಿಘಂಟು ತುಳು ಉಲ್ಲೇಖ ಭಾಷೆಯಾಗಿರುವ ಬಹೂದ್ದೇಶೀ ಅಧ್ಯಯನ ಪೂರಕ ನಿಘಂಟಾಗಿದೆ. 1995ರಲ್ಲಿ ಕನ್ನಡ–ಕನ್ನಡ–ಇಂಗ್ಲಿಷ್–ತಮಿಳು–ಜಪಾನೀ ಭಾಷೆಗಳ ಬಹುಭಾಷಾ ನಿಘಂಟಿನ ಮೊದಲ ಸಂಪುಟವೊಂದನ್ನು ಸಂಪಾದಕ ಡಾ.ವಿ.ಗೋಪಾಲಕೃಷ್ಣ ಅವರ ಶ್ರಮದಿಂದ ಸಿದ್ಧಪಡಿಸಿ ಪ್ರಕಟಿಸಿರುವುದಾಗಿ ತಿಳಿದು ಬರುತ್ತದೆ (ಪ್ರಜಾವಾಣಿ: ಫೆಬ್ರುವರಿ, 2016). ಇದೊಂದು ಅಕ್ಷರಶಃ ಬಹುಭಾಷೆಗಳನ್ನೊಳಗೊಂಡ ನಿಘಂಟು.

ಎಟಿಮಲಾಜಿಕಲ್ ನಿಘಂಟು ಎಂಬ ಒಂದು ವಿಧವನ್ನು ಪ್ರತ್ಯೇಕವಾಗಿ ಹೇಳಲೇ ಬೇಕಾಗುತ್ತದೆ. ಇದು ದ್ರಾವಿಡ ಭಾಷೆಗಳಿಗೆ ಸಂಬಂಧಿಸಿದಂತೆ, ಕನ್ನಡಕ್ಕೆ ಸಂಬಂಧಿಸಿ ದಂತೆಯೂ 1961ರಿಂದ ಪ್ರಾರಂಭವಾಯಿತು. ಯಾವುದೇ ದ್ರಾವಿಡ ಭಾಷೆಯ ಒಂದು ಪದ ಸೋದರೀ ಭಾಷೆಗಳಲ್ಲಿ ಪಡೆದಿರುವ ರೂಪ, ಅಲ್ಲಿ ಅದರ ಅರ್ಥ ಮತ್ತು ಸಂಗತವಾದ ವ್ಯಾಕರಣ ವಿವರಗಳನ್ನು ದಾಖಲಿಸುವಂತಹ ನಿಘಂಟು ಪ್ರಕಾರವೆಂದು ಇದನ್ನು ವ್ಯಾಖ್ಯಾನಿಸಬಹುದು. ಇಂತಹ ನಿಘಂಟುಗಳ ರಚನೆಯಷ್ಟೇ ಅದನ್ನು ಮುಂದುವರೆಸುವ (updating) ಪ್ರಕ್ರಿಯೆಯೂ ಮುಖ್ಯ. 1961ರಲ್ಲಿ ಟಿ ಬರೋ ಮತ್ತು ಎಮ್.ಬಿ.ಎಮಿನೋ ಇವರ ಎ ದ್ರವಿಡಿಯನ್ ಎಟಿಮಲಾಜಿಕಲ್ ಡಿಕ್ಷನರಿ ದ್ರಾವಿಡ ಭಾಷೆಗಳಿಗೆ ಸಂಬಂಧಿಸಿದಂತೆ ಮೊದಲ ಜ್ಞಾತಿಪದಕೋಶವಾಗಿದ್ದು ಸುಮಾರು 5000 ಕನ್ನಡ ಪದಗಳನ್ನೊಳಗೊಂಡಿದೆ. 1984ರಲ್ಲಿ ಇದರ ಪರಿಷ್ಕೃತ ಆವೃತ್ತಿಯ ಪ್ರಕಟವಾಗಿದೆ ಮತ್ತು 1998ರಲ್ಲಿ ಇದರ ಪುನರ್ಮುದ್ರಣವಾಗಿರುತ್ತದೆ. ಇದರಲ್ಲಿ ಎಲ್ಲ ದ್ರಾವಿಡ ಭಾಷಾ ಪದಗಳೂ ಇದ್ದು ಉಲ್ಲೇಖಪದಗಳು ಅಥವ ಮುಖ್ಯ ನಮೂದುಗಳನ್ನು ವಿಶಿಷ್ಟ ರಿತಿಯಲ್ಲಿ ಆಯ್ಕೆ ಮಾಡಲಾಗಿದೆ. ಒಂದು ಪದದ ಪ್ರಾಚೀನ ರೂಪವು ಯಾವ ಭಾಷೆಯಲ್ಲಿದೆಯೋ ಆ ಭಾಷೆಯ ಪದ ಮುಖ್ಯ ನಮೂದಾಗುತ್ತದೆ. ಉಳಿದ ಭಾಷೆಗಳ ಪದಗಳನ್ನು ಜ್ಞಾತಿಪದಗಳನ್ನಾಗಿ ನೀಡಲಾಗಿದೆ. ಪದವನ್ನು ಲಿಪ್ಯಂತರ ರೂಪದಲ್ಲಿ ದಾಖಲಿಸಲಾಗಿದ್ದು ಅರ್ಥಗಳನ್ನು ಇಂಗ್ಲಿಷ್ ಭಾಷೆಯಲ್ಲಿ ನಿರೂಪಿಸಲಾಗಿದೆ. ಉಲ್ಲೇಖ ಪದವು ಮೂಲ ದ್ರಾವಿಡವಾಗಿರಬೇಕೆಂಬುದು ನಿಘಂಟುಕಾರರ ಕಾಳಜಿಯಾಗಿದೆ. ಕೆಳಗಿನ ಉದಾಹರಣೆಯು ನಿಘಂಟಿನ ಸ್ವರೂಪದ ಬಗ್ಗೆ ಸ್ವಯಮ್ ವಿವರಣೆಯನ್ನು ನೀಡುವುದು:

1140). Ta. kauva male monkey, tom-cat; kauva-pai boar. Ma. kauvan male of cats, pigs, etc.; k

ಯಾವುದೇ ಒಂದು ಪದವನ್ನು ಮೂಲ ದ್ರಾವಿಡ ಎಂದು ಗುರುತಿಸಲಾಗದಿದ್ದರೆ ಅಂತಹ ರೂಪವನ್ನು ಪುನಾರಚಿಸಿ ಕೊಡಲಾಗಿದೆ. ಇಂದಿಗೂ ಹಲವು ದ್ರಾವಿಡಭಾಷಾ

ಅಧ್ಯಯನಗಳಲ್ಲಿ ಈ ನಿಘಂಟನ್ನು ಉಲ್ಲೇಖಿಸಲಾಗುತ್ತಿರುವುದು ಬರೋ–ಎಮಿನೋ ನೀಘಂಟಿನ ಪ್ರಾಮುಖ್ಯವನ್ನು ತೋರಿಸುತ್ತದೆ. 2013ರಲ್ಲಿ ಎನ್ ಉಚಿಡ, ಬಿ.ಬಿ. ರಾಜಪುರೋಹಿತ್ ಮತ್ತು ಜೆ.ತಕಶಿಮ ಎಂಬ ವಿದ್ವಾಂಸರು ಕನ್ನಡ–ಇಂಗ್ಲಿಷ್ ಎಟಿಮಲಾಜಿಕಲ್(ಡಿಕ್ಷನರಿ) ನಿಘಂಟು ಎಂಬ ಶೀರ್ಷಿಕೆಯಲ್ಲಿ ನಿಘಂಟೊಂದನ್ನು ರಚಿಸಿದ್ದಾರೆ. ಇದರ ವಿಧಾನವೆಂದರೆ ಪ್ರತಿಯೊಂದು ಕನ್ನಡ ಪದಕ್ಕೆ ಇಂಗ್ಲಿಷ್ ಭಾಷೆಯಲ್ಲಿ ಸಮಾನಾರ್ಥಕಗಳನ್ನು ನೀಡಿ ಅರ್ಥವನ್ನು ಸ್ಪಷ್ಟಪಡಿಸುವುದು. ಉಲ್ಲೇಖಪದವು ಬರೋ–ಎಮಿನೋ ನಿಘಂಟಿನಲ್ಲಿ ಬಂದಿದ್ದರೆ ಆ ಅಂಶವನ್ನು ವಿವರಗಳ ಕೊನೆಯಲ್ಲಿ ಸೂಚಿಸಿದ್ದಾರೆ. ಪ್ರತಿಪದದ ಅರ್ಥನಿರೂಪಣೆಯ ನಂತರ ಕೊನೆಯಲ್ಲಿ ಅದರ ಮೂಲಭಾಷೆಯನ್ನು ಆವರಣಗಳಲ್ಲಿ ಸೂಚಿಸಿಸುವುದರಲ್ಲಿ ಕಿಟೆಲನ ಸಂಪ್ರದಾಯವನ್ನು ಮುಂದುವರೆಸಲಾಗಿದೆ. ಪದವು ಸಾಹಿತ್ಯ ಕೃತಿಗಳಲ್ಲಿ ಪ್ರಯೋಗವಾಗಿರುವ ಚರಿತ್ರೆಯನ್ನು ಆಯಾ ಕೃತಿಗಳನ್ನು ಸಂಕೇತಗಳ ಮೂಲಕ ಸೂಚಿಸಿ ತಿಳಿಸಿದ್ದಾರೆ. ಆದ್ದರಿಂದ ಇದನ್ನು ಎಟಿಮಲಾಜಿಕಲ್ ನಿಘಂಟು ಎಂದು ವರ್ಗೀಕರಿಸುದಕ್ಕಿಂತ ಸಮಗ್ರ ಬಹೂದ್ದೇಶೀ ಅಧ್ಯಯನ ಪೂರಕ ದ್ವಿಭಾಷಾ ನಿಘಂಟು ಎಂದೇ ಗುರುತಿಸುವುದು ಸರಿಯಾದುದು. ನಿಘಂಟಿನ ಹೆಸರು(ಶೀರ್ಷಿಕೆ) ಹೇಗೆ ತಪ್ಪು ದಾರಿಗೆಳೆಯಬಹುದೆಂಬುದಕ್ಕೆ ಇದು ಒಳ್ಳೆಯ ಉದಾಹರಣೆ. ಇದರನಂತರ ಈಚೆಗೆ 2014ರಲ್ಲಿ ಕನ್ನಡ ಸಾಹಿತ್ಯಪರಿಷತ್ತು ಒಂದು ದ್ರಾವಿಡಭಾಷಾ ಜ್ಞಾತಿಪದಕೋಶವನ್ನು ಪ್ರಕಟಿಸಿದ್ದು ಇದರಲ್ಲಿ ಎಲ್ಲವೂ ಕನ್ನಡ ಲಿಪಿಗಳಲ್ಲಿ ಮಾತ್ರವಿದೆ; ಲಿಪ್ಯಂತರ ವಿಧಾನವನ್ನು ಅನುಸರಿಸಿಲ್ಲ. ಹಲವು ದೃಷ್ಟಿಗಳಿಂದ ಇದು ಬರೋ–ಎಮಿನೋ ನಿಘಂಟಿನ ಮುಂದುವರಿಕೆಯಾಗಿದ್ದು ಕನ್ನಡ ಲಿಪಿಗಳ ಬಳಕೆ, ಕನ್ನಡದ ಉಲ್ಲೇಖ ಪದಗಳಿರುವುದು, ಪ್ರಾಚೀನ ನಿಘಂಟುಗಳಿಂದ ಪ್ರಮಾಣೀಕೃತ ನಮೂದುಗಳನ್ನು ಒಳಗೊಂಡಿರುವುದು, ಕನ್ನಡದ ಒಂಬತ್ತು ಉಪಭಾಷೆಗಳಿಂದ ಉಲ್ಲೇಖಗಳನ್ನು ಆಯ್ದಿರುವುದು ಇಂತಹವು ಹೊಸ ನಿಘಂಟಿನ ವೈಶಿಷ್ಟ್ಯಗಳಾಗಿವೆ. ಇದು ನಿಸ್ಸಂಶಯವಾಗಿ ಎಟಿಮಲಾಜಿಕಲ್ ನಿಘಂಟು. ಕನ್ನಡಕ್ಕೆ ಸಂಬಂಧಿಸಿದಂತೆ ಹೀಗೆ ಎರಡು ಎಟಿಮಲಾಜಿಕಲ್ ನಿಘಂಟು ಅಥವ ಜ್ಞಾತಿಪದಕೋಶಗಳಿವೆ.

ರಾಷ್ಟ್ರೀಯ ನಿಘಂಟು ಎಂಬ ಒಂದು ಪ್ರಕಾರವನ್ನು ಯೂರೋಪಿಯನ್ ನಿಘಂಟು ಪರಂಪರೆಯಲ್ಲಿ ಹೆಸರಿಸುತ್ತಾರೆ. ಇದು ಚಾರಿತ್ರಿಕ ಬೆಳವಣಿಗೆಗಳನ್ನೂ ತೋರಿಸುವ, ರಾಷ್ಟ್ರೀಯ ಪರಿಧಿಗೆಲ್ಲ ಅನ್ವಯಿಸುವ ಪದಗಳನ್ನೊಳಗೊಂಡ ನಿಘಂಟು. ಯೂರೋಪಿನಲ್ಲೇ ಈ ಬಗೆಯ ನಿಘಂಟುಗಳನ್ನು ಒಂದು ಪ್ರಕಾರವೆಂದು ಪರಿಗಣಿಸುವ ಬಗ್ಗೆ ಭಿನ್ನಾಭಿಪ್ರಾವಿದ್ದು (ಪೋಧೆಜೆಕ, ಪು 8) ಮೇಲೆ ಹೇಳಿದ ಯಾವುದಾದರೂ ಒಂದು ವರ್ಗದಲ್ಲಿ ಅವುಗಳನ್ನು ಅಳವಡಿಸಬಹುದು. ಪರ್ಯಾಯ ನಿಘಂಟುಗಳು ಎಂಬ ವರ್ಗವೊಂದನ್ನು ನಿಘಂಟಿನ ಒಂದು ವಿಧವನ್ನಾಗಿ ಪರಿಗಣಿಸುವುದಿದೆ (ಪೋಧೆಜೆಕ, ಪು.9). ಪದಗಳನ್ನು ಪರ್ಯಾಯ ರೀತಿಯೊಂದರಲ್ಲಿ ಜೋಡಿಸಿ ಅರ್ಥವನ್ನು ವಿವರಿಸುವಂತಹ ನಿಘಂಟುಗಳಿಗೆ ಈ ಹೆಸರನ್ನು ಬಳಸುತ್ತಾರೆ. ಉಳ್ಳಾಲ ನರಸಿಂಗರಾಯರು ಸಂಕಲಿಸಿದ ಎ ಕಿಸಮ್ ವಾರ್ ಗ್ಲೋಸರಿ ಆಫ್ ಕ್ಯಾನರೀಸ್ ವರ್ಡ್ಸ್ಯನ್ನು(1891) ಇಂತಹ ನಿಘಂಟುಗಳಿಗೆ ಒಂದು ನಿದರ್ಶನವನ್ನಾಗಿ ನೋಡಬಹುದು. ಸ್ವಯಂ ವಿವರಣಾತ್ಮಕವಾದ ಶೀರ್ಷಿಕೆಗಳಿರುವ ಬೇರೆ ಬೇರೆ ಗುಚ್ಛಗಳಲ್ಲಿ ಪದಗಳನ್ನು ಅಕಾರಾದಿಯಾಗಿ ಜೋಡಿಸಿ ಅವುಗಳಿಗೆ ಇಂಗ್ಲಿಷ್ ಭಾಷೆಯಲ್ಲಿ ಅರ್ಥ ಹೇಳುವುದು ಇಲ್ಲಿ ಅನುಸರಿಸಲಾಗಿರುವ ತಂತ್ರ. ಈ ರೀತಿ ಗುಂಪುಗಳಲ್ಲಿ ಪದಜೋಡಣೆ ಇರುವ ನಿಘಂಟು ಗಳಿಗೆ ಥಿಸೌರು ಎಂದೂ ಕರೆಯುವುದುಂಟು. ಗುಚ್ಛಗಳ ಶೀರ್ಷಿಕೆಗಳು ಇಂಗ್ಲಿಷಿನಲ್ಲಿದ್ದು

ಮೊದಲ ಮೂರು ಹೀಗಿವೆ (ಉದಾಹರಣೆಗಾಗಿ ನೀಡಿದೆ): Affinity and Relationship, Anatomy and Physiology, Astronomy and Astrology. ಇಂತಹ ಇಪ್ಪತ್ತೊಂಬತ್ತು ಗುಂಪುಗಳು ಇಲ್ಲಿವೆ. ನಿಘಂಟಿನ ಮೂರು ಆವೃತ್ತಿಗಳು (http://www.worldcat.org/wcidentities/lccn-n88154575) ಮುದ್ರಿತವಾಗಿರುವುದಾಗಿ ತಿಳಿದು ಬರುತ್ತದೆ. ಪದಗಳನ್ನು ಪರಿಕಲ್ಪನಾತ್ಮಕ ಗುಂಪುಗಳಾಗಿ ವಿಭಜಿಸುವುದು ಇಂತಹ ನಿಘಂಟುಗಳ ರೀತಿಯಾಗಿದ್ದು ಸಂಸ್ಕೃತದ ಅಮರಕೋಶ ಕೂಡ ಇದೇ ಮಾದರಿಯದು ಎಂಬುದನ್ನು ಗಮನಿಸಬಹುದು. ಆದರೆ ಎಲ್ಲ ಪರ್ಯಾಯ ನಿಘಂಟುಗಳೂ ಈ ರೀತಿಯವಲ್ಲ. ನಾ ಕಸ್ತೂರಿಯವರ ಅನರ್ಥ ಕೋಶ ಇನ್ನೊಂದು ರೀತಿಯದಾಗಿದ್ದು ಅಕ್ಷರಾನುಕ್ರಮದಲ್ಲಿ ಪದಗಳನ್ನು ಜೋಡಿಸಿ ಪದಗಳಿಗೆ ವಿಪರೀತಾರ್ಥಗಳನ್ನು ನೀಡಿ ಹಾಸ್ಯವನ್ನುಂಟು ಮಾಡುವ ಕೃತಿಯಾಗಿದ್ದು ಪರ್ಯಾಯ ನಿಘಂಟು ವರ್ಗಕ್ಕೆ ಸೇರಬಹುದೆಂದು ಮೇಲ್ನೋಟಕ್ಕೆ ತೋರುತ್ತದೆ; ಪದಗಳ ಪರ್ಯಾಯ ಜೋಡಣೆಯ ಬದಲಾಗಿ ಇಲ್ಲಿ ವಿಭಿನ್ನವಾಗಿ (ಪರ್ಯಾಯವಾಗಿ) ಪದಗಳಿಗೆ ಅರ್ಥಗಳನ್ನು ಸೂಚಿಸುವ ಪದ್ಧತಿ ಇದೆ. ಆದರೆ ನಿಘಂಟಿನ ಪ್ರಧಾನ ಉದ್ದೇಶ ಓದುಗರು ಪದಗಳಿಗೆ ಅರ್ಥ, ಅವು ಯಾವ ಪದವರ್ಗಕ್ಕೆ ಸೇರುತ್ತದೆಂಬ ವಿವರ, ಅಕ್ಷರಿಕೆಯ ಸರಿಯಾದ ರೂಪ, ಪದಪ್ರಯೋಗ ರೀತಿ ಇಂತಹವುಗಳನ್ನು ಕಂಡುಕೊಳ್ಳಲು ಉಪಯುಕ್ತವಾಗುವುದು. ಕಸ್ತೂರಿಯವರ ಈ ಕೋಶ ಇಂತಹ ಪ್ರಕಾರ್ಯಗಳಲ್ಲಿ ನೆರವಾಗುವುದರ ಬದಲು ಮನೋರಂಜಕವಾದುದಾಗಿದೆ; ಸಾಮಾಜಿಕ ವಿಡಂಬನೆಯಾಗಿದೆ. ಇತರ ಕೆಲವರೂ ಈ ದಾರಿಯಲ್ಲಿ ಪ್ರಯತ್ನಿಸುತ್ತಿದ್ದು ಕಸ್ತೂರಿಯವರ ಪ್ರಯತ್ನವನ್ನು ಒಂದು ವಿಶಿಷ್ಟ ಹಾಸ್ಯ ಸಾಹಿತ್ಯ ಪ್ರಕಾರವೆಂದು ಗುರುತಿಸುವುದು ಹೆಚ್ಚು ಸೂಕ್ತವಾಗಬಹುದು.

ಉಲ್ಲೇಖ ಭಾಷೆ ಮತ್ತು ಲಕ್ಷ್ಯ ಭಾಷೆಗಳೆರಡೂ ಒಂದೇ ಆಗಿರುವ ಇನ್ನೊಂದು ಬಗೆಯ ನಿಘಂಟುಗಳಿವೆ. ಉಪಯೋಗವಾಗಿರುವ ಭಾಷೆಗಳ ಸಂಖ್ಯೆಯ ದೃಷ್ಟಿಯಿಂದ ಇವು ಏಕಭಾಷಾ ನಿಘಂಟುಗಳೇ ಆದರೂ ಇವುಗಳ ರೀತಿ ವಿಭಿನ್ನ. ಈ ನಿಘಂಟುಗಳಲ್ಲಿ ಆಯ್ದುಕೊಂಡಿರುವ ಉಲ್ಲೇಖಪದಗಳೆಲ್ಲ ಒಂದು ಕ್ಷೇತ್ರಕ್ಕೆ ಸೇರಿದವಾದರೂ ಆ ಕ್ಷೇತ್ರವಿನ್ನೂ ಶೈಕ್ಷಣಿಕಶಿಸ್ತು ಎಂಬ ಗೌರವಕ್ಕೆ ಪಾತ್ರವಾಗಿಲ್ಲ; ಶಾಲಾಕಾಲೇಜುಗಳಲ್ಲಿ ಅದನ್ನೊಂದು ಅಧ್ಯಯನ ವಿಷಯವನ್ನಾಗಿಸಿ ಅದರಲ್ಲಿ ತಜ್ಞತೆ ಹೊಂದಲು ಅವಕಾಶ ಕಲ್ಪಿಸಲಾಗಿಲ್ಲ. ತಾಪತ್ರಯ, ದಶಾವತಾರ ಇಂತಹ ಸಂಖ್ಯೆಯುಕ್ತ ಪದಗಳನ್ನು ಉಲ್ಲೇಖ ಪದಗಳನ್ನಾಗಿ ಆಯ್ದು ಸಂಖ್ಯಾನುಕ್ರಮದಲ್ಲಿ ಜೋಡಿಸಿ ಐ.ಕೆ.ಪಿ.ಶರ್ಮ ಇವರ ಸಾಂಖ್ಯೇಯ ಶಬ್ದಮಂಜರಿ(1962)ಯಲ್ಲಿ ಅರ್ಥ ವಿವರಿಸಿದ್ದಾರೆ. ಬೆನೆಗಲ್ ರಾಮರಾವ್ ಮತ್ತು ಪಾನ್ಯಂ ಸುಂದರಶಾಸ್ತ್ರಿ ಇವರು ಪುರಾಣ ನಾಮ ಚೂಡಾಮಣಿ(1971)ಯಲ್ಲಿ ರಾಮಾಯಣ, ಮಹಾಭಾರತ ಮತ್ತು ಪುರಾಣಗಳಲ್ಲಿ ಬರುವ ಹೆಸರುಗಳನ್ನು ಅಕಾರಾದಿಯಾಗಿ ಜೋಡಿಸಿ ಆ ಹೆಸರಿನ ವ್ಯಕ್ತಿ ಸ್ಥಳ ಇತ್ಯಾದಿಗಳ ಬಗ್ಗೆ ಇರುವ ಕತೆ ಘಟನೆಗಳನ್ನೆಲ್ಲ ಸಂದರ್ಭ ಸಮೇತ ವಿವರಿಸಲಾಗಿದೆ. ಇಂತಹವು ಒಂದು ಬೇರೆಯೇ ನಿಘಂಟುವಿಧವಾಗಿದ್ದು ಈ ವಿಧದ ಕೃತಿಗಳನ್ನು ವಿವರಣಾತ್ಮಕ ನಿಘಂಟುಗಳೆಂದು ಹೆಸರಿಸಬಹುದು. ಯಜ್ಞನಾರಾಯಣ ಉಡುಪರ ಪುರಾಣ ಭಾರತಕೋಶ (1975) ಇಂತಹವಕ್ಕೆ ಇನ್ನೊಂದು ಉದಾಹರಣೆ.

ನಿರ್ದಿಷ್ಟ ಶೈಕ್ಷಣಿಕ ಶಿಸ್ತಿಗೆ ಸಂಬಂಧಿಸಿದ ವಿಶೇಷ ಪದಗಳನ್ನೆಲ್ಲ ಅಕಾರಾದಿಯಾಗಿ ಜೋಡಿಸಿ ಅರ್ಥವನ್ನು ವಿವರಿಸುವ ಏಕಭಾಷಾ ಅಥವ ದ್ವಿಭಾಷಾ ನಿಘಂಟುಗಳಿವೆ. ಉದಾ: ಮೈಸೂರು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಯನ ಸಂಸ್ಥೆಯ ಶಿಕ್ಷಣ ಶಾಸ್ತ್ರದ ಪಾರಿಭಾಷಿಕ

ನಿಘಂಟು (ಇಂಗ್ಲಿಷ್–ಕನ್ನಡ) (1981), ಡಿ.ಎಸ್.ಶಿವಪ್ಪ ಇವರ ವೈದ್ಯಕ ಪದಗಳ ಹುಟ್ಟು ರಚನೆ (1990), ಕರ್ನಾಟಕ ಸರಕಾರದ ಗ್ಲಾಸರಿ ಆಫ್ ಅಡ್ಮಿನಿಸ್ಟ್ರೇಟಿವ್ ಟರ್ಮ್ಸ್ ಇಂಗ್ಲಿಷ್–ಕನ್ನಡ(1967), ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ ಇಂಗ್ಲಿಷ್–ಕನ್ನಡ ವಿಜ್ಞಾನಪದ ಕೋಶ(1990) ಇತ್ಯಾದಿ. ಇಲ್ಲೆಲ್ಲ ಅರ್ಥ ಹೇಳುವುದಕ್ಕಾಗಿ ಆಯ್ಕೆ ಮಾಡಿದ ಪದಸಂಗ್ರಹ ವಿಶಿಷ್ಟವಾಗಿದ್ದು ಶಾಲಾ ಕಾಲೇಜುಗಳಲ್ಲಿ ಕಲಿಕಾ ವಿಷಯಗಳಾದ ಒಂದು ಶೈಕ್ಷಣಿಕ ಶಿಸ್ತಿನ ವ್ಯಾಪ್ತಿಗೊಳಪಡುತ್ತಿದೆ ಮತ್ತು ಸಾಮಾನ್ಯಪದದಂತೆ ಉಪಯೋಗವಾಗುವ ಪದವೊಂದಕ್ಕೂ ಶಾಸ್ತ್ರಗಳಲ್ಲಿ ಇರುವ ವಿಶೇಷಾರ್ಥವನ್ನು ನಿರೂಪಿಸುತ್ತದೆ. ಸಂಬಂಧಿಸಿದ ನಿಘಂಟು ಆ ವಿಷಯದ ವಿದ್ಯಾರ್ಥಿಗಳು ಮತ್ತು ವೃತ್ತಿಪರರಿಗೆ ಶಾಸ್ತ್ರೀಯವಾಗಿ ಪದಗಳನ್ನು ಅರ್ಥೈಸುತ್ತಿದ್ದು ಭಾಷಾಂತರಕ್ಕಾಗಿ ಬಳಸಬಹುದಾಗಿದೆ. ಈ ನಿಘಂಟುಗಳೆಲ್ಲ ವಿವಕ್ಷಿತ ಶೈಕ್ಷಣಿಕ ಶಿಸ್ತಿಗೆ ಸಂಬಂಧಿಸಿದ ಪರಿಭಾಷಾ ರೂಪದ ಪದಗಳಿಗೆ ಅರ್ಥ ಹೇಳುವಂತಹವಾಗಿದ್ದು ವಿಶೇಷ ನಿಘಂಟುಗಳೆಂದು ಅಥವ ತಜ್ಞತಾ ನಿಘಂಟುಗಳೆಂದು ಕರೆಸಿಕೊಂಡಿವೆ.

ಪಾಶ್ಚಾತ್ಯ ಭಾಷೆಗಳಿಗೆ ಸಂಬಂಧಿಸಿದಂತ ಅಕ್ಷರಿಕಾ (spelling) ನಿಘಂಟು, ಉಚ್ಚಾರಣಾ (pronunciation) ನಿಘಂಟು–ಇಂತಹ ನಿಘಂಟುಗಳು ರಚನೆಯಾಗಿವೆ. ಪದದಲ್ಲಿರುವ ಅಕ್ಷರಗಳ ಜೋಡಣೆಗಿಂತ ಭಿನ್ನವಾಗಿ ಆ ಪದದ ಉಚ್ಚಾರವಿರುವ ಗಣನೀಯ ಸಂಖ್ಯೆಯ ಪದಗಳಿರುವುದರಿಂದ ಮತ್ತು ಅಕ್ಷರಗಳಿಗೆ ಅವು ಪ್ರತಿನಿಧಿಸುವ ಧ್ವನಿಗಿಂತ ಭಿನ್ನವಾದ ಹೆಸರಿರುವುದರಿಂದ ಇಂತಹ ನಿಘಂಟುಗಳು ಅಗತ್ಯವಾಗುತ್ತವೆ. ಕನ್ನಡದಲ್ಲಿ ಈ ಸಂದರ್ಭವಿಲ್ಲ. ಗಣನೀಯ ಸಂಖ್ಯೆಯ ಸಾಹಿತ್ಯಿಕ ಕೃತಿಳು, ವೃತ್ತ ಪತ್ರಿಕೆಗಳು, ಸಂಭಾಷಣೆಗಳು ಇತ್ಯಾದಿಗಳನ್ನು ಪರಿಶೀಲಿಸಿ ಅವುಗಳಲ್ಲಿರುವ ಒಟ್ಟು ಪದಸಂಖ್ಯೆಯಲ್ಲಿ ಯಾವ ಪದ ಎಷ್ಟು ಪುನರಾವರ್ತನೆಗೊಂಡಿದೆ ಎಂಬುದನ್ನು ದಾಖಲಿಸುವ ನಿಘಂಟುಗಳು ವಿಶ್ವದ ಕೆಲವು ಭಾಷೆಗಳಲ್ಲಿ ಪ್ರಕಟವಾಗಿವೆ. ಉದಾ. Frequency Dictionary of the Contemporary American. ಇಂತಹ ಕೃತಿಯು ಪಠ್ಯಕ್ರಮವನ್ನು ವಿನ್ಯಾಸಗೊಳಿಸುವುದು, ಪಠ್ಯಪುಸ್ತಕ ರಚಿಸುವುದು ಇತ್ಯಾದಿಗಳಲ್ಲಿ ಯಾವ ಪದಗಳಿಗೆ ಆದ್ಯತೆ ನೀಡಬೇಕೆಂಬುದನ್ನು ನಿರ್ಧರಿಸಲು ಅಗತ್ಯ ಮಾಹಿತಿಯನ್ನು ಒದಗಿಸಬಲ್ಲುದು. ಇಂತಹ ನಿಘಂಟುಗಳು ಕನ್ನಡದಲ್ಲಿ ಇನ್ನೂ ರಚನೆಯಾಗಬೇಕಾಗಿವೆ. ಕನ್ನಡಪಡೆನುಡಿಗಳ ಕೋಶ (ಟಿ.ವಿ. ವೆಂಕಟರಮಣಯ್ಯ, 1968) ಎಂಬ ಒಂದು ನಿಘಂಟು ಪ್ರಕಟವಾಗಿದ್ದು ಮೈಸೂರು ವಿಶ್ವವಿದ್ಯಾಲಯದ ಗ್ರಂಥ ಭಂಡಾರದಲ್ಲಿ ಇದನ್ನು ಪಡೆನುಡಿ–ನುಡಿಗಟ್ಟು ನಿಘಂಟು ಎಂದು ವರ್ಗೀಕರಿಸಿದ್ದಾರೆ. ಓದುಗರಿಗೆ ನಿಘಂಟನ್ನು ಆಯ್ದುಕೊಳ್ಳಲು ಸಹಾಯವಾಗುವ ದೃಷ್ಟಿಯಿಂದ ನುಡಿಗಟ್ಟು ನಿಘಂಟು ಎಂಬ ಒಂದು ವರ್ಗವು ಪ್ರಯೋಜನಕಾರಿ ಯಾಗಬಹುದು.

ಇಪ್ಪತ್ತನೆಯ ಶತಮಾನದ ಒಂದು ಮುಖ್ಯ ಬೆಳವಣಿಗೆಯೆಂದರೆ ಉಪಭಾಷಾ ನಿಘಂಟುಗಳದು. 2014ರ ದ್ರಾವಿಡ ಭಾಷಾ ಜ್ಞಾತಿಪದಕೋಶದಲ್ಲಿ ಹಾಲಕ್ಕಿ ಕನ್ನಡ, ಜೇನುಕುರುಬ ಕನ್ನಡ, ನಂಜನಗೂಡ ಕನ್ನಡ, ಬಾರ್ಕೂರು ಕನ್ನಡ ಇತ್ಯಾದಿಯಾಗಿ ಒಂಬತ್ತು ಉಪಭಾಷೆಗಳ ಪದಗಳನ್ನು ಉಲ್ಲೇಖಿಸಿದ್ದು ಈ ಉಪಭಾಷೆಗಳ ಪದಗಳ ಒಂದು ಸ್ಥೂಲ ಪರಿಚಯ ಇಲ್ಲಿದೆ. ಬರೋ–ಎಮಿನೋ ನಿಘಂಟಿನಲ್ಲೂ ಇಂತಹ ಪದಗಳನ್ನು ಕಾಣಬಹುದು. ಡಿಎನ್. ಶಂಕರ ಭಟ್ಟರು 1970ರಲ್ಲಿ ಬಾರ್ಕೂರು ಕನ್ನಡದ ಕೋಶಿಕೆಯನ್ನು, ಯು.ಪಿ. ಉಪಾಧ್ಯಾಯ ಇವರು ಸೋಲಿಗ ಕನ್ನಡದ ಪದ ಮತ್ತು ಅರ್ಥಗಳನ್ನು ಒಳಗೊಂಡ ಅಧ್ಯಯನವನ್ನು, ಹಂದೆ ಇವರು ಬಂಧನ ಕಾಣದ ಪದಗಳು

ಎಂಬ ಕೋಟಕನ್ನಡ ಕೋಶಿಕೆಯನ್ನು, ಅರ್ತಿಕಜೆ ಇವರು ಹವಿಗನ್ನಡ ನುಡಿಗಟ್ಟುಗಳ ಕೋಶವನ್ನು ರಚಿಸಿರುವಂತೆ ತಿಳಿದು ಬರುತ್ತದೆ. ಮರಿಯಪ್ಪ ಭಟ್ಟ ಇವರ ಹವ್ಯಕ–ಇಂಗ್ಲಿಷ್ ನಿಘಂಟು (1983) ವೈಜ್ಞಾನಿಕವಾಗಿ ರಚಿಸಿದ ಒಂದು ಸಮಗ್ರ ಉಪಭಾಷಾ ನಿಘಂಟು. ಉಪಭಾಷೆಗಳಲ್ಲಿ ವಿಶೇಷಪದಗಳನ್ನೂ ಕನ್ನಡದ ಸಾಮಾನ್ಯ ಪದಗಳಿಗೆ ಉಪಭಾಷೆಗಳಲ್ಲಿರುವ ವಿಶೇಷವಾಗಿರುವ ಅರ್ಥಗಳನ್ನೂ ಸ್ಪಷ್ಟಪಡಿಸುವಂತಹ ನಿಘಂಟುಗಳನ್ನು ಉಪಭಾಷಾ ನಿಃಘಂಟುಗಳು ಎಂಬ ವಿಧವಾಗಿ ಪರಿಗಣಿಸಬಹುದು. ಇದಿನ್ನೂ ಪ್ರವರ್ಧಮಾನದಲ್ಲಿರುವ ನಿಘಂಟು ಕ್ಷೇತ್ರ ಎಂಬುದನ್ನು ಗಮನಿಸಬಹುದು.

ಕಾವ್ಯ ಸಂಗ್ರಹಗಳ ಕೊನೆಯಲ್ಲಿ ಮತ್ತು ವಿವಿಧ ಕಾವ್ಯಗಳ ಮುದ್ರಿತ ಆವೃತ್ತಿಗಳ ಅಂತ್ಯದಲ್ಲಿ ಆಯಾ ಗ್ರಂಥಗಳನ್ನು ಅರ್ಥಮಾಡಿಕೊಳ್ಳಲು ಅನುಕೂಲವಾಗುವಂತೆ ಕ್ಲಿಷ್ಟ ಪದಗಳ ಅರ್ಥವನ್ನು ತಿಳಿಸುವ ಸಣ್ಣ ಕೋಶಿಕೆಗಳನ್ನು ಹಲವು ವರ್ಷಗಳಿಂದ ನೀಡಲಾಗುತ್ತಿದೆ. ಇಂತಹ ಸಂಪ್ರದಾಯವನ್ನು ಕ್ರಿ.ಶ.1868ರಲ್ಲಿ ರೆ.ಜಿ ವುರ್ತ್ ಇವನು ತನ್ನ ಪ್ರಾಕ್ಕಾವ್ಯ ಮಾಲಿಕೆಯಲ್ಲಿ ಪ್ರಾರಂಭಿಸಿದನು. ಆದರೆ ಇಂತಹ ಕೋಶಿಕೆಗಳು ಸೀಮಿತ ವ್ಯಾಪ್ತಿಯವಾಗಿದ್ದು ಪದಗಳ ಅರ್ಥಗಳನ್ನು ಇತರ ಪ್ರಮಾಣಬದ್ಧ ನಿಘಂಟುಗಳಿಂದ ಆಯ್ದಿರುತ್ತಾರೆ. ಆದ್ದರಿಂದ ಇವುಗಳನ್ನು ಒಂದು ಪ್ರತ್ಯೇಕ ನಿಘಂಟುವಿಧವನ್ನಾಗಿ ನೋಡುವ ಅಗತ್ಯವಿಲ್ಲ. ಇವು ಸ್ವತಂತ್ರ ನಿಘಂಟುಗಳಲ್ಲ; ಒಂದು ರೀತಿಯಲ್ಲಿ ನಿಘಂಟುಭಾಗಗಳು.

ಮೇಲೆ ನಿರೂಪಿಸಲಾಗಿರುವ ನಿಘಂಟುಗಳ ವರ್ಗೀಕರಣವನ್ನು ಮೂರು ಆಯಾಮದ ಒಂದು ವರ್ಗೀಕರಣವನ್ನಾಗಿ ಪರಿಗಣಿಸಬಹುದು. ಕೆಲವು ವಿದ್ವಾಂಸರು ಜಾರುಚಿತ್ರದ ರೀತಿಯಲ್ಲಿ ವರ್ಗೀಕರಣವನ್ನು ಪ್ರತಿನಿಧಿಸುತ್ತಾರಾದರೂ (ಜುಗುಸ್ತ: 1971) ನಾನಿಲ್ಲಿ ತಃಖ್ತೆಯ ರೀತಿಯ ವರ್ಗೀಕರಣವೊಂದನ್ನು ಸೂಚಿಸುತ್ತಿದ್ದೇನೆ. ಮೂರು ಆಯಾಮಗಳಲ್ಲಿ ಎರಡನ್ನು ತಃಖ್ತೆಯ ಎಡ ತುದಿಯ ಶೀರ್ಷಿಕೆಗಳು ನಿರೂಪಿಸುತ್ತಿದ್ದು ಉದ್ದ ಸಾಲುಗಳಿಂದ ಸೂಚಿತವಾಗುತ್ತವೆ: (1)ಮೊದಲನೆಯದಾಗಿ ಭಾಷಾ ಆಯಾಮ–ನಿಘಂಟಿನಲ್ಲಿ ಉಲ್ಲೇಖ ಭಾಷೆ ಮತ್ತು ಲಕ್ಷ್ಯ ಭಾಷೆಗಳೆರಡೂ ಒಂದೇ ಆಗಿದ್ದು ಏಕಭಾಷಿಕವಾಗಿದೆಯೋ, ಬೇರೆಬೇರೆಯಾಗಿದ್ದು ದ್ವಿಭಾಷಿಕವಾಗಿದೆಯೋ, ಉಲ್ಲೇಖ ಪದಗಳಿಗೆ ಅದೇ ಭಾಷೆಯಲ್ಲಿ ಅರ್ಥವನ್ನು ನಿರೂಪಿಸುವುದರ ಜೊತೆಗೆ ಇನ್ನೊಂದು ಭಾಷೆಯ ಸಮಾನಾರ್ಥಕಗಳನ್ನು ನೀಡುವಂತಹ ಅರೆದ್ವಿಭಾಷಾ ವಿಧದ್ದೋ ಅಥವಾ ಒಂದು ಭಾಷೆಯ ನಮೂದುಗಳಿಗೆ ಒಂದಕ್ಕಿಂತ ಹೆಚ್ಚು ಭಾಷೆಯಲ್ಲಿ ಅರ್ಥ ನಿರೂಪಿಸಿ ಬಹುಭಾಷೆಗಳನ್ನು ಒಳಗೊಂಡಿದೆಯೋ ಎಂಬುದನ್ನು ಗಣನೆಗೆ ತೆಗೆದುಕೊಳ್ಳುವ ಆಯಾಮ; (2) ಎರಡನೆಯದು ಮುಖ್ಯವಾಗಿ ಗಾತ್ರಾನುಸಾರಿಯಾಗಿದ್ದು ಅತಿ ಸಂಕ್ಷಿಪ್ತ, ಸಂಕ್ಷಿಪ್ತ, ವ್ಯಾಪಕ ಮತ್ತು ಸಮಗ್ರ ಎಂದು ಗುರುತಿಸಲಾಗಿದೆ. ಇವು ಉಲ್ಲೇಖ ಪದಗಳನ್ನು ಯಾವ ಪ್ರಮಾಣದಲ್ಲಿ ಆಯ್ಕೆ ಮಾಡಲಾಗಿದೆ ಎಂಬುದನ್ನೂ ಸೂಚಿಸುತ್ತವೆ. ಈ ಎರಡೂ ಆಯಾಮಗಳನ್ನು ಎಡದಿಂದ ಬಲಕ್ಕೆ ಸಾಗುವ ಉದ್ದ ಸಾಲುಗಳಲ್ಲಿ ಯೋಜಿಸಬಹುದು. (3)ಮೂರನೆಯದು ನಿಘಂಟುಗಳ ಸ್ವರೂಪದ ಆಯಾಮ–ನಿಜವಾಗಿ ನಿಘಂಟಿನ ಕಾರ್ಯ ಯಾವ ರೀತಿಯದು ಮತ್ತು ಅದನ್ನು ಯಾವ ರೀತಿಯ ಉಪಯೋಗಕ್ಕಾಗಿ ಓದುಗರು ಬಳಸಬಹುದು ಎಂಬುದನ್ನು ತಿಳಿಸುವ ಆಯಾಮ. ಈ ರೀತಿಯ ಐದು ವಿಭಿನ್ನ ವರ್ಗಗಳನ್ನು ಕಲ್ಪಿಸಲಾಗಿದ್ದು ಇವುಗಳನ್ನು ಮೇಲಿನಿಂದ ಕೆಳಕ್ಕೆ ಸಾಗುವ ಕಂಬ ಸಾಲುಗಳಲ್ಲಿ ವ್ಯವಸ್ಥೆಗೊಳಿಸಬಹುದು. ಹೊಸ ನಿಘಂಟುಗಳನ್ನು ಅಳವಡಿಸಲು ಹೊಸ ಉದ್ದಸಾಲು ಮತ್ತು ಕಂಬ ಸಾಲುಗಳನ್ನು

ಸೇರಿಸಿಕೊಳ್ಳಬಹುದಾಗಿದೆ. ಉದಾಹರಣೆಗೆ ಆವೃತ್ತಿ ನಿಘಂಟುಗಳು ಈಗ ಕನ್ನಡದಲ್ಲಿಲ್ಲವಾಗಿ ಅದು ಈ ತಃಖ್ತೆ ಅಥವ ಪಟ್ಟಿಯಲ್ಲಿ ನಮೂದಾಗಿಲ್ಲ. ಅಂತಹ ನಿಘಂಟು ರಚನೆಯಾದಾಗ ಅದನ್ನು ಏಕಭಾಷಾ ವ್ಯಾಪಕ ನಿಘಂಟುಗಳ ಹೊಸ ವಿಧವಾಗಿ ಹೊಸ ಕಂಬಸಾಲಿನಲ್ಲಿ ಸ್ಥಳ ಪಡೆಯುತ್ತದೆ. ಇದರಲ್ಲಿ ಯಾವುದೇ ನಿಘಂಟನ್ನು ಅದರ ಸ್ಥಾನದಲ್ಲಿ ನೋಡಿದರೆ ಅದು ಎಷ್ಟು ಭಾಷೆಗಳನ್ನು ಒಳಗೊಂಡಿದೆ, ಸ್ಥೂಲವಾಗಿ ಅದರಲ್ಲಿರುವ ಉಲ್ಲೇಖ ಪದಗಳ ಪ್ರಮಾಣವೆಷ್ಟು ಮತ್ತು ಓದುಗರು ತಮ್ಮ ಯಾವ ರೀತಿಯ ಉಪಯೋಗಕ್ಕಾಗಿ ಅದನ್ನು ಬಳಸಬಹುದು ಎಂಬ ವಿವರಗಳನ್ನು ತಿಳಿಯಬಹುದು. ಇದು ಸಾಮಾನ್ಯ ಓದುಗರಿಗೆ ಈ ವರ್ಗೀಕರಣದಿಂದ ಆಗುವ ಪ್ರಯೋಜನ.

ಕನ್ನಡದಲ್ಲಿ ಪ್ರಮಾಣಭೂತವಾದ ಉಪಭಾಷಾ ನಿಘಂಟೊಂದು ಮಾತ್ರ ಇದ್ದು ಇಂತಹ ನಿಘಂಟುಗಳು ಇತರ ಉಪಭಾಷೆಗಳಿಗೆ ಇನ್ನಷ್ಟೇ ರಚನೆಯಾಗಬೇಕಿದೆ. ಅದರಲ್ಲೂ ಒಂದು ಉಪಭಾಷೆಯ ಉಲ್ಲೇಖ ಪದಗಳಿಗೆ ಶಿಷ್ಟಕನ್ನಡದಲ್ಲಿ ಅರ್ಥ ಹೇಳುವಂತಹ, ಒಂದು ಉಲ್ಲೇಖ ಪದಕ್ಕೆ ಕನ್ನಡದ ಇತರ ಉಪಭಾಷೆಗಳ 'ಜ್ಞಾತಿ'ಗಳನ್ನು ನೀಡುವಂತಹ ನಿಘಂಟುಗಳ ರಚನೆ ಆಗಿಯೇ ಇಲ್ಲ. ಇಂತಹ ತುಲನಾತ್ಮಕ ಪ್ರಕ್ರಿಯೆಗಳಿಂದ ಕನ್ನಡ ಪದಗಳ ಸ್ವರೂಪ ಇನ್ನಷ್ಟು ಸ್ಪಷ್ಟವಾಗಬಹುದು. ವಿವರಣಾತ್ಮಕ ನಿಘಂಟುಗಳು ಇನ್ನೂ ಹಲವು ತರಹದವು ಬರಬಹುದಾಗಿದೆ. ಉದಾಹರಣೆಗೆ ರಾಮಾಯಣದ ಹೆಸರುಗಳ ಕೋಶ, ವೇದೋಪನಿಷತ್ತುಗಳಲ್ಲಿನ ಹೆಸರುಗಳ ಕೋಶ ಇತ್ಯಾದಿ. ಆಡಳಿತ, ವಿಜ್ಞಾನ, ಶಿಕ್ಷಣ, ಮನೋವಿಜ್ಞಾನ ಇಂತಹ ಕೆಲವು ಕ್ಷೇತ್ರಗಳಿಗೆ ಸಂಬಂಧಿಸಿದವನ್ನು ಹೊರತುಪಡಿಸಿದರೆ ವಿಜ್ಞಾನದ ವಿವಿಧ ಶಾಖೆಗಳಿಗೆ ಸಂಬಂಧಿಸಿದ, ತತ್ವ ಶಾಸ್ತ್ರ ಸಮಾಜ ಶಾಸ್ತ್ರ ಇತ್ಯಾದಿಗಳಿಗೆ ಸಂಬಂಧಿಸಿದ, ತಂತ್ರಜ್ಞಾನ ಗಣಕವಿಜ್ಞಾನ ಮುಂತಾದುವುಗಳಿಗೆ ಸಂಬಂಧಿಸಿದ ವಿಶೇಷ ನಿಘಂಟುಗಳು ಇನ್ನೂ ಬರಬೇಕಾಗಿದೆ. ಕನ್ನಡ ರತ್ನಕೋಶದಷ್ಟು ಅಥವ ಅದಕ್ಕಿಂತ ಹೆಚ್ಚು ಸಮರ್ಥವಾದ, ಕಡಿಮೆ ಬೆಲೆಯ ಆಧುನಿಕ ಸಂಕ್ಷಿಪ್ತ ನಿಘಂಟುಗಳಿಗೆ ಒಳ್ಳೆಯ ಅವಕಾಶಗಳಿರಬಹುದು. ಪರ್ಯಾಯ ನಿಘಂಟುಗಳ ಕ್ಷೇತ್ರದಲ್ಲಿ ಇನ್ನೂ ಅನ್ವೇಷಣೆಗಳಾಗ ಬೇಕಾಗಿದೆ; ಈ ಕ್ಷೇತ್ರದ ಸಾಧ್ಯತೆಗಳನ್ನು ಇನ್ನೂ ಪೂರ್ಣವಾಗಿ ದುಡಿಸಿಕೊಳ್ಳಲಾಗಿಲ್ಲ ವೆಂದೆನಿಸುತ್ತದೆ. ಒಂದೇ ಪರ್ಯಾಯ ಕೋಶ ಕನ್ನಡ ನಿಘಂಟು ಇತಿಹಾಸದಲ್ಲಿ ಲಭ್ಯವಿದೆ; ಅದೂ ಗತಕಾಲಕ್ಕೆ ಸೇರಿಹೋಗಿದ್ದು ಕಿಸಮ್ ವಾರ್ ಗ್ಲೋಸರಿಯ ಪರಿಷ್ಕರಣೆ ಮತ್ತು ವಿಸ್ತರಣೆ ಅಗತ್ಯವಾಗಿದೆ; ಏಕಭಾಷಾ ಪರ್ಯಾಯ ಕೋಶಗಳ ರಚನೆಯಾಗ ಬೇಕಾಗಿದ್ದು ಹೊಸ ಬಗೆಯ ಮುಂದುವರೆದ ಪರ್ಯಾಯ ನಿಘಂಟು ಸಂಕಲಿತವಾಗ ಬೇಕಾಗಿದೆ. ಜ್ಞಾತಿಪದ ಕೋಶವನ್ನು ದಕ್ಷಿಣ ಭಾರತದ ದ್ರಾವಿಡ ಭಾಷೆಗಳ ಜೊತೆಗೆ ಉಳಿದ ಇಪ್ಪತ್ತಕ್ಕೂ ಹೆಚ್ಚಾಗಿ ಅಸ್ತಿತ್ವದಲ್ಲಿರುವ ಇತರ ದ್ರಾವಿಡ ಭಾಷೆಗಳ ಪದಗಳನ್ನೂ ಸೇರಿಸಿ ಪರಿಪೂರ್ಣಗೊಳಿಸಬೇಕಾಗಿದೆ. ಕನ್ನಡ ಮತ್ತು ಇತರ ದ್ರಾವಿಡ ಭಾಷೆಗಳ ನಡುವಣ ದ್ವಿಭಾಷಾ ನಿಘಂಟುಗಳ ರಚನೆ ದ್ರಾವಿಡಭಾಷೆಗಳ ಸಾಹಿತ್ಯಿಕ ಸಾಂಸ್ಕೃತಿಕ ಸಂಬಂಧಗಳನ್ನು ಉತ್ತಮಪಡಿಸಲು ಸಹಾಯಕವಾಗಬಹುದು.

ಗ್ರಂಥ ಋಣ:

1. http://grammar.about.com/od/il/g/lexicogterm.htm- ಮೊದಲ ನಿಘಂಟುಗಳು ಉಂಟಾಗಿರಬಹುದಾದ ರೀತಿಯ ವವರ ಇಲ್ಲಿದೆ. Howard Jackson, Lexicography: An

Introduction. Routledge, 2002 ಇದರಿಂದ ಉಲ್ಲೇಖಿತ.

2. http://encyclopedia2.thefreedictionary.com/Metalexicography ಈ ತಾಣವು ಈಗ ಹಳತಾಗಿದ್ದು ಏಕಪಕ್ಷೀಯವಾಗಿರಬಹುದೆಂಬ ಎಚ್ಚರಿಕೆಯನ್ನು ಅಲ್ಲಿಯೇ ನೀಡದೆ. ಆದರೂ ಈ ರೀತಿಯ ಹಂತ ಕಲ್ಪನೆ ನಿಘಂಟು ಬೆಳವಣಿಗೆಯನ್ನು ತಾರ್ಕಿಕವಾಗಿ ಸೂಚಿಸತ್ತಿದೆ.
3. https://kanaja.in/archives/125658 ಇದರಲ್ಲಿ ನಿಘಂಟುಗಳು ಮತ್ತು ಅವುಗಳ ಚರಿತ್ರೆಯ ಬಗ್ಗೆ ಎಸ್ ಎಸ್ ಅಂಗಡಿ ಮತ್ತು ಎನ್ ಬಸವಾರಾಧ್ಯ ಇವರ ಲೇಖನಗಳಿಂದ ಹಲವು ನಿಘಂಟುಗಳ ವಿವರಗಳನ್ನು ಸಂಗ್ರಹಿಸಿದೆ.
4. http://www.worldcat.org/wcidentities/lccn-n88154575 ಇದೊಂದು ಆನ್‌ಲೈನ್ ಮಾರಾಟ ತಾಣವಾಗಿದ್ದು ಕಿಸಮ್ ವಾರ್ ಗ್ಲೋಸರಿಯ ಮೂರು ಆವೃತ್ತಿಗಳಿರುವುದು ಇಲ್ಲಿರುವ ವಿವರಗಳಿಂದ ಸ್ಪಷ್ಟವಾಗುತ್ತದೆ.
5. ಕೇಶಿರಾಜ, 1260. ಶಬದಮಣಿದರ್ಪಣಂ. ಇದರ ಐದು ಆವೃತ್ತಿಗಳು ಲಭ್ಯವಿವೆ. ಕಿಟೆಲ್, ವೆಂಕಟರಾವ್ ಮತ್ತು ಶೇಷಯ್ಯಂಗಾರ್, ಡಿ ಎಲ್ ನರಸಿಂಹಾಚಾರ್, ಡಿ ಪದ್ಮನಾಭ ಶರ್ಮ – ಇವರುಗಳಿಂದ ಸಂಪಾದಿತ ಆವೃತ್ತಿಗಳು. ಗ್ಯಾರೆಟ್ ಸಂಪಾದಿತ ಾವೃತ್ತಿಯೊಂದಿರುವುದಾಗಿ ಉಲ್ಲೇಖಗಳಿವೆ.
6. ಜುಗುಸ್ತ, ಲ್ಯಾಡಿಸ್ಲಾವ್, 1971. A Manual of Lexicography. (Prague: Czechoslovak Academy of Sciences).
7. ಧಾರವಾಡಕರ, 1975. ಹೊಗನ್ನಡ ಸಾಹಿತ್ಯದ ಉದಯ ಕಾಲ. (ಧಾರವಾಡ: ಕರ್ನಾಟಕ ವಿವಿ).
8. ಪೋಧಜೆಕ್ಕ, ಮಿರಾಸ್ಲಾವಾ www.lingref.com/cpp/hel-lex/2008/paper2174.pdf by M Podhajecka - 2009: Historical Development of Lexicographical Genres: Some Methodological Issues.
9. ಮಹೀದಾಸ ಬಿ ವಿ,2010. ಕನ್ನಡ ಶಾಸ್ತ್ರ ಸಾಹಿತ್ಯಕ್ಕೆ ಕ್ರೈಸ್ತ ಮಿಶನರಿಗಳ ಕೊಡುಗೆ. (ಶ್ರೀನಿವಾಸ ಪುಸ್ತಕ ಪ್ರಕಾಶನ, ಬಸವನ ಗುಡಿ, ಬೆಂಗಳೂರು). ಇದರಲ್ಲಿ ಹಳಗನ್ನಡ ಸಂಕ್ಷಿಪ್ತ ನಿಘಂಟುಗಳ ಮತ್ತು ಹತ್ತೊಂಬತ್ತನೆಯ ಶತಮಾನದಲ್ಲಿ ಕ್ರೈಸ್ತ ಮಿಶನರಿಗಳು ರಚಿಸಿದ ಹತ್ತು ನಿಘಂಟುಗಳನ್ನು ವಿಮರ್ಶಾತ್ಮಕವಾಗಿ ಚರ್ಚಿಸಿದ್ದೇನೆ.
10. ಮಹೀದಾಸ ಬಿ ವಿ, 1997. ಕನ್ನಡ ವ್ಯಾಕರಣಗಳ ಹೊಸ ಸಮೀಕ್ಷೆ ಮತ್ತು ಇತರ ಪ್ರಬಂಧಗಳು (ಯುಗಪುರುಷ ಪ್ರಕಟನಾಲಯ, ಕಿನ್ನಿಗೋಳಿ, ಮಂಗಳೂರು ದ ಕ). ಇದರಲ್ಲಿ ಹತ್ತೊಂಬತ್ತನೆಯ ಶತಮಾನದ ನಿಘಂಟುಗಳ ಜೊತೆಗೆ ಇಪ್ಪತ್ತನೆಯ ಶತಮಾನದಲ್ಲಿ ಕನ್ನಡಕ್ಕೆ ಸಂಬಂಧಿಸಿ ರಚಿತವಾದ ನಿಘಂಟುಗಳನ್ನೂ ಸೇರಿಸಿ ಚರ್ಚಿಸಿದ್ದೇನೆ.
11. ಸೀತಾರಾಮಯ್ಯ, ಎಮ್ ವಿ 1975. ಶಾಸ್ತ್ರ ಸಾಹಿತ್ಯ (ಬೆಂಗಳೂರು ವಿ ವಿ)
12. ಸ್ವಾನಪೋಲ್, ಪೀಟ್ 2003. Dictionary typologies: A Pragmatic Approach. In Piet van Sterkenburg (ed.) A Practical Guide to Lexicography. Amsterdam and Philadelphia: John Benjamins. 44–69.
13. Dictionary in Wikipedia.

ವಿದ್ವತ್ ವಲಯದ 'ವ್ಯಾಧಿ'

ಬಡತನ, ಹಿಂದುಳಿದಿರುವಿಕೆ ಇತ್ಯಾದಿ.

ಎಚ್. ಆನಂದರಾಮ ಶಾಸ್ತ್ರೀ

'ಚಿಂತನ ಬಯಲು' ಜನವರಿ–ಮಾರ್ಚ್ 2016 ರ ಸಂಚಿಕೆಯ ಎರಡು ಬರಹಗಳು ನನ್ನನ್ನು ಚಿಂತನಕ್ಕೆಳೆದಿವೆ.

(ವೈವಿಧ್ಯಮಯವೂ ವಿಚಾರಪ್ರದವೂ ಗಂಭೀರವೂ ಆದ) ಸಂಶೋಧನ ಲೇಖನಗಳ ಕುರಿತು ಕನ್ನಡದ ಅಕಡೆಮಿಕ್ ವಿದ್ವತ್ ವಲಯವು ಹೊಂದಿರುವ ನಿರಾಸಕ್ತಿಗಾಗಿ ವಿಷಾದ ವ್ಯಕ್ತಪಡಿಸಿರುವ ಸಂಪಾದಕೀಯ ಬರಹವು ಜ್ಞಾನಜಿಜ್ಞಾಸುಗಳ ಮನತಟ್ಟುವಂತಿದೆ. ಕ.ಅ.ವಿ. ವಲಯದ ವಾಚನಾಭಿರುಚಿ ಶೂನ್ಯತೆ, ನಿರಾಸಕ್ತಿ, ಆಳ–ನಿರಾಳ ಇವುಗಳ ಬಗ್ಗೆ (ಸಂಪಾದಕೀಯದಲ್ಲಿ ಓದಿ) ನನಗೆ ಬೇಸರವಾಯಿತಾಗಲೀ ಆಶ್ಚರ್ಯವಾಗಲಿಲ್ಲ.

ಕ.ಅ.ವಿ. ವಲಯವು ಮೌಲಿಕ ಅಧ್ಯಯನದಿಂದ ಎಂದೋ ವಿಮುಖವಾಗಿಬಿಟ್ಟಿದೆ. ಹಾಗೆಂದ ಮಾತ್ರಕ್ಕೆ, ನಮ್ಮ ಅಕಾಡೆಮಿಕ್ ವಿದ್ವಾಂಸರು ಉತ್ತಮವಾದುದೇನನ್ನೂ ಓದುತ್ತಲೇ ಇಲ್ಲ ಎಂದರ್ಥವಲ್ಲ. ಓದುತ್ತಾರೆ. ಆದರೆ, ವ್ಯಾವಹಾರಿಕ ಉದ್ದೇಶಗಳನ್ನಿಟ್ಟುಕೊಂಡು, ಆ ಉದ್ದೇಶ ಸಾಧನೆಗೆ ಅಗತ್ಯವಾಗಿರುವ ಅಥವಾ ಅನಿವಾರ್ಯವಾಗಿರುವ ಲೇಖನಗಳನ್ನು–ಪುಸ್ತಕಗಳನ್ನು ಓದುತ್ತಾರೆ ಸಿವಾಯ್ ಜ್ಞಾನಪಿಪಾಸುಗಳಾಗಿ ಜ್ಞಾನದ ವಿವಿಧ ಶಾಖೆಗಳ ಅಧ್ಯಯನದಲ್ಲಿ ತೊಡಗುವುದಿಲ್ಲ. ಹಾಗೆ ತೊಡಗಲು ಅವರಿಗೆ, ಲಾಭರಾಹಿತ್ಯ, ಸಮಯಾಭಾವ, ವಿವಿಧ ಆಕಾಂಕ್ಷೆಗಳು, ಉಪ–ಭೋಗ ಮೊದಲಾದವುಗಳು ಅಡ್ಡಬರುತ್ತವೆ.

ವಿದ್ಯಾರ್ಥಿಗಳಿಗೆ ಪಾಠ ಹೇಳುವುದು ನಮ್ಮ ಇಂದಿನ ಅಕಡೆಮಿಕ್ ವಿದ್ವಾಂಸರಿಗೆ ಕೇವಲ ಒಂದು ಯಾಂತ್ರಿಕ ಕ್ರಿಯೆ; ಜೀವನೋಪಾಯದ ಮಾರ್ಗ. ವಿದ್ಯಾರ್ಥಿಗಳ ಜ್ಞಾನವಿಕಾಸದ ಮತ್ತು ಮನೋವಿಕಾಸದ ತುಡಿತ ಈ ವಿದ್ವಾಂಸರಲ್ಲಿ ನಾಸ್ತಿ. ಪರಿಣಾಮ, ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ತೇರ್ಗಡೆ ಗೊಂದಲು ಏನು ಬೇಕೋ, ಅದಷ್ಟನ್ನೇ, ಎಷ್ಟು ಬೇಕೋ (ಎಷ್ಟು ಸಾಕೋ) ಅಷ್ಟೇ ಓದಿಕೊಂಡು ಅದನ್ನಷ್ಟನ್ನೇ ವಿದ್ಯಾರ್ಥಿಗಳಿಗೆ ಹೇಳಿ ಕೈ ತೊಳೆದುಕೊಂಡು ಬಿಡುತ್ತಾರೆ. ಅಂದ ಮೇಲೆ, ಈ ವಿದ್ವಾಂಸರಿಗೆ ಹೆಚ್ಚಿನ ಓದಿನ ಅಗತ್ಯವಾದರೂ ಏನು?

ತಿಳಿದುಕೊಳ್ಳಬೇಕೆಂಬ ಆಸಕ್ತಿ ಮತ್ತು ಕುತೂಹಲ ಇದ್ದರೆ ಮಾತ್ರ ಹೆಚ್ಚಿನ ಓದು, ಗಂಭೀರ ಓದು, ವೈವಿಧ್ಯಮಯ ಓದು ಸಾಧ್ಯ. ಅಂತಹ ಕುತೂಹಲಾಸಕ್ತಿಗಳು ಇಂದಿನ ಬಹುಪಾಲು ಅಕಡೆಮಿಕ್ ವಿದ್ವಾಂಸರಲ್ಲಿ ಇಲ್ಲ. ಇದಕ್ಕೆ ಕಾರಣಗಳು ಹಲವು.

ತಾವು ಕಲಿತು ಬಂದ ವಾತಾವರಣ; ಇಂದಿನ ಶಿಕ್ಷಣ ಪದ್ಧತಿ; ಶಿಷ್ಯರ ಭವಿಷ್ಯತ್ತಿನ ಜೀವನಾಧಾರವಾಗಿ ಮಾತ್ರ ಶಿಕ್ಷಣ; ಟಿ.ವಿ.; ಸಿನೆಮಾ; ರಂಗು ರಂಗಿನ ಲೈಫ್‌ಸ್ಟೈಲ್ ದಿನಪತ್ರಿಕೆಗಳು ಮತ್ತು ಮ್ಯಾಗಜಿನ್‌ಗಳು; ಕಾರು; ಬಾರು; ಬಂಗಲೆ; ಮಾಲ್..... ಮೊದಲಾದ ಭೋಗಗಳು; ಸ್ವಯಂಕೃತಾಪರಾಧವೆನ್ನಬಹುದಾದ ಯಾಂತ್ರಿಕ ದಿನಚರಿ ಇವು ಅಂತಹ ಕೆಲವು ಕಾರಣಗಳು.

ಹ್ಞಾ! ಕೆಲವೊಮ್ಮೆ ನಮ್ಮೀ ವಿದ್ವಾಂಸರು ಪಠ್ಯೇತರ–ಉದ್ಯೋಗೇತರ ಗಂಭೀರ ಕೃತಿಗಳನ್ನು ಓದುತ್ತಾರೆ! ಆ ಕೃತಿಯ ಅಥವಾ ಕೃತಿಕಾರನ ಕುರಿತು ಪತ್ರಿಕೆಯಲ್ಲಿ ಬರೆಯಬೇಕಾದಾಗ ಅಥವಾ ಟಿ.ವಿ.ಯಲ್ಲೋ ಸಭೆಯಲ್ಲೋ ಮಾತನಾಡಬೇಕಾದಾಗ ಅಥವಾ ಯಾವುದಾದರೂ

ಸ್ಥಾನ–ಮಾನ (ಅರ್ಥಾತ್ ಅಕಡೆಮಿಗಳ ಸ್ಥಾನ–ಪ್ರಶಸ್ತಿಗಳ ಮಾನ) ಗಿಟ್ಟಿಸಲು ಯಾರನ್ನಾದರೂ ಹೊಗಳಿ ಸಂತೋಷಪಡಿಸಬೇಕಾದಾಗ ಮಾತ್ರ! ಲಾಭೋದ್ದೇಶದಿಂದ ಆ ಓದು, ಹೊರತು, ಜ್ಞಾನ ಪಿಪಾಸೆಯಿಂದಲ್ಲ. ಇಂಥ ಓದು, ಆಳವಿಲ್ಲದ, ಮೇಲ್ಪದರದ ಓದಾಗಬಲ್ಲುದೇ ವಿನಾ ಕೃತಿಯ ಆಳಕ್ಕೆ ಹೋಗಿ ಮಥಿಸುವ ಓದಾಗಲಾರದು.

ಮೌಲಿಕ ಅಧ್ಯಯನಕ್ಕೆ ಇಂದು ಅಂತರ್ಜಾಲವು ಒಂದು ಅಡ್ಡಿಯಾಗಿದೆ. ಆ ಕ್ಷಣದಲ್ಲಿ ನಮಗೆ ಬೇಕೆನ್ನಿಸುವ ಯಾವುದೇ ಮಾಹಿತಿಯನ್ನು ಕೇವಲ ಒಂದು ಬಟನ್ ಒತ್ತಿ ನಾವು ಪಡೆದುಬಿಡುವುದರಿಂದಾಗಿ ನಮ್ಮ ಮಾಹಿತಿ ಅರ್ಜನೆ ಅಲ್ಲಿಗೇ ಸ್ಟಾಪ್ ಆಗಿಬಿಡುತ್ತದೆ. ವಿಷಯದ ಸಮಗ್ರತೆಯನ್ನಾಗಲೀ ವಿಷಯದ ಸುತ್ತಲಿನ ಪ್ರಭಾವಲಯವನ್ನಾಗಲೀ, ನಾವು ಅರಿಯುವ ಗೋಜಿಗೇ ಹೋಗುವುದಿಲ್ಲ. ಸಂಶೋಧನೆಯನ್ನರಿಯುವ ಮನಸ್ಸಂತೂ ದೂರವೇ ಉಳಿಯಿತು. ಇಷ್ಟಾಗಿ, ಆ ಅಂತರ್ಜಾಲದಲ್ಲಿ ನಾವು ಕ್ಲಿಕ್ ಮಾಡಿದ ಮಾಹಿತಿಯು ಅನಧಿಕೃತವೂ, ಅರ್ಧ ಸತ್ಯ, ಅಸತ್ಯ ಅಥವಾ ಅಪೂರ್ಣವೂ, ವಿದ್ವತ್‌ರಹಿತವೂ, ವಿಚಾರಶೂನ್ಯವೂ, ಜವಾಬ್ದಾರಿರಹಿತವೂ ಆಗಿರುವ ಸಾಧ್ಯತೆಯೇ ಹೆಚ್ಚು. ('ಮಾಹಿತಿ' ಎಂಬ ಪದವನ್ನು ನಾನಿಲ್ಲಿ, ಸೃಜನಾತ್ಮಕ, ಸೃಜನೇತರ, ಸಂಶೋಧನಾತ್ಮಕ, ವೈಚಾರಿಕ ಇತ್ಯಾದಿ ಎಲ್ಲ ಬಗೆಯ ಬರಹಗಳಿಗೂ ಅನ್ವಯವಾಗುವಂತೆ ಬಳಸಿದ್ದೇನೆ.)

ಕನ್ನಡದ ಅಕಡೆಮಿಕ್ ವಿದ್ವತ್ ವಲಯದಲ್ಲಿ ಸಕಲರೂ ಹೀಗೆಯೇ ಎಂದು ನಾನು ಹೇಳುತ್ತಿಲ್ಲ. ಬಹುತೇಕರು ಹೀಗೆಯೇ ಎನ್ನುವುದು, ನನ್ನ ಚಿಂತನೆಗೆ ಮಾತ್ರವಲ್ಲ, ಅನುಭವಕ್ಕೂ ಬಂದಿರುವ ಸತ್ಯ.

ಒಂದೆರಡು ತಲೆಮಾರುಗಳ ಹಿಂದೆ ಪರಿಸ್ಥಿತಿ ಹೀಗಿರಲಿಲ್ಲ. ಮೌಲಿಕವೂ ವಿಸ್ತಾರವೂ ಆದ ಓದಿಗೆ ಈಗಿರುವಂತಹ ಅಡ್ಡಿಗಳಲ್ಲಿ ಬಹುಪಾಲು ಅಡ್ಡಿಗಳು ಆಗ ಇರಲಿಲ್ಲ. ಎಂದೇ, ಎಂಥೆಂಥ ಘನ ವಿದ್ವಾಂಸರನ್ನು ಆಗ ನಾವು ಪಡೆದೆವು!

'ಚಿಂತನ ಬಯಲು' ಒಂದು ಜರ್ನಲ್ ಆಗಿರುವುದರಿಂದ ಮತ್ತು ಉಲ್ಲೇಖಿತ ಸಂಪಾದಕೀಯವು ಜರ್ನಲ್‌ಗಳ–ಸಂಶೋಧನಾತ್ಮಕ ಲೇಖನಗಳ ಓದಿನ ಬಗ್ಗೆ ವಿಶೇಷವಾಗಿ ಹೇಳುತ್ತಿರುವುದರಿಂದ, ಕನ್ನಡದ ಕೆಲವು ಜರ್ನಲ್‌ಗಳನ್ನೇ ಉಲ್ಲೇಖಿಸಿ ಸ್ಥಿತ್ಯಂತರವನ್ನು ವಿಷದಪಡಿಸಲಿಚ್ಛಿಸುತ್ತೇನೆ.

'ಪ್ರಬುದ್ಧ ಕರ್ನಾಟಕ'ಕ್ಕೆ ಸಾಕಷ್ಟು ಸಂಖ್ಯೆಯಲ್ಲಿ ಪ್ರಬುದ್ಧ ಓದುಗರಿದ್ದರು. ನಮ್ಮ ಅಕಡೆಮಿಕ್ ವಲಯದ ವಿದ್ವಾಂಸರಲ್ಲಿ ಬಹುತೇಕರು ಆ ಜರ್ನಲ್‌ನ ಓದುಗರಾಗಿದ್ದರು. ಬಹುಕಾಲ ಅದು ಬೆಳಗಿತು.

'ಸಾಕ್ಷಿ'ಯಲ್ಲೂ ಈ ಪರಂಪರೆ ಮುಂದುವರಿಯಿತು. 'ಸಂಕ್ರಮಣ'ದ ಹೊತ್ತಿಗೆ ವಿದ್ವತ್ ವಲಯವನ್ನು ಅಡ್ಡಿ–ಆಮಿಷಗಳು ಆವರಿಸತೊಡಗಿದವು; ಶಿಕ್ಷಣದ ಉದ್ದೇಶವೂ ಜೀವನ ನಿರ್ವಹಣೆ ಮತ್ತು ಧನಾರ್ಜನೆಯ ಚೌಕಟ್ಟಿನೊಳಗೆ ಹುದುಗಿಕೊಳ್ಳತೊಡಗಿತು. ಅದಕ್ಕೆ ಸರಿಯಾಗಿ 'ಸಂಕ್ರಮಣ'ವೂ ತೆಳುವಾಗತೊಡಗಿತು; ವಿದ್ವತ್ ವಲಯದಿಂದ ಸಾಮಾನ್ಯ ವಲಯದೆಡೆಗೆ ಸಾಗಿತು. ಅಡ್ಡಿ–ಆಮಿಷಗಳ ಗಾಳಿಗೆ ಪಕ್ಕಾಗುತ್ತಿದ್ದ ವಿದ್ವತ್ ವಲಯದೆದುರು ಕಾಣಿಸಿಕೊಂಡ 'ರುಜುವಾತು' ಒಂದು ವರ್ಗಕ್ಕೆ ಸೀಮಿತಗೊಂಡಂತಾಗಿ, ಕ್ರಮೇಣ ಕಣ್ಣುಮುಚ್ಚಿತು. ನಾನು ಈ ಬರಹದಲ್ಲಿ ಹೇಳಿರುವ ಎಲ್ಲ ಅಡ್ಡಿ–ಆಮಿಷಗಳೂ ಮೆರೆಯುತ್ತಿದ್ದ ಕಾಲದಲ್ಲಿ ಬಂದ 'ದೇಶ ಕಾಲ'ವೂ ಭ್ರಮನಿರಸನ ಹೊಂದಿ ತಣ್ಣಗಾಯಿತು. 'ಚಿಂತನ ಬಯಲು' ಹೋರಾಡುತ್ತಿದೆ.

ಈ ಹೋರಾಟದಲ್ಲಿ ಯಶಸ್ಸು ಅಸಾಧ್ಯವೇನಲ್ಲ. ಕನ್ನಡದ ಅಕಡೆಮಿಕ್ ವಿದ್ವತ್ ವಲಯವು ಅಡ್ಡಿ–ಆಮಿಷಗಳಿಂದ ಕೊಂಚ ಈಚೆ ಬಂದು, ಓದಿನ ಸುಖದ ಬಗ್ಗೆ,ಮೌಲಿಕ ಓದಿನ ಸುಖದ ಬಗ್ಗೆ, ಮೌಲಿಕ ಓದಿನಿಂದ ಉಂಟಾಗುವ ಮನೋವಿಕಾಸದ ಬಗ್ಗೆ, ಆ ಮನೋವಿಕಾಸವು ನೀಡಬಲ್ಲ ಆನಂದದ ಬಗ್ಗೆ, ತಮ್ಮ ವಿದ್ವತ್ ಶಕ್ತಿಗೆ ತಕ್ಕ ಕೆಲಸ ಕೊಡುವ ಬಗ್ಗೆ, ಇವೆಲ್ಲವುಗಳ ದ್ವಾರಾ ಹೊಂದಬಲ್ಲ ಜೀವನ ಸಾರ್ಥಕ್ಯದ ಬಗ್ಗೆ ಕೊಂಚ ಯೋಚಿಸಿದರೆ ಸಾಕು; 'ಚಿಂತನ ಬಯಲು'ವಿನಂತಹ ಮೌಲಿಕ ಜರ್ನಲ್‌ಗಳ ಹೋರಾಟ–ಉಳಿವು, ಬೆಳವಣಿಗೆಗಳ ಹೋರಾಟ, ಬೌದ್ಧಿಕ ರಂಗದ ಹೋರಾಟ–ಯಶಸ್ವಿಯಾಗುತ್ತದೆ.

ಸಂಪಾದಕೀಯಕ್ಕೆ ಪ್ರತಿಕ್ರಿಯೆ ಇದಾಯಿತು. ಇನ್ನು ನಾನು ಹೇಳ ಹೊರಟಿರುವುದು ಡಾ. ಅಜಕ್ಕಳ ಗಿರೀಶ ಭಟ್ ಅವರ ಲೇಖನ, 'ಮಾಧ್ಯಮಾವಲಂಬಿತ ಯುಗದಲ್ಲಿ ಬಡತನ, ಹಿಂದುಳಿದಿರುವಿಕೆ ಇತ್ಯಾದಿ', ಬಗ್ಗೆ. ಭಟ್ ಅವರ ಈ ಲೇಖನವು ಗಿರೀಶ್ ವಿ.ವಾಘ್ ಅವರ ಲೇಖನವೊಂದರ ಹಿನ್ನಲೆಯಲ್ಲಿ ಚಿಂತಿಸಿದಾಗ ಮೂಡಿಬಂದದ್ದು.

'ಬಡತನ, ಹಿಂದುಳಿದಿರುವಿಕೆ, ಮೀಸಲು, ಸಹಾಯ(ಧನ) ('ಭಾಗ್ಯ–ಯೋಜನೆ'), ಅಭಿವೃದ್ಧಿ, ಪ್ರಗತಿ, ಸಮಾನತೆ, ಸಮಾಜ ಮಾಧ್ಯಮ' ಇವು ಇಂದು ನಮ್ಮ ದೇಶದಲ್ಲಿ ಬಹುಚರ್ಚಿತ ಪದಗಳು. ಆ ಎಲ್ಲ ಚರ್ಚೆಗಳೂ ರಾಜಕಾರಣದ ನೆಲೆಗಟ್ಟಿನಲ್ಲಿ ಸಾಗುತ್ತವೆ ಮತ್ತು ಚರ್ಚೆಯ ಒಂದಲ್ಲ ಒಂದು ಹಂತದಲ್ಲಿ ಸಮೂಹ ಮಾಧ್ಯಮಗಳ ಪಾತ್ರವು ಪ್ರಧಾನ ಭೂಮಿಕೆ ವಹಿಸುತ್ತದೆ. ರಾಜಕಾರಣವು ದೇಶವನ್ನು ಆಳುತ್ತಿರುವುದರಿಂದ, ಮತ್ತು, ಮಾಧ್ಯಮವು ಪ್ರಜೆಗಳ ಮತ್ತು ಪ್ರಭುವಿನ ನಡುವಣ ಸೇತುವೆ, ಕಂದಕ, ಕೆಟಲಿಸ್ಟ್, ಬಾಂಬ್, ಉಗ್ರಗಾಮಿ, ಪೊಲೀಸ್, ನ್ಯಾಯಾಧೀಶ.... ಎಲ್ಲವೂ ಆಗಿ ಅಟ್ಟಹಾಸಗೈಯುತ್ತಿರುವುದರಿಂದ ಈ ಸ್ಥಿತಿ ಬಂದೊದಗಿದೆ. ಇಂತಹ ಪರಿಸ್ಥಿತಿಯಲ್ಲಿ, ಮೇಲ್ಕಂಡ 'ಬಡತನ...' ಇತ್ಯಾದಿ ವಿಷಯಗಳ ಕುರಿತ ಅವಲೋಕನ ಹೇಗಿರಬೇಕು? ಹೇಗಿದೆ? ಈ ಪ್ರಶ್ನೆಗಳಿಗೆ ಉತ್ತರವನ್ನು, ಪ್ರಸ್ತುತ ವಿದ್ಯಮಾನಗಳ ಹಿನ್ನೆಲೆಯಲ್ಲಿ ಮತ್ತು ನೆಲದ ವಾಸ್ತವದ ನೆಲೆಯಲ್ಲಿ, ಕಂಡುಕೊಳ್ಳುವ ಯತ್ನ ಗಿರೀಶರ ಬರಹವಾಗಿದೆ. ಪ್ರಯತ್ನವು ಪ್ರಮಾಣಿಕವಾಗಿದೆ, ವಸ್ತುನಿಷ್ಠವಾಗಿದೆ, ಬರಹವು ನೇರವಾಗಿದೆ, ಸರಳವಾಗಿದೆ; (ಆದರೂ) ಅಲ್ಲಿ ಚರ್ಚೆಗೆ ವಿಪುಲ ಅವಕಾಶಗಳಿವೆ. ಏಕೆಂದರೆ, ವಿಷಯವೇ ಅಂಥದ್ದಾಗಿದೆ. ಸರ್ಕಾರದ ವ್ಯಾಖ್ಯೆ ಮತ್ತು ನಡೆ; ಮಾಧ್ಯಮಗಳ ಧೋರಣೆ ಮತ್ತು ಕಾರುಬಾರು ಇವಿಷ್ಟೂ ಸದಾ ಚರ್ಚಾಸ್ಪದ ವಿಷಯಗಳೇ. ಚಿತ್ರಕಲಾವಿದ ರಚಿಸಿದ ಚಿತ್ರವೊಂದನ್ನು ಇಡಿಯಾಗಿಯೂ ಅಂಶಿಕವಾಗಿಯೂ ವಿಮರ್ಶಿಸಬಲ್ಲಂತೆ, ದೇಶವೆಂಬ ಬೃಹತ್ ಕ್ಯಾನ್‌ವಾಸಿನ ಮೇಲೆ ಗಿರೀಶ್ ವಿ.ವಾಘ್, ಗಿರೀಶ್ ಭಟ್ ಮತ್ತು ನಾನು ರಚಿಸಿರುವ ಈ ಒಂದು ಚಿತ್ರವನ್ನು ಒಟ್ಟಾರೆಯಾಗಿಯೂ, 'ಬಡತನ, ಹಿಂದುಳಿದಿರುವಿಕೆ....' ಇತ್ಯಾದಿಯಾಗಿ ಬಿಡಿಬಿಡಿ ಅಂಶವನ್ನು ಹಿಡಿದೂ ಚರ್ಚಿಸಬಹುದು. ಈ ಒಟ್ಟು ಚಿತ್ರಣದ 'ವಿರುದ್ಧ ಚಿತ್ರಣ'ವನ್ನೂ ಪ್ರತಿಪಾದಿಸಲು ಸಾಧ್ಯ! (ಇದು ಈ ವಿಷಯಕ್ಕಿರುವ ತಾಕತ್ತು.)

ಇಂಥ ಎಲ್ಲ ಚರ್ಚೆಗಳನ್ನೂ ಬೇರೆ ಪ್ರಾಜ್ಞರಿಗೆ ಬಿಟ್ಟು, ನಾನಿಲ್ಲಿ, ಗಿರೀಶರ ಕೆಲವು ಹೇಳಿಕೆಗಳ ಬಗ್ಗೆ ಮಾತ್ರ ಪ್ರತಿಕ್ರಿಯೆ ದಾಖಲಿಸುತ್ತೇನೆ.

ಮತದಾರರು ಧರ್ಮ, ಜಾತಿ, ಆಮಿಷ, ಅಭಿವೃದ್ಧಿ ಕಾರ್ಯ ಘೋಷಣೆ ಇವುಗಳಿಗೆ ಮರುಳಾಗುತ್ತಾರೆ..... ಎಂಬೆಲ್ಲ ಗ್ರಹಿಕೆಗಳಿವೆ; ಇದು ಸತ್ಯವೆಂದಾದರೆ ಪ್ರಜಾಪ್ರಭುತ್ವದ ಅರ್ಹತೆ ನಮಗಿದೆಯೇ? ಎಂದು ಗಿರೀಶರು ಪ್ರಶ್ನಿಸುತ್ತಾರೆ. ಇಲ್ಲಿ ಇನ್ನೂ ಅನೇಕ

ಪ್ರಶ್ನೆಗಳೇಳುತ್ತವೆ. ಮತದಾರರು ಮರುಳಾಗುವುದು ಎಷ್ಟರ ಮಟ್ಟಿಗೆ ಸತ್ಯ? ಎಷ್ಟು (ಸಂಖ್ಯಾ) ಪ್ರಮಾಣದಲ್ಲಿ ಹಾಗೆ ಮರುಳಾಗುತ್ತಾರೆ? 'ವಯಸ್ಕ ಮತದಾನ ಪದ್ಧತಿ'ಯು ನಮ್ಮ ದೇಶದಲ್ಲಿ ವಿಫಲವಾಗಿದೆಯೇ? ಸಫಲಗೊಳಿಸುವಲ್ಲಿ ಮಾಧ್ಯಮದ ಪಾತ್ರವೇನು? ಮತದಾರರಿಗೆ 'ಕನಿಷ್ಠ ವಿದ್ಯಾರ್ಹತೆ'ಯ ನಿಗದಿ ಸಾಧ್ಯವೇ? ಸಾದುವೇ? ಈ ಎಲ್ಲ ಪ್ರಶ್ನೆಗಳೆದ್ದು, ವಿಷಯವನ್ನು ಇನ್ನಷ್ಟು ಜಟಿಲ, ಸಂಕೀರ್ಣ ಮತ್ತು ಕುತೂಹಲಕರ ಆಗಿಸುತ್ತವೆ; ವಿಸ್ತಾರವಾದ ಚರ್ಚೆಗೆ ಅವಕಾಶ ತೆರೆದುಕೊಳ್ಳುತ್ತದೆ.

ಸುಶಿಕ್ಷಿತ ವರ್ಗದವರು ಹೆಚ್ಚು ಮತದಾನ ಮಾಡದಿದ್ದರೆ ತಮ್ಮ ಹಕ್ಕು ಬಹುಮತ ಗಳಿಸುತ್ತದೆ ಎಂಬರ್ಥದಲ್ಲಿ ಪುಢಾರಿಯೊಬ್ಬರು ಹೇಳಿದುದು ನಮ್ಮ ಪ್ರಜಾಪ್ರಭುತ್ವ ವ್ಯವಸ್ಥೆಯ ವ್ಯಂಗ್ಯವನ್ನು ಬಿಂಬಿಸುತ್ತದೆಂದು ಗಿರೀಶರು ಅಭಿಪ್ರಾಯಪಡುತ್ತಾರೆ. ಪುಡಾರಿಯ ಹೇಳಿಕೆಯಲ್ಲಿ ಸತ್ಯವಿದೆಯೇ? ಸತ್ಯವಿದ್ದರೆ, ಅದಕ್ಕೆ ಕಾರಣ ಜಾತಿಯೇ? ಸರ್ಕಾರಗಳ ನೀತಿಯೇ? ಮತದಾರನ ಮೂರ್ಖತನವೇ? ಬಡತನವೇ? ಅಥವಾ ಅಶಿಕ್ಷಿತ ಮತದಾರನ ಆಯ್ಕೆಯೇ ಸೂಕ್ತವೇ? ಸತ್ಯವಾಗಲೀ, ಒಳಿತಾಗಲೀ, ಈ ಪ್ರಶ್ನೆಗಳ ಮಧ್ಯೆ ಇದೆಯೇ? ಚರ್ಚೆಗೆ ಇಲ್ಲೂ ವಿಪುಲ ಅವಕಾಶ.

ಕೃಷಿಭೂಮಿ ಹೊಂದಿರುವವರ ಸಂಖ್ಯೆ ಕಡಿಮೆ ಇರುವಾಗ ಮತ್ತು ಕಡಿಮೆಯಾಗುತ್ತಿರುವಾಗ, ಉದ್ದಿಮೆಗಳಿಗೆ, ಬಂಡವಾಳ ಹೂಡಿಕೆಗೆ ಪ್ರೋತ್ಸಾಹ ನೀಡದಿದ್ದರೆ ಕೃಷಿರಹಿತ ಕುಟುಂಬಗಳ ಮುಂದಿನ ತಲೆಮಾರಿಗೆ ಆದಾಯದ ಮೂಲ ಎಲ್ಲಿಂದ ಬರಬೇಕು? ಎಂದು ಗಿರೀಶರು ಪ್ರಶ್ನಿಸುತ್ತಾರೆ. ಹಾಗೆಂದು, ದೇಶವನ್ನು ಕ್ರಮೇಣ ಉದ್ದಿಮೆಮಯವನ್ನಾಗಿ ಮಾಡಿಬಿಡುವುದು ಸುರಕ್ಷಿತವೇ? ಕೃಷಿಯು ಸೊರಗುತ್ತ ಹೋದಂತೆಲ್ಲ ದೇಶಕ್ಕೆ ಅಪಾಯವಲ್ಲವೆ? ಅಮೆರಿಕದಂತೆಯೋ, ದುಬೈ–ಸಿಂಗಪುರ್‌ಗಳಂತೆಯೋ ಆಗಲು ಭಾರತಕ್ಕೆ ಸಾಧ್ಯವೇ? ಸಾಧ್ಯವೆಂದಾದರೂ ಕೂಡ, ಅದು ಭವಿಷ್ಯತ್ತಿನಲ್ಲಿ ಅಭದ್ರವಲ್ಲವೆ? ಮೇಲಾಗಿ, ಉದ್ದಿಮೆಗಳು ಹೆಚ್ಚಿದಂತೆಲ್ಲ ಆರ್ಥಿಕ ಅಸಮಾನತೆ ಉಲ್ಬಣಿಸುವುದಿಲ್ಲವೆ? ಸಣ್ಣ ಉದ್ದಿಮೆಗಳಿಗೂ ಪ್ರೋತ್ಸಾಹವು, ಈ ಸಮಸ್ಯೆಗೆ ಪರಿಹಾರವಾಗಬಲ್ಲುದೆ? ಅಥವಾ, ಕೃಷಿ ಮತ್ತು ಉದ್ದಿಮೆ ಇವೆರಡರ ಸಮತೋಲನವು ಭಾರತದಂತಹ ರಾಷ್ಟ್ರಕ್ಕೆ ಅನಿವಾರ್ಯವೆ? ಚರ್ಚೆಗೆ ಎಷ್ಟೊಂದು ಪ್ರಶ್ನೆಗಳು!

ಒಂದು ಮಟ್ಟಿನವರೆಗೆ ಕೊಳ್ಳುಬಾಕತನ ನಡೆಯದೆ, ನಮ್ಮ ದೇಶದಂಥ, ಆರ್ಥಿಕ ಅಸಮಾನತೆಯಿರುವ ದೇಶಗಳಲ್ಲಿ ಬಡತನ ಕಡಿಮೆಯಾಗಲು ಸಾಧ್ಯವೇ? ಎಂದು ಗಿರೀಶರು ಕೇಳುತ್ತಾರೆ. ಏಕೆ ಸಾಧ್ಯವಿಲ್ಲ? ಹೇಗೆ ಸಾಧ್ಯ? ಗಾಂಧೀ ಪ್ರಣೀತ 'ಹಿಂದ್ ಸ್ವರಾಜ್'ದಿಂದ ಸಾಧ್ಯವಿಲ್ಲವೇ? 'ಹಿಂದ್ ಸ್ವರಾಜ್' ಈಗ ಅಪ್ರಸ್ತುತವೇ? ಜಾಗತೀಕರಣ ಮತ್ತು ಉದಾರೀಕರಣ ಪ್ರವಾಹದಲ್ಲಿ ಈಜಬೇಕಾದುದು ಭಾರತಕ್ಕಿಂದು ಅನಿವಾರ್ಯವೇ ಅಥವಾ 'ಹಿಂದ್ ಸ್ವರಾಜ್' ಈಗಲೂ ಸಾಧ್ಯವೇ? ಸಾಧ್ಯವೆಂದಾದಲ್ಲಿ, ಅದು ಇಂದಿಗೆ ಸೂಕ್ತ ಮಾರ್ಗವೇ? ಅಲ್ಲವೇ? ಇಲ್ಲಿ ಚರ್ಚೆಯ ಹರಹು ವಿಶಾಲವಾಗಿದೆ.

ದುಡಿಯುವ ಸಾಮರ್ಥ್ಯ ಇರುವವರು ಅಗತ್ಯಕ್ಕಿಂತ ಹೆಚ್ಚು ದುಡಿಯುವುದರಿಂದ ಇತರರ ಉದ್ಯೋಗಾವಕಾಶ ಕಸಿದಂತಾಗುವುದಿಲ್ಲವೇ? ಎಂದು ಒಂದು ಕಡೆ ಗಿರೀಶರು ಪ್ರಶ್ನಿಸುತ್ತಾರೆ. ಗಿರೀಶರ ಈ ಅಭಿಪ್ರಾಯಕ್ಕೆ ನನ್ನ ಸಂಪೂರ್ಣ ಸಹಮತವಿದೆ. ಆದರೆ, ಇಲ್ಲಿ ಆಗ ಇನ್ನೊಂದು ಪ್ರಶ್ನೆಯು ಪೆಡಂಭೂತವಾಗಿ ಎದ್ದೇಳುತ್ತದೆ! ಅವಶ್ಯಕತೆಯಿಲ್ಲದಿದ್ದರೂ ಗಂಡ–ಹೆಂಡತಿ ಇಬ್ಬರೂ (ಒಬ್ಬರೇ ದುಡಿಯುವ ಬದಲು) ದುಡಿಯುತ್ತಿದ್ದಾರೆನ್ನಿ.

ಯಾರಾದರೊಬ್ಬರು ದುಡಿಮೆ ಬಿಡಿ ಎಂದರೆ, ಅದು ಅವರ ಸ್ವಾತಂತ್ರ್ಯಕ್ಕೆ ಧಕ್ಕೆಯುಂಟು ಮಾಡಿದಂತಾಗುವುದಿಲ್ಲವೆ? ಹೆಂಡತಿ ದುಡಿಮೆಗೆ ಹೋಗುವ ಅಗತ್ಯವಿಲ್ಲ ಎಂದರೆ, ಅದು ಸ್ತ್ರೀ ಸ್ವಾತಂತ್ರ್ಯ ಮತ್ತು ಸ್ತ್ರೀ–ಪುರುಷ ಸಮಾನತೆಗಳಿಗೆ ಅಡ್ಡಿಯುಂಟುಮಾಡಿದಂತಲ್ಲವೆ? ಇದು ಸರಿಯೇ? ಭಾರತದಲ್ಲೀಗ ಸ್ತ್ರೀ ಸ್ವಾತಂತ್ರ್ಯ ಮತ್ತು ಸ್ತ್ರೀ–ಪುರುಷ ಸಮಾನತೆ ಹೆಚ್ಚು ಅಗತ್ಯವೋ ಅಥವಾ ಸಮಾಜದಲ್ಲಿ ಆರ್ಥಿಕ ಸಮಾನತೆಯೋ? ಬಿಸಿಬಿಸಿ ಚರ್ಚೆಗೆ ಅವಕಾಶ ಮಾಡಿಕೊಡುವ ವಿಷಯವಿದು!

ಹೀಗೆ, ಅನೇಕಾನೇಕ ಪ್ರಶ್ನೆಗಳನ್ನು ಹುಟ್ಟುಹಾಕಿ ಆಳವೂ ವಿಸ್ತಾರವೂ ಆದಂಥ ಚರ್ಚೆಗೆ ಅನುವು ಮಾಡಿಕೊಡುತ್ತದೆ ಗಿರೀಶರ ಲೇಖನ. ಸರ್ಕಾರಗಳ ನೀತಿ–ನಿರ್ಧಾರಗಳ ಕುರಿತು ಮತ್ತು ಮಾಧ್ಯಮಗಳ ಹೊಣೆಗಾರಿಕೆ ನಡೆಗಳ ಕುರಿತು ಕೂಡ ಚರ್ಚೆಗೆ ಪ್ರೇರೇಪಿಸುತ್ತವೆ ಗಿರೀಶದ್ವಯರ ಈ ಲೇಖನಗಳು.

ದೇಶದ ನೀತಿ ನಿರೂಪಣೆ ಮತ್ತು ನೀತಿ ನಿರ್ಧಾರಗಳಿಗೆ, ಇತ್ಯಾತ್ಮಕವೂ, ರಚನಾತ್ಮಕವೂ ಆದಂಥ ಕೊಡುಗೆ ನೀಡಬಲ್ಲ ಮತ್ತು ನೀಡಬೇಕಾದ ಮಾಧ್ಯಮಗಳು, ನಮ್ಮ ದೇಶದಲ್ಲಿ, ತಮ್ಮ ಸ್ವಾರ್ಥದಿಂದಲೋ, ಪಕ್ಷಪಾತದಿಂದಲೋ, ಟಿ.ಆರ್.ಪಿ. ದಾಹದಿಂದಲೋ, ಮೂರ್ಖತನದಿಂದಲೋ, ಒಣ ಪ್ರತಿಷ್ಠೆಯಿಂದಲೋ, ದುರಹಂಕಾರದಿಂದಲೋ, ಕುತ್ಸಿತಮತಿಯಿಂದಲೋ, ನಿವ್ವಳವಾಗಿ ನೇತ್ಯಾತ್ಮಕ ಕೊಡುಗೆ ನೀಡುತ್ತಿವೆಯೇ? ಈ 'ಮಹಾಪಶ್ನೆ'ಯೂ ಸೇರಿದಂತೆ, ಮೇಲಿನೆಲ್ಲ ಪ್ರಶ್ನೆಗಳೂ ಆಳವಾಗಿ ಮತ್ತು ವಿಸ್ತಾರವಾಗಿ ಚರ್ಚಿಸಲ್ಪಟ್ಟರೆ ಅದರಿಂದ ಸಮಾಜದಲ್ಲಿ ಜಾಗೃತಿಯುಂಟಾಗುವ ಮೂಲಕ ಈ ದೇಶಕ್ಕೆ ಒಳಿತಾದೀತು. ಹಾಗಾಗಲೆಂಬ ಆಶಯ ನನ್ನದು.

ಚಿಂತನ ಬಯಲು ಸಂಪುಟ 4 ಸಂಚಿಕೆ 4ರಲ್ಲಿ ಪ್ರಕಟವಾದ ಡಾ. ಮಾಧವ ಪೆರಾಜೆಯವರ 'ಬಾಗಿಲನು ತೆರೆದು' ಎಂಬ ಶೀರ್ಷಿಕೆಯ ಲೇಖನವು, ಮಂಗಳೂರು ವಿಶ್ವವಿದ್ಯಾಲಯದ ಕನಕದಾಸ ಸಂಶೋಧನ ಕೇಂದ್ರದ ಆಶ್ರಯದಲ್ಲಿ ನೀಡಿದ್ದ ವಿಶೇಷ ಉಪನ್ಯಾಸದ ಬರಹರೂಪ ಎಂಬ ಬಗ್ಗೆ ಕೇಂದ್ರದ ಸಂಯೋಜಕರಾದ ಡಾ. ಬಿ. ಶಿವರಾಮ ಶೆಟ್ಟಿಯವರು ಪತ್ರ ಬರೆದು ಈ ಮುಂದಿನಂತೆ ಸ್ಪಷ್ಟೀಕರಣ ನೀಡಿರುತ್ತಾರೆ. "...ಚಿಂತನ ಬಯಲಿನಲ್ಲಿ ಪ್ರಕಟವಾಗಿರುವ ಈ ಪ್ರಬಂಧದ ಪ್ರಕಟಣೆಯಲ್ಲಿ ಉಪನ್ಯಾಸ ನೀಡಿದ ಮತ್ತು ಪ್ರಬಂಧ ಸಿದ್ಧಪಡಿಸಿದ ಹಿನ್ನೆಲೆಗೆ ಸಂಬಂಧಪಟ್ಟ ಯಾವುದೇ ಮಾಹಿತಿಗಳು ಪ್ರಕಟಗೊಂಡಿಲ್ಲ. ಈ ಬಗ್ಗೆ ಲೇಖಕರಲ್ಲಿ ವಿಚಾರಿಸಿದಾಗ ಪ್ರಕಟಣೆಯ ಪೂರ್ವದಲ್ಲೇ ಈ ವಿವರಗಳನ್ನು ಪತ್ರಿಕೆಯ ಸಂಪಾದಕರಿಗೆ ತಿಳಿಸಿದ್ದು, ಪ್ರಕಟಿಸುವಂತೆ ಹೇಳಿದ್ದು, ಆದರೂ ಆ ವಿವರಗಳನ್ನು ಪತ್ರಿಕೆಯಲ್ಲಿ ಸಂಪಾದಕರು ಪ್ರಕಟಿಸಿಲ್ಲ ಎಂಬುದಾಗಿ ತಿಳಿಸಿರುತ್ತಾರೆ. ಈ ಬಗ್ಗೆ ಸಂಪಾದಕರು ಗಮನ ಹರಿಸಿ ಪತ್ರಿಕೆಯ ಮುಂದಿನ ಸಂಚಿಕೆಯಲ್ಲಿ ಈ ವಿವರಗಳನ್ನು ಪ್ರಕಟಿಸಬೇಕಾಗಿ ಕೋರಲಾಗಿದೆ" (ವಾಸ್ತವವಾಗಿ ಅದೇ ಸಂಚಿಕೆಯಲ್ಲಿ ಲೇಖನದ ಕೊನೆಗೆ ಪುಟ 42ರಲ್ಲಿ ಟಿಪ್ಪಣಿಗಳ ಕೊನೆಗೆ ಈ ಬಗ್ಗೆ ವಿವರ ನೀಡಲಾಗಿತ್ತು.)

ನವನಿಧಿ

ಡಿಆರ್‌ರ ಮೂಡು ಪಡು
(ಡಿ.ಆರ್. ನಾಗರಾಜ್ ಬರಹಗಳ ಬಗ್ಗೆ)
ಅಜಕ್ಕಳ ಗಿರೀಶ ಭಟ್
ಚಿಂತನ ಬಯಲು ಪ್ರಕಾಶನ
ರೂ.300

ಅ–ಸತ್ಯ ಅಥವಾ ಸತ್ಯ?
ಅಜಕ್ಕಳ ಗಿರೀಶ ಭಟ್
ಚಿಂತನ ಬಯಲು ಪ್ರಕಾಶನ
ರೂ.100

ಗಾಂಧಿ ಮತ್ತು ಗೂಂಡಾ (ನಾಟಕಗಳು)
ರಾಗಂ
ಸಿರಿವರ ಪ್ರಕಾಶನ
ರೂ.80

ನವೋತ್ಥಾನದ ಅಧ್ವರ್ಯುಗಳು
ಎಸ್.ಆರ್. ರಾಮಸ್ವಾಮಿ
ರಾಷ್ಟ್ರೋತ್ಥಾನ ಸಾಹಿತ್ಯ
ರೂ.200

ಭಾರತದಲ್ಲೊಂದು ಸುಂಕದ ಬೇಲಿ
ಆಂಗ್ಲ ಮೂಲ: ರಾಯ್ ಮ್ಯಾಕ್ಸ್‌ಹ್ಯಾಮ್
ಸಂಗ್ರಹ ರೂಪ:ಎಸ್.ಎಸ್.ನರೇಂದ್ರಕುಮಾರ್
ರಾಷ್ಟ್ರೋತ್ಥಾನ ಸಾಹಿತ್ಯ
ರೂ.125

ತನುವಿನೊಳಗೆ ಹುಸಿತುಂಬಿ(ಕಥಾ ಸಂಕಲನ)
ಪಿ.ಬಿ.ಪ್ರಸನ್ನ
ನೇಕಾರ ಪ್ರಕಾಶನ
ರೂ.90

ಗಾಂಧೀಜಿ ಜಾಡಿನಲ್ಲಿ
ನೌಖಾಲಿಗೊಂದು ಮರುಯಾತ್ರೆ
ಆಗುಂಬೆ ಎಸ್ ನಟರಾಜ್
ಹಂಸ ಪ್ರಕಾಶನ
ರೂ.300

ಬೆಳಕು (ಕವನ ಸಂಕಲನ)
ಹರೀಶ ಸುಲಾಯ ಒಡ್ಡಂಬೆಟ್ಟು
ಆಕೃತಿ ಆಶಯ ಪಬ್ಲಿಕೇಶನ್
ರೂ.50

ಬೆಳಗಿನ ನಲ್ನುಡಿ
ಡಾ. ಪಾದೇಕಲ್ಲು ವಿಷ್ಣು ಭಟ್ಟ
ಬ್ರಹ್ಮಶ್ರೀ ಮಿತ್ತೂರು ಪುರೋಹಿತ
ತಿಮ್ಮಯ್ಯ ಭಟ್ಟ ಸಂಪ್ರತಿಷ್ಠಾನ

ಅನಂತ ಕಥಾಸಂಚಯ
ವಾದಿರಾಜೇಂದ್ರ ಕೃಷ್ಣ
ಆಶಾ ಗ್ರಾಫಿಕ್ಸ್ ಪ್ರೈ.ಲಿ.
ರೂ.100

ಮಕ್ಕಳಿದ್ದಲ್ಲಿ ಮೋಜು– ಮಜಾ
ಎಂ.ಸಿ.ಅಂಟಿನ
ಹರ್ಷವರ್ಧಿನಿ ಪ್ರಕಾಶನ
ರೂ.90

ಶೂನ್ಯವಾದ ಮತ್ತು ಮಾಯಾವಾದ
ಉದಯಕುಮಾರ ಹಬ್ಬು
ವಿಜಯಲಕ್ಷ್ಮಿ ಪ್ರಕಾಶನ
ರೂ.100

ವಿದುರ ಪರ್ವ
ಆಂಗ್ಲಮೂಲ : ಉದಯಕುಮಾರ ಹಬ್ಬು
ಕನ್ನಡಕ್ಕೆ : ವಿ.ಗಣೇಶ್
ಮಂಗಳ ಪ್ರಕಾಶನ
ರೂ.160

- ಚಿಂತನ ಬಯಲು ತ್ರೈಮಾಸಿಕ ಪತ್ರಿಕೆಯನ್ನು ವೃತ್ತಿಪರವಾಗಿ ನಡೆಸಿಕೊಂಡು ಹೋಗಬೇಕೆಂಬುದು ನಮ್ಮ ಅಪೇಕ್ಷೆ.
- ಈ ಪತ್ರಿಕೆ ISSN ಮಾನ್ಯತೆ ಪಡೆದಿರುತ್ತದೆ. ISSN 2278–2192
- ಗಂಭೀರ ಚಿಂತನೆಯನ್ನೊಳಗೊಂಡ ಲೇಖನಗಳು, ವಿಮರ್ಶಾ ಲೇಖನಗಳು ಹಾಗೂ ಸಂಶೋಧನಾತ್ಮಕ ಲೇಖನಗಳನ್ನು ಪ್ರಕಟಣೆಗಾಗಿ ಆಹ್ವಾನಿಸುತ್ತಿದ್ದೇವೆ.
- ಇಲ್ಲಿ ಪ್ರಕಟವಾಗುವ ಲೇಖನಗಳ ಗುಣಮಟ್ಟವನ್ನು ಉಳಿಸಿ ಬೆಳೆಸುವುದಕ್ಕಾಗಿ, ಲೇಖನಗಳನ್ನು ಆಯಾ ಕ್ಷೇತ್ರಗಳಲ್ಲಿ ಪರಿಣತರಾದವರಿಂದ ಸಮೀಕ್ಷೆ ಮಾಡಿಸಿ, ಅಂದರೆ, ಅನಾಮಿಕ ಸಂಪಾದಕರಿಂದ ಅಭಿಪ್ರಾಯ ಪಡೆದು ಪ್ರಕಟಿಸಲಾಗುವುದು. ತಜ್ಞರ ಸೂಚನೆಗಳನ್ನು ಅನುಸರಿಸಿ, ಅವಶ್ಯವೆನಿಸಿದರೆ, ಸೂಕ್ತ ಪರಿಷ್ಕರಣೆಗಳನ್ನು ಮಾಡುವಂತೆ ಲೇಖಕರನ್ನು ಕೋರಲಾಗುವುದು.
- ಎಲ್ಲಾ ಪ್ರಕಟಿತ ಲೇಖನಗಳಿಗೆ ಸಂಭಾವನೆ ನೀಡಲಾಗುವುದು.
- ಲೇಖನಗಳಿಗೆ ಬಹಳ ಕಟ್ಟುನಿಟ್ಟಾದ ಪದಗಳ ಮಿತಿ ಇಲ್ಲ.
- ಯಾವುದೇ ಆಧಾರಗಳಿಲ್ಲದೆ, ಕೇವಲ ಹೇಳಿಕೆ, ಅಭಿಪ್ರಾಯ ರೂಪದ ಬರಹಗಳನ್ನು ದಯವಿಟ್ಟು ಕಳುಹಿಸುವುದು ಬೇಡ. ಅಗತ್ಯವಿರುವ ಕಡೆಗಳಲ್ಲಿ ಟಿಪ್ಪಣಿ, ಪರಾಮರ್ಶನ ಗ್ರಂಥಗಳು ಇತ್ಯಾದಿ ಮಾಹಿತಿಗಳನ್ನು ಲೇಖನಗಳು ಹೊಂದಿರಲಿ.
- ಲೇಖನಗಳು ಬೇರೆ ಕಡೆ ಪ್ರಕಟವಾಗಿರಬಾರದು. ಜಾಲಲೇಖ (ಬ್ಲಾಗ್)ಗಳಲ್ಲಿ ಪ್ರಕಟ ವಾಗಿದ್ದರೆ ವಿವರಗಳನ್ನು ನೀಡಬೇಕು. ಅನುವಾದಿತ ಲೇಖನಗಳಾದರೆ ಮೂಲದ ಬಗ್ಗೆ ಪೂರ್ಣ ವಿವರ ಹಾಗೂ ಮೂಲಲೇಖಕರ ಅನುಮತಿ ಇತ್ಯಾದಿ ತಾಂತ್ರಿಕ ಆವಶ್ಯಕತೆ ಗಳನ್ನು ಪೂರೈಸಿರಬೇಕು. ಲೇಖನಗಳನ್ನು ನುಡಿ ತಂತ್ರಾಂಶದಲ್ಲಿ ಮಿಂಚಂಚೆಯ ಮೂಲಕ ಮಾತ್ರ ಕಳುಹಿಸಬೇಕು. ಟಿಪ್ಪಣಿಗಳು ಲೇಖನದ ಕೊನೆಗೇ ಇರಬೇಕು.
- ಲೇಖಕರು ತಮ್ಮ ಲೇಖನಗಳ ಪ್ರತಿಗಳನ್ನು ಇಟ್ಟುಕೊಳ್ಳಬೇಕಾಗಿ ಕೋರಿಕೆ.
- ಲೇಖಕರು ತಮ್ಮ ಪೂರ್ಣ ಅಂಚೆ ವಿಳಾಸ, ಮಿಂಚಂಚೆ ವಿಳಾಸ ಹಾಗೂ ದೂರವಾಣಿ ಸಂಖ್ಯೆಗಳನ್ನು ಕಡ್ಡಾಯವಾಗಿ ನಮೂದಿಸಿರಬೇಕು.
- ಪುಸ್ತಕ ವಿಮರ್ಶೆ, ಸಮೀಕ್ಷೆಗಾಗಿ ಕೆಲವು ಪುಟಗಳನ್ನು ಮೀಸಲಿಡಲಾಗುವುದು. ಲೇಖಕರು, ಪ್ರಕಾಶಕರು ತಮ್ಮ ಪ್ರಕಟಿತ ಪುಸ್ತಕಗಳ ಎರಡು ಪ್ರತಿಗಳನ್ನು ವಿಮರ್ಶೆ ಸಮೀಕ್ಷೆಗಾಗಿ ಕಳುಹಿಸಿಕೊಡಬಹುದು.
- ಓದುಗರ ಪ್ರತಿಕ್ರಿಯೆಗಳನ್ನು ಸ್ವಾಗತಿಸುತ್ತೇವೆ.
- ಚಂದಾದಾರರಿಗೆ ವಂಚನೆಯಾಗುವಂತೆ ಪತ್ರಿಕೆಯನ್ನು ಅರ್ಧದಲ್ಲಿ ನಿಲ್ಲಿಸುವುದಿಲ್ಲ.
  ಸಂಪರ್ಕ ವಿಳಾಸ : ಸಂಪಾದಕರು, ಚಿಂತನ ಬಯಲು, ನಂ. 15–109
  ಮೊಡಂಕಾಪು ಅಂಚೆ, ಬಂಟ್ವಾಳ ತಾಲೂಕು, ದಕ್ಷಿಣ ಕನ್ನಡ – 574 219.
  ಮಿಂಚಂಚೆ : chinthanabaya0lu@gmail.com
  ದೂರವಾಣಿ : 9449772651

ಹೊಸ ಪ್ರಕಟಣೆಗಳು

ಸಾಹಿತ್ಯ ಅಕಾದೆಮಿ

ದಕ್ಷಿಣ ಪ್ರಾದೇಶಿಕ ಕಛೇರಿ, ಸೆಂಟ್ರಲ್ ಕಾಲೇಜ್ ಆವರಣ
ಡಾ. ಬಿ. ಆರ್. ಅಂಬೇಡ್ಕರ್ ವೀದಿ, ಬೆಂಗಳೂರು – 560 001
ದೂ : 22245152 / ಫ್ಯಾಕ್ಸ್ : 22121932
email : sahityakademi@gmail.com

RNI Reg No. : KARKAN /2012/49251

CHINTHANA BAYALU A Peer Reviewed Journal ISSN 2278-2192
Kannada Quarterly, Volume 5, Issue 1, July - September 2016
Edited, Published, Printed & Owned by
Reshma G. Bhat
Door No. 15-109, Modankapu Post,
Bantwal Taluk, Dakshina Kannada 574 219.
Printed at
Aakrithi Prints
Light House Hill Road, Mangalore - 575 001

Pages : 64